✆ Off : 26613091 / 26607167
42103360 / 26761877
Email : kea@kea.co.in
Web : www.kea.co.in

# KARNATAKA EMPLOYERS' ASSOCIATION

NO.74, 2nd FLOOR, SHANKARA ARCADE, VANIVILAS ROAD, BASAVANAGUDI
BENGALURU - 560 004
Reg. No. TU 507 / 20-3-1962

Date : 05-03-2018

CIRCULAR No.15/2018

To
All Members of the Association

## REVISION OF MINIMUM WAGES - 6 MORE NOTIFICATIONS GAZETTED.

1. The Government of Karnataka, by a separate Notification dated 30.12.2017 revised the Minimum Wages payable for 37 Scheduled Employments. The names of 37 Scheduled Employments and the salient features was circulated vide KEA Circular No.3/2018 dated 18.01.2018.

2. The Notifications dated 30.12.2017, in respect of the following 6 Scheduled Employments, have been published in Karnataka Gazette dated 01.03.2018.

| Sl.No. | Scheduled Industry |
|---|---|
| 01 | Cotton Ginning and Pressing Manufacturing |
| 02 | Employment not covered in any of the Scheduled Employment) |
| 03 | Metal rolling & re-rolling (Non –Ferrous) |
| 04 | Rubber Products (Including Foam & Coir Rubberised Product Industry) |
| 05 | Spinning Mill Industry |
| 06 | Woodwork including Carpentry and Saw Mill Industry. |

**3. Date from which revised minimum wages are to be paid:**

3.1 Section 12 of the Minimum Wages Act provides that the wage where in respect of any scheduled employment notifications under section-5 is in force, the employers shall pay to every employee engaged in a Scheduled Employment under him, wages at a rate not less than the minimum rate of wages fixed by such notification for that class of employees in that employment without any deduction except as

may be authorized within such time and subject to such conditions as may be prescribed.

3.2 Section 5(2) of the Minimum Wages inter alia provides that the Appropriate Government shall by notification in the Gazette, fix or as the case may be revise the minimum rates of wage in respect of each scheduled employment, and unless such notification otherwise provides, it shall come into force on expiry of 3 months from the date of its issue.

3.3 All the Notifications dated 30.12.2017 contains the following clause:

"**the State Government, in exercise of the powers conferred under section 3(1)(b), read with Section 5(1)(b) of the Minimum Wages Act, 1948, in suppression of the earlier connected Notifications, the minimum wages have been revised vide this Notification, as indicated in the minimum wages table below to the employees, working in the establishment coming under the purview of the scheduled employment ….industry all over the State of Karnataka, with effect from the date of issue of this Notification. All employers concerned are bound to pay the revised Minimum Wage rates under Section 12 of the Minimum Wages Act, 1948".**

3.4 The provisions of Sections 5, 12, of the Minimum Wages Act read along with the above clause in the Minimum Wages Notification would clearly shows that revised minimum wages shall have to be paid effective from the date of notification i.e., 30.12.2017. Accordingly, the revised minimum wages in respect of the above Scheduled Employments shall be payable from 30.12.2017 itself.

4. With the above Notifications, out of 37 Scheduled Employments, in respect of which separate Notifications were issued on 30.12.2017, the Notification in respect of 30 Scheduled Employments stand Gazetted. As and when the remaining 07 Scheduled Employments are published in the Karnataka Gazette, the same will be circulated for information of the Members.

5. The above 06 Gazette Notifications have been uploaded on the website of KEA. Members may download the said notifications.

**for KARNATAKA EMPLOYERS' ASSOCIATION**

**sd/-**
**(B.C. PRABHAKAR)**
**PRESIDENT**

## ಕಾರ್ಮಿಕ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ಕಾಇ 41 ಎಲ್‌ಎಂಡಬ್ಲ್ಯೂ 2017, ಬೆಂಗಳೂರು, ದಿನಾಂಕ: 30-12-2017**

ಕರ್ನಾಟಕ ರಾಜ್ಯದಾದ್ಯಂತ **"ರಬ್ಬರ್ ಪ್ರಾಡಕ್ಟ್ಸ್ (ಫೋಮ್ ಮತ್ತು ಕಾಯರ್ ರಬ್ಬರೈಸ್ಡ್ ಪ್ರಾಡಕ್ಟ್ಸ್ ಸೇರಿದಂತೆ [Rubber Products (Including Foam and Coir Rubberised Products) Industry]"** ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಅನ್ವಯವಾಗುವ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲುದ್ದೇಶಿಸಿ, ರಾಜ್ಯ ಸರ್ಕಾರವು ತನಗೆ ಕನಿಷ್ಠ ವೇತನ ಕಾಯ್ದೆ, 1948 ರ ಕಲಂ 5 (1)(ಬಿ) ರ ಪ್ರಾವಧಾನದನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರಡು ಅಧಿಸೂಚನೆ ಸಂಖ್ಯೆ: ಕಾಇ 41 ಎಲ್‌ಎಂಡಬ್ಲ್ಯೂ 2017, ಬೆಂಗಳೂರು ದಿನಾಂಕ: 28-04-2017 ಅನ್ನು ಕರ್ನಾಟಕ ರಾಜ್ಯಪತ್ರದ ಭಾಗ 4ಎ ಭಾಗ ಪುಟ ಸಂಖ್ಯೆ: 4211 ರಿಂದ 4216 ರಲ್ಲಿ ದಿನಾಂಕ: 08 ನೇ ಜೂನ್ 2017 ರಂದು ಪ್ರಕಟಿಸಿರುತ್ತದೆ ಹಾಗೂ ತನ್ಮೂಲಕ ಈ ಕರಡು ಅಧಿಸೂಚನೆಯಿಂದ ಬಾಧಿತರಾಗುವ ಹಾಗೂ ಸಂಬಂಧವಿರುವ ವ್ಯಕ್ತಿಗಳು ಹಾಗೂ ಅವರನ್ನು ಪ್ರತಿನಿಧಿಸುವ ಸಂಘ-ಸಂಸ್ಥೆಗಳ ಗಮನಕ್ಕೆ ವಿಷಯವನ್ನು ರಾಜ್ಯ ಸರ್ಕಾರವು ತಂದಿರುತ್ತದೆ. ರಾಜ್ಯ ಸರ್ಕಾರವು ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸಲು ಎರಡು(02) ತಿಂಗಳ ಕಾಲಾವಕಾಶವನ್ನು ಸಂಬಂಧಿಸಿದವರೆಲ್ಲರಿಗೂ ಕಲ್ಪಿಸಿರುತ್ತದೆ. ಸದರಿ ಅವಧಿಯಲ್ಲಿ ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಹಲವು ನಿರ್ಧಿಷ್ಟವಾದ ಹಾಗೂ ಸಾಮಾನ್ಯವಾದ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸಂಬಂಧಿಸಿದವರಿಂದ ರಾಜ್ಯ ಸರ್ಕಾರವು ಸ್ವೀಕರಿಸಿರುತ್ತದೆ.

ರಾಜ್ಯ ಸರ್ಕಾರವು ತನ್ನ ಪತ್ರ ಸಂಖ್ಯೆ: ಕಾಇ 02 ಎಲ್‌ಎಂಡಬ್ಲ್ಯೂ 2017 ದಿನಾಂಕ: 08-11-2017 ರ ಮೂಲಕ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಸಭೆಯನ್ನು ಕರೆದು ಸದರಿ ಕರಡು ಅಧಿಸೂಚನೆ ಬಗ್ಗೆ ಸಲಹೆಗಳನ್ನು ನೀಡುವಂತೆ ಸೂಚಿಸಲಾಗಿ, ದಿನಾಂಕ: 06-12-2017 ರಂದು ನಿಯಮಾನುಸಾರ ನಡೆದ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಸಭೆಯಲ್ಲಿ ಮೇಲ್ಕಂಡ ಕರಡು ಅಧಿಸೂಚನೆ ಹಾಗೂ ಅದಕ್ಕೆ ಸಂಬಂಧಿಸಿದಂತೆ ಸ್ವೀಕರಿಸಲಾದ ಸಲಹೆಗಳು ಹಾಗೂ ಆಕ್ಷೇಪಣೆಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸದರಿ ಮಂಡಳಿಯಲ್ಲಿ ಸರ್ಕಾರದ ಪ್ರಸ್ತಾವನೆಯನ್ನು ಸುಧೀರ್ಘವಾಗಿ ಸಮಾಲೋಚಿಸಿ **ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಮಂಡಳಿಯು ಸರ್ಕಾರಕ್ಕೆ ತನ್ನ ಶಿಫಾರಸ್ಸನ್ನು ನೀಡಿರುತ್ತದೆ.**

ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯು ದಿ: 06-12-2017 ರ ಸಭೆಯಲ್ಲಿ ನೀಡಿರುವ ಸಲಹೆಗಳನ್ನು ಹಾಗೂ ಸಂಬಂಧಿಸಿದ ಇತರೆ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿರುವ ರಾಜ್ಯ ಸರ್ಕಾರವು, ತನಗೆ ಕನಿಷ್ಠ ವೇತನ ಕಾಯ್ದೆ, 1948 ರ ಕಲಂ 3(1)(ಬಿ) ಸಹವಾಚಿತ ಕಲಂ 5 (1)(ಬಿ) ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ತತ್ಸಂಬಂಧದ ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಕರ್ನಾಟಕ ರಾಜ್ಯದಾದ್ಯಂತ **"ರಬ್ಬರ್ ಪ್ರಾಡಕ್ಟ್ಸ್ (ಫೋಮ್ ಮತ್ತು ಕಾಯರ್ ರಬ್ಬರೈಸ್ಡ್ ಪ್ರಾಡಕ್ಟ್ಸ್) ಸೇರಿದಂತೆ [Rubber Products (Including Foam and Coir Rubberised Products) Industry]"** ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ **ಈ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ** ಈ ಕೆಳಕಂಡ ಕನಿಷ್ಠ ವೇತನ ದರಗಳ ಕೋಷ್ಟಕದಲ್ಲಿರುವಂತೆ, ಕನಿಷ್ಠ ವೇತನ ದರಗಳನ್ನು ಈ ಅಧಿಸೂಚನೆಯ ಮೂಲಕ ಪರಿಷ್ಕರಿಸಲಾಗಿರುತ್ತದೆ. ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಪಾವತಿಸಲು, ಕನಿಷ್ಠ ವೇತನ ಕಾಯ್ದೆ-1948 ರ ಕಲಂ 12 ರನ್ವಯ ಸಂಬಂಧಿಸಿದ ಎಲ್ಲಾ ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

**ಕನಿಷ್ಠ ವೇತನ ದರಗಳ ಕೋಷ್ಟಕ**

**"ರಬ್ಬರ್ ಪ್ರಾಡಕ್ಟ್ಸ್ (ಫೋಮ್ ಮತ್ತು ಕಾಯರ್ ರಬ್ಬರೈಸ್ಡ್ ಪ್ರಾಡಕ್ಟ್ಸ್ ಸೇರಿದಂತೆ)**

**[Rubber Products (Including Foam and Coir Rubberised Products) Industry]"**

| ಕೆಲಸದ ವರ್ಗೀಕರಣ | ವಲಯ-1 | | ವಲಯ-2 | | ವಲಯ-3 | | ವಲಯ-4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| <u>ಅತಿ ಕುಶಲ ಕಾರ್ಮಿಕರು</u><br>ಇಂಜಿನಿಯರ್,<br>ಫೋರ್‌ಮನ್, ಟೆಕ್ನಿಕಲ್<br>ಸೂಪರ್‌ವೈಸರ್<br>ಟೈರ್‌ಇನ್ಸ್‌ಪೆಕ್ಟರ್<br>ಇತರೆ ಅತಿಕುಶಲ ಕೆಲಸಕ್ಕೆ | **15423-40** | **593-21** | **14688-95** | **564-96** | **13989-48** | **538-06** | **13323-31** | **512-44** |
| <u>ಕುಶಲ ಕಾರ್ಮಿಕರು</u><br>ಕೆಮಿಸ್ಟ್<br>ಆಪರೇಟರ್<br>ವೈರ್‌ಮನ್<br>ಎಲೆಕ್ಟ್ರೀಷಿಯನ್<br>ಮೆಕ್ಯಾನಿಕ್-ಕಮ್‌ಆಪರೇಟರ್<br>ಬಾಯ್ಲರ್‌ಅಟೆಂಡೆಂಟ್<br>ಟೆಕ್ನಿಷಿಯನ್ , ಟರ್ನರ್ | **14021-27** | **539-28** | **13353-59** | **513-60** | **12717-71** | **489-14** | **12112-10** | **465-85** |

| ಕೆಲಸದ ವರ್ಗೀಕರಣ | ವಲಯ-1 | | ವಲಯ-2 | | ವಲಯ-3 | | ವಲಯ-4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| ವೆಲ್ಡರ್, ಮಿಕ್ಸಿಂಗ್ ಮಿಲ್ ವರ್ಕರ್ಸ್ಎಕ್ಸ್ಟ್ರೂಷನ್ ವರ್ಕರ್ಸ್, ಫಿಟ್ಟರ್, ರೋಲರ್‌ಮನ್ ಮೆಕ್ಯಾನಿಕ್, ಬಾಯ್ಲರ್ ಸ್ಮಿತ್, ಫೋಮ್ ವಿಭಾಗ ಸೇರಿದಂತೆ ಮೆಷಿನ್ ಆಪರೇಟರ್ಸ್, ಬ್ಲಾಕ್ ಸ್ಮಿತ್, ಕಾರ್ಪೆಂಟರ್ಸ್ ಮೆಕ್ಯಾನಿಸ್ಟ್ ವಲ್ಕನೈಸರ್ಸ್, ಮೌಲ್ಡರ್ಸ್, ಟೈರ್‌ಎಕ್ಸಾಮಿನರ್ಸ್, ಬಫರ್ಸ್ ಮತ್ತು ಸಲ್ಯೂಷನರ್ಸ್‌ಹಾಗೂ ಟೈರ್‌ರಿಟ್ರೇಡಿಂಗ್ ವಿಭಾಗ ಸೈಕಲ್‌ರಿಕ್ಷಾಟೈರ್ ಫಾರ್ಮಿಂಗ್ ಕೆಲಸಗಾರರು ಇತರೆ ಕುಶಲ ಕೆಲಸಕ್ಕೆ | | | | | | | | |
| **ಅರೆ ಕುಶಲ ಕಾರ್ಮಿಕರು** ಸಹಾಯಕ ಮೆಕ್ಯಾನಿಕ್, ಸಹಾಯಕ ಆಪರೇಟರ್, ಕಂಡಕ್ಟರ್, ಫಾರೆಸ್ಟರ್, ತಾಂತ್ರಿಕ ಸಹಾಯಕರು, ರಬ್ಬರ್ ಚಪ್ಪಲಿ ತಯಾರಕರು, ವರ್ಕ್‌ಶಾಪ್ ಅಟೆಂಡರ್ಸ್, ವಲ್ಕನೈಸರ್ಸ್ ಹಾಗೂ ವಲ್ಕನೈಸಿಂಗ್ ಪ್ರೆಸ್‌ಗಳಲ್ಲಿನ ಕೆಲಸಗಾರರು, ಮೌಲ್ಡಿಂಗ್ ಕೆಲಸಗಾರರು ಹಾಗೂ ಮೌಲ್ಡಿಂಗ್ ಪ್ರೆಸ್ ಆಪರೇಟರ್ಸ್ ಚಪ್ಪಲಿಗಳನ್ನು ಟ್ರಿಮ್ ಮತ್ತು ಅಸೆಂಬಲ್ ಮಾಡುವ ಕೆಲಸಗಾರರು ಟೈರ್ ಮತ್ತು ಟ್ಯೂಬ್‌ಗಳ ತಯಾರಿಕೆಗಳ ಕೆಲಸಗಾರರು, ಕಟಿಂಗ್ ಪ್ರೆಸ್ ವರ್ಕರ್ಸ್, ಲ್ಯಾಟಿಕ್ಸ್, ಫೋಮ್ ವಿಭಾಗದ ಫ್ಯಾಬ್ರಿಕೇಟರ್ಸ್, ಸೈಕಲ್ ಟೈರ್ ಕೇಸ್ ಫಾರ್ಮಿಂಗ್ ಪಾಲಿಥಿನ್ ಪ್ಯಾಕಿಂಗ್‌ನಲ್ಲಿ ಹೀಟ್ ಸೀಲಿಂಗ್ ಮಾಡುವ ಆಪರೇಟರ್ಸ್, ಪ್ರಯೋಗ ಶಾಲೆಗಳಲ್ಲಿ ರಾಸಾಯನಿಕಗಳನ್ನು ತೂಕ ಮಾಡುವ ಕೆಲಸಗಾರರು, ರಿಟ್ರೇಡಿಂಗ್ ವಿಭಾಗದಲ್ಲಿ | 12746–61 | 490–25 | 12139–63 | 466–91 | 11561–55 | 444–68 | 11011–00 | 423.50 |

| ಕೆಲಸದ ವರ್ಗೀಕರಣ | ವಲಯ-1 | | ವಲಯ-2 | | ವಲಯ-3 | | ವಲಯ-4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| ಟೈರುಗಳನ್ನು ಹೊಲಿಯುವವರು, ಇತರೆ ಅರೆ ಕುಶಲ ಕೆಲಸಕ್ಕೆ ಉತ್ಪನ್ನಗಳಿಗೆ ಅಂತಿಮರೂಪ ನೀಡುವ ಕೆಲಸಗಾರರು. | | | | | | | | |
| **ಅಕುಶಲ ಕಾರ್ಮಿಕರು** ಹೆಲ್ಪರ್, ಪ್ಯಾಕರ್ಸ್, ಹೆಡ್‌ಲೋಡ್ ಕೆಲಸಗಾರ, ವಾಚ್‌ಮನ್, ಮಜ್ದೂರ್, ಫೈಬರ್ ಡ್ರೈಯಿಂಗ್ ವರ್ಕರ್ಸ್ ಮತ್ತು ಫೈಬರ್ ರಬ್ಬರ್ ಉದ್ದಿಮೆಯಲ್ಲಿನ ಕೂಲಿಗಳು, ಸಾಮಾನುಗಳನ್ನು ಸಾಗಾಣಿಕೆ ಮಾಡುವ ಕೆಲಸಗಾರರು ಸಂಖ್ಯೆಯನ್ನು ಗುರುತು ಮಾಡುವವರು, ರಬ್ಬರ್‌ನ್ನು ತುಂಡು ಮಾಡುವ ಕೆಲಸಗಾರರು, ತೂಕ ಮಾಡುವ ಕೆಲಸಗಾರರು, ಯಂತ್ರ ವಿಭಾಗದ ಸಹಾಯಕರು (ಸರಕುಗಳನ್ನು ಎತ್ತುವ ಮತ್ತು ಸಾಗಿಸುವವರು) ರವಾನೆ ಕೆಲಸಗಾರ ಡ್ರೈಯಿಂಗ್ ಕೊಠಡಿಯ ಅಟೆಂಡರ್ಸ್ ಮತ್ತು ಟೈರ್ ರಿಟ್ರೇಡಿಂಗ್ ವಿಭಾಗದಲ್ಲಿ ಶುಚಿ ಮಾಡುವವರು ಇತರೆ ಅಕುಶಲ ಕೆಲಸಕ್ಕೆ | 11587-83 | 445-69 | 11036-03 | 424-46 | 10510-50 | 404-25 | 10010-00 | 385-00 |

**ಕಛೇರಿ ಸಿಬ್ಬಂದಿಗಳು ಮತ್ತು ಚಾಲಕರು**

| ಹುದ್ದೆಗಳ ವಿವರ | ವಲಯ-1 | | ವಲಯ-2 | | ವಲಯ-3 | | ವಲಯ-4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| ಮ್ಯಾನೇಜರ್, ಪರ್ಸನಲ್ ಆಫೀಸರ್ ಮಾರ್ಕೆಟಿಂಗ್ ಮ್ಯಾನೇಜರ್/ ಕಛೇರಿ ಮೇಲ್ವಿಚಾರಣೆಯ ತತ್ಸಮಾನ ಹುದ್ದೆ. | 16423-00 | 631-00 | 15688-00 | 603-38 | 14989-00 | 576-50 | 14323-00 | 550-88 |
| ಅಸಿಸ್ಟೆಂಟ್ ಮ್ಯಾನೇಜರ್ ಅಸಿಸ್ಟೆಂಟ್ ಪರ್ಸನಲ್ ಮ್ಯಾನೇಜರ್, ಸೀನಿಯರ್ ಅಕೌಂಟೆಂಟ್ ಮತ್ತು ತತ್ಸಮಾನ ಹುದ್ದೆ. | 15423-40 | 593-21 | 14688-95 | 564-96 | 13989-48 | 538-06 | 13323-31 | 512-44 |

| ಹುದ್ದೆಗಳ ವಿವರ | ವಲಯ-1 | | ವಲಯ-2 | | ವಲಯ-3 | | ವಲಯ-4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| ಹಿರಿಯ ಗುಮಾಸ್ತ, ಕ್ಯಾಷಿಯರ್, ಜಡ್ಜ್‌ಮೆಂಟ್ ರೈಟರ್, ಸ್ಟೆನೋಗ್ರಾಫರ್, ಸ್ಟೋರ್ ಕೀಪರ್, ರಿಸೆಪ್ಷನಿಸ್ಟ್, (ಸ್ವಾಗತಗಾರರು) ಮತ್ತು ತತ್ಸಮಾನ ಹುದ್ದೆ. | 14021–27 | 539–28 | 13353–59 | 513–60 | 12717–71 | 489–14 | 12112–10 | 465–85 |
| ಕಿರಿಯ ಗುಮಾಸ್ತ , ಬುಕಿಂಗ್ ಗುಮಾಸ್ತ, ಕಂಪ್ಯೂಟರ್ ಆಪರೇಟರ್, ಟೈಪಿಸ್ಟ್, ಟೆಲಿಫೋನ್ ಆಫರೇಟರ್, ಡಾಟಾ ಎಂಟ್ರೀ ಆಪರೇಟರ್ ಮತ್ತು ತತ್ಸಮಾನ ಹುದ್ದೆ. | 12746–61 | 490–25 | 12139–63 | 466–91 | 11561–55 | 444–68 | 11011–00 | 423–50 |
| ಜವಾನ, ವಾಚ್‌ಮನ್, ಲಿಫ್ಟ್ ಆಪರೇಟರ್, ಆಫೀಸ್ ಬಾಯ್, ಅಟೆಂಡರ್, ಹೆಲ್ಪರ್/ಸಹಾಯಕ, ದಲಾಯತ್, ಮಜ್ದೂರ್, ಸ್ವೀಪರ್ ಮತ್ತು ತತ್ಸಮಾನ ಹುದ್ದೆ. | 11587–83 | 445–69 | 11036–03 | 424–46 | 10510–50 | 404–25 | 10010–00 | 385–00 |
| ಹೆವಿ ವೆಹಿಕಲ್ ಡ್ರೈವರ್, ಟ್ರ್ಯಾಕ್ಟರ್ ಡ್ರೈವರ್ ಬಹು ಆಕ್ಸೆಲ್ ಮತ್ತು ಘನ ವಾಹನ ಚಾಲಕರು, ಅರ್ಥ್ ಮೂವರ್ಸ್ ಚಾಲಕರು, ಕ್ರೇನ್ ಜೋಡಿಸಿದ ವಾಹನ ಚಾಲಕರು, ಟ್ರಾಕ್ಟರ್ ಚಾಲಕರು, ರೋಡ್ ರೋಲರ್ ಮತ್ತು ರಸ್ತೆ ನಿರ್ಮಾಣ ಕಾಮಗಾರಿ ವಾಹನಗಳ ಚಾಲಕರು | 14021–27 | 539–28 | 13353–59 | 513–60 | 12717–71 | 489–14 | 12112–10 | 465–85 |
| ಕಾರ್ ಡ್ರೈವರ್ ಜೀಪ್ ಡ್ರೈವರ್ ಲಘು ವಾಹನ ಚಾಲಕರು | 12746–61 | 490–25 | 12139–63 | 466–91 | 11561–55 | 444–68 | 11011–00 | 423–50 |
| ಟಂ ಟಂ, ತ್ರಿಚಕ್ರ ವಾಹನ ಚಾಲಕರು | 11587–83 | 445–69 | 11036–03 | 424–46 | 10510–50 | 404–25 | 10010–00 | 385–00 |

ಮೇಲ್ಕಂಡ ಕೋಷ್ಟಕದಲ್ಲಿಯ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ರಾಜ್ಯ ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನಿಗದಿಪಡಿಸಿದ್ದು, ಈ ಎಲ್ಲಾ ಷರತ್ತುಗಳನ್ನು ಯಥಾವತ್ತಾಗಿ ಸಂಬಂಧಿಸಿದ ಉದ್ಯೋಗದಾತರು ಪಾಲಿಸಲು ಬಾಧ್ಯಸ್ಥರಿರುತ್ತಾರೆ;

1. **ವ್ಯತ್ಯಾಸವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರ ಹಾಗೂ ಪಾವತಿ:** ನಿಗಧಿತ ಕನಿಷ್ಠ ವೇತನಕ್ಕನುಗುಣವಾಗಿ ಪಾವತಿಸಬೇಕಾದ ವ್ಯತ್ಯಸ್ಥವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಉದ್ಯೋಗದಾತರು ಮಾಡತಕ್ಕದ್ದು. ಹಿಂದಿನ ಕ್ಯಾಲೆಂಡರ್ ವರ್ಷದ ಹನ್ನೆರಡು (12) ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ತುಟ್ಟಿಭತ್ಯೆಯನ್ನು ಪ್ರತಿ ವರ್ಷದ ಏಪ್ರಿಲ್ ಮೊದಲನೇ ದಿನಾಂಕದಿಂದ ಅನ್ವಯವಾಗುವಂತೆ ಉದ್ಯೋಗದಾತರು ಪ್ರತಿ ವರ್ಷ ಲೆಕ್ಕಾಚಾರ ಮಾಡಿ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು. ಆದುದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2016 ರಿಂದ ಡಿಸೆಂಬರ್ 2016ರ) ಸರಾಸರಿ ಆಧಾರದ ಮೇಲೆ 2017 ಏಪ್ರಿಲ್ ಒಂದು (1) ನೇ ತಾರೀಖಿನಿಂದ ಜಾರಿಗೆ ಬರುತ್ತದೆ. ಗ್ರಾಹಕ ಬೆಲೆ ಸೂಚ್ಯಾಂಕ 6537 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ ನಾಲ್ಕು (4) ಪೈಸೆಯಂತೆ ಈ ಕೆಳಕಂಡ ವಿಧಾನದನ್ವಯ ಲೆಕ್ಕಾಚಾರ ಮಾಡಿ ತುಟ್ಟಿ ಭತ್ಯೆಯನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

**ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:-** ಮಾಸಿಕ ತುಟ್ಟಿಭತ್ಯೆ ಹಾಗೂ ದಿನದ ತುಟ್ಟಿಭತ್ಯೆಯನ್ನು ಕೆಳಕಂಡ ಸೂತ್ರಗಳನ್ವಯ ಕ್ರಮವಾಗಿ ಲೆಕ್ಕಾಚಾರಮಾಡತಕ್ಕದ್ದು;

**ಅ) ಮಾಸಿಕ ವೇತನವನ್ನು ಪಡೆಯುವವರು:-** ಮಾಸಿಕ ವೇತನ ಪಡೆಯುವ ಕಾರ್ಮಿಕರಿಗೆ ಈ ಕೆಳಕಂಡ ಸೂತ್ರದನ್ವಯ ತುಟಿಭತ್ಯೆಯನ್ನು ಲೆಕ್ಕ ಮಾಡತಕ್ಕದ್ದು ಹಾಗೂ ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸಿ ಪಾವತಿಸತಕ್ಕದ್ದು.

**ಮಾಸಿಕ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x ಮೂವತ್ತು (30) ದಿನಗಳು**

**ಆ) ದಿನಗೂಲಿ ವೇತನ ಪಡೆಯುವವರು :-** ದಿನಗೂಲಿ ಪಡೆಯುವ ಕಾರ್ಮಿಕರಿಗೆ ಮಾಸಿಕ ಕನಿಷ್ಠ ವೇತನ ದರವನ್ನು ಇಪ್ಪತ್ತಾರು (26) ದಿನಗಳಿಂದ ವಿಭಾಗಿಸಿ, {ನಾಲ್ಕು (4) ವಾರದ ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ} ಈ ಕೆಳಕಂಡ ಸೂತ್ರದನ್ವಯ ಲೆಕ್ಕ ಮಾಡತಕ್ಕದ್ದು. ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ ಅರ್ಹರಾದ ಕಾರ್ಮಿಕರಿಗೆ ಪಾವತಿಸತಕ್ಕದ್ದು.

**ದಿನದ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x** ಮೂವತ್ತು (30) ದಿನಗಳು/ ಇಪ್ಪತ್ತಾರು (26)

2. **ಸೇವಾ ಹಿರಿತನ ಪರಿಗಣನೆ ಭತ್ಯೆ:** ಈ ಅಧಿಸೂಚನೆ ಜಾರಿಗೆ ಬಂದ ದಿನಾಂಕದಿಂದ ಯಾವುದೇ ಕಾರ್ಮಿಕನು ಒರ್ವ ಉದ್ಯೋಗದಾತರ ಸಂಸ್ಥೆಯಲ್ಲಿ ಅಥವಾ ಮಾಲೀಕರ ಅಧೀನದಲ್ಲಿ ನಿರಂತರ ಹತ್ತು (10) ವರ್ಷಗಳ ಸೇವೆಯನ್ನು ಸಲ್ಲಿಸಿದಲ್ಲಿ, ತನ್ನ ಪೂರ್ಣಗೊಳಿಸಿದ ಪ್ರತಿ ಹತ್ತು ವರ್ಷದ ಮೇಲ್ಪಟ್ಟ ಸೇವೆಗೆ ಅನುಗುಣವಾಗಿ ಆಯಾ ಕಾರ್ಮಿಕ ವರ್ಗಕ್ಕೆ ನಿಗದಿಪಡಿಸಿರುವ ಒಟ್ಟು ಮಾಸಿಕ ಕನಿಷ್ಠ ಮೂಲ ವೇತನದ ಮೇಲೆ ವರ್ಷವೊಂದರ ಸೇವೆಗೆ ಶೇಕಡಾ ಒಂದು (1) ರಷ್ಟು ಮೊತ್ತವನ್ನು ಸೇವಾ ಹಿರಿತನ ಪರಿಗಣನೆ ಭತ್ಯೆಯನ್ನಾಗಿ ಗರಿಷ್ಠ ಶೇಕಡಾ ಹತ್ತು (10) ರ ಮೇಲ್ಮಿತಿಗೆ ಒಳಪಟ್ಟು ಪಡೆಯಲು ಕಾರ್ಮಿಕರು ಅರ್ಹರಿರುತ್ತಾರೆ. ಪರಂತು ಈ ಅಧಿಸೂಚನೆ ಜಾರಿಗೆ ಬಂದ ದಿನಾಂಕಕ್ಕೆ ಇಪ್ಪತ್ತು (20) ವರ್ಷಕ್ಕಿಂತ ಹೆಚ್ಚಿನ ಸೇವೆಯನ್ನು ಸಲ್ಲಿಸಿದ ಕಾರ್ಮಿಕರಿದ್ದಲ್ಲಿ ಒಂದು ಸಲಕ್ಕೆ ಮಾತ್ರ ಸೇವಾ ಹಿರಿತನ ಮೊತ್ತವನ್ನು ಆಯಾ ಕಾರ್ಮಿಕ ವರ್ಗಕ್ಕೆ ನಿಗಧಿಪಡಿಸಿರುವ ಒಟ್ಟು ಮಾಸಿಕ ಕನಿಷ್ಠ ವೇತನದ ಶೇ 10 ರ ಗರಿಷ್ಠ ಮಿತಿಗೆ ಒಳಪಟ್ಟು ಪಡೆಯಲು ಅರ್ಹರಿರುತ್ತಾರೆ. ಈ ಸೇವಾ ಹಿರಿತನ ಪರಿಗಣನೆ ಭತ್ಯೆಯ ಮೊತ್ತವು ಮೇಲ್ಕಂಡ ಷರತ್ತು ಸಂಖ್ಯೆ 1 ರಲ್ಲಿ ವಿಧಿಸಿದ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು ಹೊರತುಪಡಿಸಿ, ಮೂಲ ವೇತನದ ಆಧಾರದಲ್ಲಿ ನಿಗದಿಪಡಿಸಿದ 'ಸೇವಾ ಹಿರಿತನದ ಪರಿಗಣನೆ ಭತ್ಯೆಯ ಮೊತ್ತ'ವಾಗಿರುತ್ತದೆ.

***ವಿವರಣೆ:*** "ನಿರಂತರ ಸೇವೆಯನ್ನು ಲೆಕ್ಕ ಮಾಡಬೇಕಾದಾಗ ಹಿಂದಿನ ಆರ್ಥಿಕ ವರ್ಷದಲ್ಲಿ, ಸದರಿ ಸಂಸ್ಥೆಯಲ್ಲಿ ಕನಿಷ್ಠ ಎರಡು ನೂರ ನಲವತ್ತು (240) ದಿನಗಳು ಸೇವೆ ಸಲ್ಲಿಸಿದ ಕಾರ್ಮಿಕನು ಸದರಿ ವರ್ಷದಲ್ಲಿ ನಿರಂತರ ಸೇವೆ ಸಲ್ಲಿಸಿರುತ್ತಾನೆಂದು ಉದ್ಯೋಗದಾತರು ಪರಿಗಣಿಸತಕ್ಕದ್ದು"

3. **ಮಹಿಳೆಯರಿಗೆ ಸಮಾನ ವೇತನ** : ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಹಾಗೂ ಸಮ ಪ್ರಮಾಣದ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರಯರಿಗೂ ಸಮಾನ ದರದ ವೇತನಗಳನ್ನು ಉದ್ಯೋಗದಾತರು ಸಮಾನ ವೇತನ ಕಾಯ್ದೆ-1976ರ ಪ್ರಾವಧಾನಗಳನ್ವಯ ಮಹಿಳಾ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು.

4. **ಕಾರ್ಮಿಕರ ಹಕ್ಕುಗಳ ರಕ್ಷಣೆ:** ಯಾವುದೇ ಪ್ರದೇಶ ಅಥವಾ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಈ ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ಕನಿಷ್ಠ ವೇತನದ ದರಗಳಿಗಿಂತ ಹೆಚ್ಚಿನ ವೇತನವನ್ನು ಈಗಾಗಲೇ ಕೈಗಾರಿಕಾ ವಿವಾದಗಳ ಕಾಯ್ದೆ-1947 ರಡಿಯಲ್ಲಿಯ ಒಪ್ಪಂದ, ಕರಾರು ಅಥವಾ ಬೇರೆ ಯಾವುದೇ ರೀತಿಯನ್ವಯ ಪಡೆಯುತ್ತಿದ್ದಲ್ಲಿ, ಸದರಿ ಹೆಚ್ಚಿನ ವೇತನವನ್ನು ಮುಂದುವರೆದು ಪಡೆಯಲು ಕಾರ್ಮಿಕರು ಅರ್ಹರಾಗಿದ್ದು, ಅದನ್ನು ಪಾವತಿಸಲು ಉದ್ಯೋಗದಾತರು ಬಾಧ್ಯಸ್ಥರಿರುತ್ತಾರೆ.

5. **ಸಮರೂಪದ ಕೆಲಸದ ವರ್ಗಗಳಿಗೆ ಸಮನಾದ ವೇತನ:** ಈ ಅಧಿಸೂಚನೆಯಲ್ಲಿ ಕೆಲಸದ ಸ್ವರೂಪದ ವರ್ಗವನ್ನು ನಮೂದಿಸದೇ ಇರುವ ಕೆಲಸದ ಸ್ವರೂಪದ ವರ್ಗಗಳಿಗೆ ಸೇರಿದ ಕಾರ್ಮಿಕರಿಗೆ ಅದೇ ಸ್ವರೂಪದ (ಸಮಾನ) ಕೆಲಸ ನಿರ್ವಹಿಸುತ್ತಿರುವ ಇತರೆ ಕೆಲಸದ ಸ್ವರೂಪದ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಉದ್ಯೋಗದಾತರು ಸಂದಾಯ ಮಾಡತಕ್ಕದ್ದು. ಈ ಕುರಿತು ಯಾವುದೇ ವಿವಾದ ಉದ್ಭವಿಸಿದಲ್ಲಿ, ಸಂಬಂಧಿಸಿದ ಉದ್ಯೋಗದಾತರು ಒಂದು ತ್ರಿಪಕ್ಷಿಯ (ಸ್ವತಂತ್ರ ಸದಸ್ಯರು-3, ಕಾರ್ಮಿಕ ಪ್ರತಿನಿಧಿಗಳು -3 ಹಾಗೂ ಉದ್ಯೋಗದಾತರು -3, ಹೀಗೆ ಒಟ್ಟು ಒಂಬತ್ತು ಜನರ) ಸಮಿತಿಯನ್ನು ರಚಿಸಿ, ಸದರಿ ಸಮಿತಿಯು ಸ್ವಾಭಾವಿಕ ನ್ಯಾಯತತ್ವಗಳನ್ನು ಪರಿಪಾಲಿಸಿ, ಪಕ್ಷಗಾರರ ವಾದಗಳನ್ನು ಆಲಿಸಿ, ಎಲ್ಲಾ ವಿವಾದಾಂಶಗಳನ್ನು ಹಾಗೂ ಕೆಲಸದ ಕೌಶಲ್ಯದ ವರ್ಗವನ್ನು ಸಹ ವಿಶ್ಲೇಷಿಸಿ ಎರಡು ತಿಂಗಳ ಅವಧಿಯೊಳಗೆ ನೀಡುವ ಕನಿಷ್ಠ ವೇತನ ದರದ ವರದಿಯನ್ವಯ ಕ್ರಮವಹಿಸತಕ್ಕದ್ದು. ಸದರಿ ವರದಿಯ ಅನುಷ್ಠಾನಕ್ಕಾಗಿ "ಸಕ್ಷಮ ಅಧಿಕಾರಿ"ಯನ್ನು ಉದ್ಯೋಗದಾತರು ನಿಯುಕ್ತಿಗೊಳಿಸತಕ್ಕದ್ದು, ಸಕ್ಷಮ ಅಧಿಕಾರಿಯ ವರದಿ ಅನುಷ್ಠಾನ ಕ್ರಮದ ಬಗ್ಗೆ ಅಥವಾ ವರದಿಯ ಬಗ್ಗೆ ವಿವಾದವಿದ್ದಲ್ಲಿ, ಈ ಕುರಿತು "ಮೇಲ್ಮನವಿ ಪ್ರಾಧಿಕಾರಿ"ಯನ್ನು ಸಹ ನಿಯುಕ್ತಿಗೊಳಿಸಿ, ಉದ್ಯೋಗದಾತರು ಅಧಿಸೂಚನೆಯನ್ನು ಹೊರಡಿಸತಕ್ಕದ್ದು. ಒಂದು ತಿಂಗಳ

ಕಾಲಮಿತಿಯೊಳಗೆ 'ಸಕ್ಷಮ ಪ್ರಾಧಿಕಾರಿ' ಹಾಗೂ 'ಮೇಲ್ಮನವಿ ಪ್ರಾಧಿಕಾರಿ' ಗಳು ಸ್ವಾಭಾವಿಕ ನ್ಯಾಯತತ್ವಗಳನ್ವಯ ಪ್ರಕರಣಗಳ ಇತ್ಯರ್ಥಕ್ಕೆ ಕ್ರಮವಹಿಸತಕ್ಕದ್ದು. ' ಮೇಲ್ಮನವಿ ಪ್ರಾಧಿಕಾರಿ' ಯ ನಿರ್ಣಯವು ಅಂತಿಮವಾಗಿದ್ದು, ಅದನ್ನು ಪಾಲಿಸಲು ಎಲ್ಲಾ ಪಕ್ಷಗಾರರು ಬಾಧ್ಯಸ್ಥರಿರುತ್ತಾರೆ.

6. **ಕನಿಷ್ಠ ವೇತನ ಸ್ವೀಕರಿಸುವ ಹಕ್ಕಿನ ರಕ್ಷಣೆ:** ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ ಎಂಟು (8) ಗಂಟೆಗಳ ಕೆಲಸದ ವೇತನವು ಅದೇ ಸ್ವರೂಪದ (ತರಹದ) ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರದಂತೆ ಉದ್ಯೋಗದಾತರು ಕ್ರಮವಹಿಸತಕ್ಕದ್ದು. ಈ ಬಗ್ಗೆ ವಿವಾದವಿದ್ದಲ್ಲಿ ಮೇಲ್ಕಂಡ ಷರತ್ತು ಸಂಖ್ಯೆ-5 ರಲ್ಲಿಯ ವಿವಾದ-ಪರಿಹಾರ ವ್ಯವಸ್ಥೆಯನ್ನು ಉದ್ಯೋಗದಾತರು ಸೃಷ್ಟಿಸಿ, ಕಾನೂನುಸಮ್ಮತ ಪರಿಹಾರವನ್ನು ರೂಪಿಸತಕ್ಕದ್ದು.

7. **ದುಡಿಮೆಯ ಅವಧಿಯ ಪ್ರಮಾಣಕ್ಕನುಗುಣವಾಗಿ ಕನಿಷ್ಠ ವೇತನ:** ಒಂದು ದಿನದ ಕೆಲಸ ಎಂದರೆ ಎಂಟು (8) ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು ಎಂಟು (8) ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಥವಾ ಕಾರ್ಮಿಕರು ಕೆಲಸ ನಿರ್ವಹಿಸಿದ್ದಲ್ಲಿ, ಅಂತಹ ಕಡಿಮೆ ಅವಧಿಯ ಪ್ರಮಾಣಕ್ಕನುಗುಣವಾಗಿ ಕನಿಷ್ಠ ವೇತನವನ್ನು ಕರ್ನಾಟಕ ಕನಿಷ್ಠ ವೇತನ ನಿಯಮಗಳು, 1958ರ ನಿಯಮ 27 ರನ್ವಯ ಆ ಕೆಲಸದ ವರ್ಗಕ್ಕೆ ನಿಗದಿಪಡಿಸಿರುವ ದಿನವೊಂದರ ಕನಿಷ್ಠ ವೇತನವನ್ನು ಗಂಟೆಗಳ ಕನಿಷ್ಠ ವೇತನವನ್ನಾಗಿ ಲೆಕ್ಕ ಹಾಕಿ, ಸಂಬಂಧಿಸಿದ ಕಾರ್ಮಿಕರಿಗೆ ಉದ್ಯೋಗದಾತರು ಪಾವತಿಸತಕ್ಕದ್ದು.

8. **ಕನಿಷ್ಠ ವೇತನದ ಪಾವತಿಯ ವಿಧಾನ** : ನಿಗಧಿತ ಕನಿಷ್ಠ ವೇತನದ ಮೂಲವೇತನ ಹಾಗೂ ತುಟ್ಟಿಭತ್ಯೆ ಲೆಕ್ಕಾಚಾರದಲ್ಲಿ ರೂಪಾಯಿಯ ಭಾಗಾಂಶವು ಬಂದ ಪಕ್ಷದಲ್ಲಿ ಅದನ್ನು ಸಮೀಪದ ಹೆಚ್ಚಿನ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ, ಕಾರ್ಮಿಕರಿಗೆ ಪಾವತಿಸತಕ್ಕದ್ದು.

9. **ಬ್ಯಾಂಕ್ ಖಾತೆಯ ಮೂಲಕ ವೇತನ ಪಾವತಿ:** ವೇತನ ಪಾವತಿ ಕಾಯ್ದೆ-1936ರ ಕಲಂ 6 ರ ಪ್ರಾವಧಾನದ ಅನ್ವಯ ಕಾರ್ಮಿಕರಿಗೆ ವೇತನವನ್ನು ಉದ್ಯೋಗದಾತರು ನೇರವಾಗಿ ಕಾರ್ಮಿಕರ ಬ್ಯಾಂಕ್ ಖಾತೆಗೆ ವರ್ಗಾಯಿಸುವ ಮೂಲಕ ಪಾವತಿಸತಕ್ಕದ್ದು.

10. **ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನ ದರಗಳ ಅನ್ವಯಿಸುವಿಕೆ:**ಈ ಅನುಸೂಚಿತ ಉದ್ದಿಮೆಗೆ ಒಳಪಡುವ ಸಂಸ್ಥೆಗಳಲ್ಲಿ ಹೊರಗುತ್ತಿಗೆ ವ್ಯವಸ್ಥೆಯ ಮೂಲಕ ಗುತ್ತಿಗೆ ಕಾರ್ಮಿಕ (ನಿಷೇದ ಮತ್ತು ನಿಯಂತ್ರಣ) ಕಾಯ್ದೆ-1970 ಹಾಗೂ ಇತರೆ ಶಾಸನಬದ್ಧ ವ್ಯವಸ್ಥೆಗಳನ್ವಯ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೂ ಕೂಡಾ ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಉದ್ಯೋಗದಾತರು ಅನ್ವಯಿಸಿ, ಪಾವತಿಯನ್ನು ಮಾಡತಕ್ಕದ್ದು.

11. **ಸಾಮಾಜಿಕ ಭದ್ರತೆಯ ಕಾಯ್ದೆಗಳಡಿಯಲ್ಲಿ ಉದ್ಯೋಗದಾತರ ವಂತಿಗೆಯ ಪಾವತಿ:** ಕನಿಷ್ಠ ವೇತನದ ಮೊತ್ತವು ( ಮೂಲ ವೇತನ + ತುಟ್ಟಿಭತ್ಯೆ) ಕರ್ತವ್ಯ ನಿರ್ವಹಿಸಿದ ಕಾರ್ಮಿಕನ ಅರ್ಜಿತ ವೇತನವಾಗಿದ್ದು, ಉದ್ಯೋಗದಾತರು ಈ ಕೆಳಕಂಡ ಕಾಯ್ದೆಗಳಡಿಯಲ್ಲಿ ಪಾವತಿಸಬೇಕಾದ "ಉದ್ಯೋಗದಾತರ ವಂತಿಗೆ" ಯನ್ನು ಕಾರ್ಮಿಕರ ಅರ್ಜಿತ ಕನಿಷ್ಠ ವೇತನದ ಮೊತ್ತದಿಂದ ಕಡಿತಗೊಳಿಸದೆ, ಪ್ರತ್ಯೇಕವಾಗಿ ಉದ್ಯೋಗದಾತರ ಸಂಪನ್ಮೂಲದಿಂದಲೇ ಪಾವತಿ ಮಾಡತಕ್ಕದ್ದು;

    1. ನೌಕರರ ರಾಜ್ಯ ವಿಮಾ ಕಾಯ್ದೆ-1948.
    2. ನೌಕರರ ಭವಿಷ್ಯ ನಿಧಿ ಹಾಗೂ ಇತರೆ ಪ್ರಾವಧಾನಗಳ ಕಾಯ್ದೆ-1952.

12. **ರಜಾದಿನದಲ್ಲಿಯ ದುಡಿಮೆಯ ವೇತನ** : ಉದ್ಯೋಗದಾತರ ಸಂಸ್ಥೆಯಲ್ಲಿ ಶಾಸನದನ್ವಯ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ, 1948 ಮತ್ತು ಅದರಡಿಯ ಕರ್ನಾಟಕ ನಿಯಮಗಳಲ್ಲಿಯ ಪ್ರಾವದಾನಗಳು ಹಾಗೂ ಕರ್ನಾಟಕ ಔದ್ಯೋಗಿಕ ಸಂಸ್ಥೆಗಳು (ರಾಷ್ಟ್ರೀಯ ಮತ್ತು ಹಬ್ಬದ ರಜಾದಿನಗಳ) ಕಾಯ್ದೆ-1963ರ ಪ್ರಾವಧಾನಗಳನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

13. **ಹೆಚ್ಚುವರಿ ಅವಧಿ ದುಡಿಮೆಯ ವೇತನ:** ಕೆಲಸಗಾರರು ದಿನದ ನಿಗಧಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಕಾರ್ಮಿಕರಿಗೆ ಹೆಚ್ಚುವರಿ ಅವಧಿಯ ಕೆಲಸಕ್ಕೆ ಕನಿಷ್ಠ ವೇತನ ಕಾಯ್ದೆ-1948 ರ ಕಲಂ 14 ರನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

14. **ಅಪ್ರೆಂಟೈಸ್ ಅವಧಿಯ ವೇತನ** : ಯಾವುದೇ ಉದ್ಯೋಗದಾತರ ಸಂಸ್ಥೆಯಲ್ಲಿ ಸೇವಾನುಭವ ಪಡೆಯುವುದಕ್ಕಾಗಿ ದಿ ಅಪ್ರೆಂಟೈಸ್ ಕಾಯ್ದೆ -1961 ರ ಪ್ರಾವಧಾನಗಳನ್ವಯ ತರಬೇತಿ ಪಡೆಯುವ ಅಪ್ರೆಂಟೈಸ್‌ಗಳಿಗೆ ದಿ ಅಪ್ರೆಂಟೈಸ್ ಕಾಯ್ದೆ-1961 ರ ಪ್ರಾವಧಾನಗಳನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

15. **ಸ್ಥಾಯಿ ಆದೇಶಗಳಲ್ಲಿಯ ಪ್ರಾವಧಾನಗಳನ್ವಯ ತರಬೇತಿ ಅವಧಿಯ ವೇತನ:** ಯಾವುದೇ ಉದ್ಯೋಗದಾತರ ಸಂಸ್ಥೆಯಲ್ಲಿ ತರಬೇತಿ, ಪಡೆಯುವ ಉದ್ಯೋಗಿಗಳಿಗೆ ಔದ್ಯೋಗಿಕ ಉದ್ಯೋಗಗಳ (ಸ್ಥಾಯಿ ಆದೇಶಗಳ) ಕಾಯ್ದೆ 1946 ಹಾಗೂ ಅದರಡಿಯ ಕರ್ನಾಟಕ ನಿಯಮಗಳನ್ವಯ ಪ್ರಮಾಣೀಕೃತ ಸ್ಥಾಯಿ ಆದೇಶಗಳಲ್ಲಿ ಅಥವಾ ಮಾದರಿ ಸ್ಥಾಯಿ ಆದೇಶಗಳಲ್ಲಿ ನಿಗಧಿತವಾದ "ತರಬೇತಿ ಅವಧಿ"ಯಲ್ಲಿ ಈ ಅಧಿಸೂಚನೆಯ ಮೂಲಕ ನಿಗಧಿಗೊಳಿಸಿದ ಕನಿಷ್ಠ ವೇತನದ ಶೇಕಡಾ 75 (ಎಪ್ಪತ್ತೈದು) ರಷ್ಟು ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

16. **ಸರ್ಕಾರದ ಯೋಜನೆ / ಕಾರ್ಯಕ್ರಮದಡಿಯಲ್ಲಿ ಹಾಗೂ ಸಾಮಾನ್ಯ ತರಬೇತಿಯ ಅವಧಿಯ ವೇತನ:** ಮೇಲ್ಕಂಡ ಷರತ್ತು ಸಂಖ್ಯೆ 11 ಹಾಗೂ 12 ನ್ನು ಹೊರತುಪಡಿಸಿ, ತರಬೇತಿ ಪಡೆಯುವ ಉದ್ಯೋಗಿಗಳಿಗೆ (ಟ್ರೈನಿಗಳಿಗೆ) ಈ ಅಧಿಸೂಚನೆಯಡಿ ನಿಗಧಿಪಡಿಸಿದ ಕೆಲಸದ ಸ್ವರೂಪಗಳಿಗೆ ನಿಗಧಿಪಡಿಸಿರುವ ಕನಿಷ್ಠ ವೇತನವನ್ನು ಪಾವತಿಸತಕ್ಕದ್ದು. ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರ ಯಾವುದೇ ತರಬೇತಿಗಾಗಿ ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ರೂಪಿಸಿದ್ದು, ಸದರಿ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಉದ್ಯೋಗದಾತರು ಅನುಷ್ಠಾನಗೊಳಿಸುತ್ತಿದಲ್ಲಿ, ಸದರಿ ಯೋಜನೆಗಳಡಿಯಲ್ಲಿ / ಕಾರ್ಯಕ್ರಮದಡಿಯಲ್ಲಿ ನಿಗಧಿಪಡಿಸಿರುವ ವೇತನವನ್ನು ಉದ್ಯೋಗದಾತರು ತರಬೇತಿ ಪಡೆಯುವವರಿಗೆ ಪಾವತಿಸತಕ್ಕದ್ದು.

17. **ರೂಢಿಗತ ಸೌಲಭ್ಯಗಳ ಮುಂದುವರಿಕೆ:** ಅಧಿಸೂಚಿತ ಕನಿಷ್ಠ ವೇತನಕ್ಕೆ ಹೆಚ್ಚುವರಿಯಾಗಿ ರೂಡಿ ಮತ್ತು ಪದ್ಧತಿಯನ್ವಯ ವಸ್ತು ರೂಪದಲ್ಲಿ ಯಾವುದೇ ಸಂಭಾವನೆಯನ್ನು ಉದ್ಯೋಗದಾತರಿಂದ ಕಾರ್ಮಿಕರು ಪಡೆಯುತ್ತಿದ್ದಲ್ಲಿ, ಸದರಿ ಹೆಚ್ಚುವರಿ ವಸ್ತು ರೂಪದ ಸಂಭಾವನೆಯನ್ನು ಮುಂದುವರೆಸಲು ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

18. **ದಿವ್ಯಾಂಗ ಕಾರ್ಮಿಕರ ವೇತನ:** ವಿಕಲಚೇತನ ವ್ಯಕ್ತಿಗಳು ಕೆಲಸ ನಿರ್ವಹಿಸುತ್ತಿದ್ದಲ್ಲಿ ಸದರಿ ಕೆಲಸವನ್ನು ನಿರ್ವಹಿಸುತ್ತಿರುವ ಇತರೆ ಸಾಮಾನ್ಯ ಕಾರ್ಮಿಕರು ಪಡೆಯುತ್ತಿರುವ ವೇತನಕ್ಕೆ ಸಮನಾಗಿ ವೇತನವನ್ನು ಪಡೆಯಲು ವಿಕಲಚೇತನ (ದಿವ್ಯಾಂಗ) ಕಾರ್ಮಿಕರು ಅರ್ಹರಾಗಿದ್ದು, ಇದನ್ನು

ವಿಕಲಾಂಗ ವ್ಯಕ್ತಿಗಳು (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಹಾಗೂ ಪೂರ್ಣ ಭಾಗವಹಿಸುವಿಕೆ) ಕಾಯ್ದೆ-1995 ರ ಪ್ರಾವಧಾನಗಳ ಹಿನ್ನೆಲೆಯಲ್ಲಿ ಪಾವತಿಸಲು ಉದ್ಯೋಗದಾತರು ಕ್ರಮವಹಿಸತಕ್ಕದ್ದು.

19. **ಕನಿಷ್ಠ ವೇತನ ಮೊತ್ತದ ಕಡ್ಡಾಯ ಪಾವತಿ:** ಕರ್ತವ್ಯ ನಿರ್ವಹಿಸಿದ ಕಾರ್ಮಿಕರಿಗೆ ಪಾವತಿ ಮಾಡುವ ಒಟ್ಟು ವೇತನವು, ಈ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ಕನಿಷ್ಠ ವೇತನ ದರಗಳನ್ನು ಮತ್ತು ಕಾಲಕಾಲಕ್ಕೆ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು ಸೇರ್ಪಡಿಸಿದಾಗ ಬರುವ ಮೊತ್ತಕ್ಕೆ ಕಡಿಮೆಯಾಗದಂತೆ ವೇತನವನ್ನು ಕಡ್ಡಾಯವಾಗಿ ಉದ್ಯೋಗದಾತರು ಪಾವತಿಸತಕ್ಕದ್ದು.

20. **ಕಾರ್ಮಿಕರ ಕೆಲಸದ ಸ್ವರೂಪಗಳ ವರ್ಗೀಕರಣ:** ಕಾರ್ಮಿಕರು ಉದ್ಯೋಗದಾತರ ಸಂಸ್ಥೆಯಲ್ಲಿ ನಿರ್ವಹಿಸುವ ಕೆಲಸದ ಸ್ವರೂಪವನ್ನು ಅವರ ಕೌಶಲ್ಯಗಳಿಗನುಗುಣವಾಗಿ ನಾಲ್ಕು (04) ವರ್ಗಗಳಲ್ಲಿ ವಿಂಗಡಿಸಿದ್ದು, ಅದರ ಸಾಮಾನ್ಯ ವ್ಯಾಖ್ಯಾನ ಈ ಕೆಳಗಿನಂತಿದೆ;

**ಅ. ಅತಿ ಕುಶಲ:** ಅತಿ ಕುಶಲ ಕೆಲಸಗಾರರು ಎಂದರೆ ಯಾರು ಹೆಚ್ಚಿನ ನೈಪುಣ್ಯತೆ ಕೆಲಸವನ್ನು ಅತಿ ಹೆಚ್ಚು ನಿಖರವಾಗಿ ಮಾಡಬಲ್ಲವರಾಗಿದ್ದು, ನಕ್ಷೆಯನ್ನು ಓದಬಲ್ಲ ಮತ್ತು ಅದರ ಆಧಾರದ ಮೇಲೆ ಕೆಲಸ ಮಾಡಬಲ್ಲವರಾಗಿದ್ದು, ಅವರ ವಿಭಾಗದ 'ಕುಶಲ' ಮತ್ತು ಇತರೇ ಕೆಲಸಗಾರರ ಕೆಲಸವನ್ನು ನಿರ್ದೇಶಿಸಬಲ್ಲ ಸಾಮರ್ಥ್ಯವುಳ್ಳವರಾಗಿದ್ದು, ಆ ವಿಭಾಗದ ಕೆಲಸವನ್ನು ಸ್ವತಂತ್ರವಾಗಿ ನಿರ್ವಹಿಸಿಕೊಂಡು ಹೋಗಬಲ್ಲವರಾಗಿರಬೇಕು.

**ಆ. ಕುಶಲ:** ಕುಶಲ ಕೆಲಸಗಾರರು ಅಂದರೆ ಸ್ವತಂತ್ರವಾಗಿ ಹಾಗೂ ಪರಿಣಾಮಕಾರಿಯಾಗಿ ಮತ್ತು ಕೆಲಸವನ್ನು ಸರಿಯಾಗಿ ಮಾಡಬಲ್ಲ ಸಾಮರ್ಥ್ಯವುಳ್ಳ ಕಾರ್ಮಿಕ. ಅವಶ್ಯ ಬಿದ್ದರೆ ಸರಳವಾದ ನಕ್ಷೆಗಳನ್ನು ಓದಿ, ಕೆಲಸ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.

**ಇ. ಅರೆ ಕುಶಲ:** ತನ್ನ ಕಸುಬಿನ ಬಗ್ಗೆ ಸಾಕಷ್ಟು ಜ್ಞಾನವಿರುವ ಹಾಗೂ ಪುನರಾವರ್ತನೆ ಕೆಲಸ ಮಾಡುವ ಸಾಮರ್ಥ್ಯವುಳ್ಳ ಹಾಗೂ ಯಂತ್ರೋಪಕರಣಗಳ ಸಹಾಯದಿಂದ ಸರಳವಾದ ಕೆಲಸಗಳನ್ನು ಮಾಡಬಲ್ಲವರು.

**ಈ. ಕುಶಲರಲ್ಲದವರು:** ಸ್ವತಂತ್ರವಾದ ನಿರ್ಣಯದ ಅವಶ್ಯಕತೆಯಿಲ್ಲದ ಅಥವಾ ಹಿಂದಿನ ಅನುಭವ ಇಲ್ಲದೆ ಆದರೆ ಉದ್ಯೋಗದ ವಾತಾವರಣದ ಪರಿಚಯವಿದ್ದು ಕೆಲಸ ಮಾಡುವುದು, ದೈಹಿಕ ಪರಿಶ್ರಮವಿಲ್ಲದೆ ವಿವಿಧ ರೀತಿಯ ವಸ್ತುಗಳು ಮತ್ತು ಸಾಮಾನ್ಯ ಜ್ಞಾನವಿರುವ ಕೆಲಸವನ್ನು ಮಾಡುವವರು.

21.**ಭೌಗೋಳಿಕ ಪ್ರದೇಶಗಳ ವರ್ಗೀಕರಣ:** ಕನಿಷ್ಠ ವೇತನ ದರಗಳನ್ನು ರಾಜ್ಯದ ನಾಲ್ಕು (04) ಭೌಗೋಳಿಕ ಪ್ರದೇಶವಾರು ಆಧಾರದ ಮೇಲೆ ಅಧಿಸೂಚಿಸಲಾಗಿದ್ದು, ಈ ಭೌಗೋಳಿಕ ಪ್ರದೇಶಗಳ ವಿವರಣೆಯನ್ನು ಈ ಕೆಳಕಂಡಂತೆ ನೀಡಲಾಗಿರುತ್ತದೆ;

| | | |
|---|---|---|
| ಅ | ವಲಯ – 1 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿಯ ಅಧಿಸೂಚಿತ ಪ್ರದೇಶಗಳು |
| ಆ | ವಲಯ – 2 | ವಲಯ-1 ಅನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿಯ ಅಧಿಸೂಚಿತ ಪ್ರದೇಶಗಳು. |
| ಇ | ವಲಯ – 3 | ವಲಯ-1 ಹಾಗೂ ವಲಯ-2 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು. |
| ಈ | ವಲಯ – 4 | ವಲಯ-1, ವಲಯ-2 ಮತ್ತು 3 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಇತರೆ ಎಲ್ಲಾ ಪ್ರದೇಶಗಳು. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ.

**PR-48**
**SC-200**

**ಎಲ್.ಎಸ್.ಶ್ರೀಕಂಠಬಾಬು,**
ಸರ್ಕಾರದ ಉಪ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

## ಕಾರ್ಮಿಕ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ಕಾಇ 31 ಎಲ್‌ಎಂಡಬ್ಲ್ಯೂ 2017, ಬೆಂಗಳೂರು, ದಿನಾಂಕ: 30-12-2017**

ಕರ್ನಾಟಕ ರಾಜ್ಯದಾದ್ಯಂತ **"ಅನುಸೂಚಿತ ಪಟ್ಟಿಗೆ ಸೇರದ ಉದ್ಯೋಗಗಳು [Employment not covered in any of the Scheduled Employments]"** ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಅನ್ವಯವಾಗುವ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲುದ್ದೇಶಿಸಿ, ರಾಜ್ಯ ಸರ್ಕಾರವು ತನಗೆ ಕನಿಷ್ಠ ವೇತನ ಕಾಯ್ದೆ, 1948ರ ಕಲಂ 5 (1)(ಬಿ) ರ ಪ್ರಾವಧಾನದನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರಡು ಅಧಿಸೂಚನೆ ಸಂಖ್ಯೆ: ಕಾಇ 31 ಎಲ್‌ಎಂಡಬ್ಲ್ಯೂ 2017, ಬೆಂಗಳೂರು ದಿನಾಂಕ: 28-04-2017 ಅನ್ನು ಕರ್ನಾಟಕ ರಾಜ್ಯಪತ್ರದ ಭಾಗ 4ಎ ಭಾಗ ಪುಟ ಸಂಖ್ಯೆ: 4514 ರಿಂದ 4519 ರಲ್ಲಿ ದಿನಾಂಕ: 22 ನೇ ಜೂನ್ 2017 ರಂದು ಪ್ರಕಟಿಸಿರುತ್ತದೆ ಹಾಗೂ ತನ್ಮೂಲಕ ಈ ಕರಡು ಅಧಿಸೂಚನೆಯಿಂದ ಬಾಧಿತರಾಗುವ ಹಾಗೂ ಸಂಬಂಧವಿರುವ ವ್ಯಕ್ತಿಗಳು ಹಾಗೂ ಅವರನ್ನು ಪ್ರತಿನಿಧಿಸುವ ಸಂಘ-ಸಂಸ್ಥೆಗಳ ಗಮನಕ್ಕೆ ವಿಷಯವನ್ನು ರಾಜ್ಯ ಸರ್ಕಾರವು ತಂದಿರುತ್ತದೆ. ರಾಜ್ಯ ಸರ್ಕಾರವು ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸಲು ಎರಡು (02) ತಿಂಗಳ ಕಾಲಾವಕಾಶವನ್ನು ಸಂಬಂಧಿಸಿದವರೆಲ್ಲರಿಗೂ ಕಲ್ಪಿಸಿರುತ್ತದೆ. ಸದರಿ ಅವಧಿಯಲ್ಲಿ ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಹಲವು ನಿರ್ದಿಷ್ಟವಾದ ಹಾಗೂ ಸಾಮಾನ್ಯವಾದ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸಂಬಂಧಿಸಿದವರಿಂದ ರಾಜ್ಯ ಸರ್ಕಾರವು ಸ್ವೀಕರಿಸಿರುತ್ತದೆ.

ರಾಜ್ಯ ಸರ್ಕಾರವು ತನ್ನ ಪತ್ರ ಸಂಖ್ಯೆ: ಕಾಇ 02 ಎಲ್‌ಎಮ್‌ಡಬ್ಲ್ಯೂ 2017 ದಿನಾಂಕ: 08-11-2017 ರ ಮೂಲಕ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಸಭೆಯನ್ನು ಕರೆದು ಸದರಿ ಕರಡು ಅಧಿಸೂಚನೆ ಬಗ್ಗೆ ಸಲಹೆಗಳನ್ನು ನೀಡುವಂತೆ ಸೂಚಿಸಲಾಗಿ, ದಿನಾಂಕ: 06-12-2017 ರಂದು ನಿಯಮಾನುಸಾರ ನಡೆದ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಸಭೆಯಲ್ಲಿ ಮೇಲ್ಕಂಡ ಕರಡು ಅಧಿಸೂಚನೆ ಹಾಗೂ ಅದಕ್ಕೆ ಸಂಬಂಧಿಸಿದಂತೆ ಸ್ವೀಕರಿಸಲಾದ ಸಲಹೆಗಳು ಹಾಗೂ ಆಕ್ಷೇಪಣೆಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸದರಿ ಮಂಡಳಿಯಲ್ಲಿ ಸರ್ಕಾರದ ಪ್ರಸ್ತಾವನೆಯನ್ನು ಸುಧೀರ್ಘವಾಗಿ ಸಮಾಲೋಚಿಸಿ ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಮಂಡಳಿಯು ಸರ್ಕಾರಕ್ಕೆ ತನ್ನ ಶಿಫಾರಸ್ಸನ್ನು ನೀಡಿರುತ್ತದೆ.

ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯು ದಿ: 06–12–2017ರ ಸಭೆಯಲ್ಲಿ ನೀಡಿರುವ ಸಲಹೆಗಳನ್ನು ಹಾಗೂ ಸಂಬಂಧಿಸಿದ ಇತರೆ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿರುವ ರಾಜ್ಯ ಸರ್ಕಾರವು, ತನಗೆ ಕನಿಷ್ಠ ವೇತನ ಕಾಯ್ದೆ, 1948ರ ಕಲಂ 3(1)(ಬಿ) ಸಹವಾಚಿತ ಕಲಂ 5 (1)(ಬಿ) ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ತತ್ಸಂಬಂಧದ ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಕರ್ನಾಟಕ ರಾಜ್ಯದಾದ್ಯಂತ **"ಅನುಸೂಚಿತ ಪಟ್ಟಿಗೆ ಸೇರದ ಉದ್ಯೋಗಗಳು** [Employment not covered in any of the Scheduled Employments]" ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಈ **ಅಧಿಸೂಚನೆಯು ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ** ಈ ಕೆಳಕಂಡ ಕನಿಷ್ಠ ವೇತನ ದರಗಳ ಕೋಷ್ಟಕದಲ್ಲಿರುವಂತೆ, ಕನಿಷ್ಠ ವೇತನ ದರಗಳನ್ನು ಈ ಅಧಿಸೂಚನೆಯ ಮೂಲಕ ಪರಿಷ್ಕರಿಸಲಾಗಿರುತ್ತದೆ. ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಪಾವತಿಸಲು, ಕನಿಷ್ಠ ವೇತನ ಕಾಯ್ದೆ–1948ರ ಕಲಂ 12 ರನ್ವಯ ಸಂಬಂಧಿಸಿದ ಎಲ್ಲಾ ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

**ಕನಿಷ್ಠ ವೇತನ ದರಗಳ ಕೋಷ್ಟಕ**

**"ಅನುಸೂಚಿತ ಪಟ್ಟಿಗೆ ಸೇರದ ಉದ್ಯೋಗಗಳು [Employment not covered in any of the Scheduled Employments]"**

| ಕೆಲಸದ ವರ್ಗೀಕರಣ | ವಲಯ–1 | | ವಲಯ–2 | | ವಲಯ–3 | | ವಲಯ–4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| **ಅತಿ ಕುಶಲ ಕಾರ್ಮಿಕರು**<br>ಸೂಪರ್‌ವೈಸರ್ (ಶಿಫ್ಟ್/ ವರ್ಕ್ಸ್/ಟೆಕ್ನಿಕಲ್), ಫೋರ್‌ಮನ್, ಪ್ಲಾಂಟ್ ಇನ್‌ಚಾರ್ಜ್ ಛಾರ್ಜ್‌ಮನ್, ಸೀನಿಯರ್ ಮೆಕ್ಯಾನಿಕ್, ಸೀನಿಯರ್ ಫಿಟ್ಟರ್, ಸೀನಿಯರ್ ವೆಲ್ಡರ್, ಸೀನಿಯರ್ ಟರ್ನರ್, ಡ್ರಾಫ್ಟ್ಸ್‌ಮನ್, ಕಂಪ್ಯೂಟರ್ ಪ್ರೋಗ್ರಾಮರ್, ಕೆಮಿಸ್ಟ್, ಸೀನಿಯರ್ ಆಪರೇಟರ್ಸ್, ಅನಲಿಸ್ಟ್, ಬಡಗಿಗಳು 1ನೇ ವರ್ಗ ಇತರೆ ಅತಿಕುಶಲ ಕೆಲಸಕ್ಕೆ | 15423–40 | 593–21 | 14688–95 | 564–96 | 13989–48 | 538–06 | 13323–31 | 512–44 |
| **ಕುಶಲ ಕಾರ್ಮಿಕರು**<br>ಲ್ಯಾಬ್ ಟೆಕ್ನಿಷಿಯನ್, ಸಹಾಯಕ ಫೋರ್‌ಮನ್, ವೆಲ್ಡರ್, ಫಿಟ್ಟರ್ ಮೆಕ್ಯಾನಿಕ್, ಟರ್ನರ್, ಮಿಷಿನಿಸ್ಟ್, ಎಲೆಕ್ಟ್ರಿಲ್ ವೈರ್‌ಮನ್, ಕಾರ್ಪೆಂಟರ್, ಬ್ಲಾಕ್‌ಸ್ಮಿತ್, ಗ್ರೈಂಡರ್, ಡ್ರಿಲ್ಲರ್, ಮೇಸ್ತ್ರಿ, ಬಡಗಿಗಳು 2ನೇ ವರ್ಗ, ಫ್ಯೂಯೆಲ್ ಮನ್, ಇತರೆ ಕುಶಲ ಕೆಲಸಕ್ಕೆ, | 14021–27 | 539–28 | 13353–59 | 513–60 | 12717–71 | 489–14 | 12112–10 | 465–85 |
| **ಅರೆ ಕುಶಲ ಕಾರ್ಮಿಕರು**<br>ಸಹಾಯಕ ವೆಲ್ಡರ್, ಸಹಾಯಕ ಫಿಟ್ಟರ್ ಸಹಾಯಕ ಮೆಕ್ಯಾನಿಕ್, ಸಹಾಯಕ ಟರ್ನರ್, ಸಹಾಯಕ ಮಿಷಿನಿಸ್ಟ್ ಸಹಾಯಕ ಎಲೆಕ್ಟ್ರಿಲ್, ಸಹಾಯಕ ವೈರ್‌ಮನ್, ಸಹಾಯಕ ಕಾರ್ಪೆಂಟರ್, ಸಹಾಯಕ ಬ್ಲಾಕ್‌ಸ್ಮಿತ್, ಸಹಾಯಕ ಗ್ರೈಂಡರ್, ಸಹಾಯಕ ಡ್ರಿಲ್ಲರ್, ಫೈರ್‌ಮನ್, ಸಹಾಯಕ ಬಡಗಿಗಳು, ಲ್ಯಾಬ್ ಸಹಾಯಕ, ಸಹಾಯಕ ಕೆಮಿಸ್ಟ್, ಲ್ಯಾಬ್ ಅಸಿಸ್ಟೆಂಟ್ ಕೆಮಿಸ್ಟ್ ಜೂನಿಯರ್ ಟೆಕ್ನೀಷಿಯನ್, ಜೂನಿಯರ್ ಸೂಪರ್‌ವೈಸರ್, ಸ್ಟೋರ್ ಅಸಿಸ್ಟೆಂಟ್, ಸಹಾಯಕ ಪ್ರೋಸೆಸ್ ಕೆಮಿಸ್ಟ್, ಟ್ರೈನಿ ಆಪರೇಟರ್, ಡಿ.ಜಿ. ಆಪರೇಟರ್, ಇತರೆ ಅರೆಕುಶಲ ಕೆಲಸಕ್ಕೆ, | 12746–61 | 490–25 | 12139–63 | 466–91 | 11561–55 | 444–68 | 11011–00 | 423–50 |

| ಕೆಲಸದ ವರ್ಗೀಕರಣ | ವಲಯ-1 | | ವಲಯ-2 | | ವಲಯ-3 | | ವಲಯ-4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| <u>ಅಕುಶಲ ಕಾರ್ಮಿಕರು</u><br>ಹೆಲ್ಪರ್ (ಸಹಾಯಕ), ಲೋಡಿಂಗ್ ಮತ್ತು ಅನ್ ಲೋಡಿಂಗ್, ಕ್ಲೀನರ್ಸ್, ಹಮಾಲರು, ಮಜ್ದೂರ್, ಗಾರ್ಡನರ್ಸ್ ಇತರೆ ಅಕುಶಲ ಕೆಲಸಕ್ಕೆ | 11587-83 | 445-69 | 11036-03 | 424-46 | 10510-50 | 404-25 | 10010-00 | 385-00 |

**ಕಛೇರಿ ಸಿಬ್ಬಂದಿಗಳು ಮತ್ತು ಚಾಲಕರು**

| ಹುದ್ದೆಗಳ ವಿವರ | ವಲಯ-1 | | ವಲಯ-2 | | ವಲಯ-3 | | ವಲಯ-4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ |
| ಮ್ಯಾನೇಜರ್, ಪರ್ಸನಲ್ ಆಫೀಸರ್ ಮಾರ್ಕೆಟಿಂಗ್ ಮ್ಯಾನೇಜರ್/ ಕಛೇರಿ ಮೇಲ್ವಿಚಾರಣೆಯ ತತ್ಸಮಾನ ಹುದ್ದೆ, | 16423-00 | 631-00 | 15688-00 | 603-38 | 14989-00 | 576-50 | 14323-00 | 550-88 |
| ಅಸಿಸ್ಟೆಂಟ್ ಮ್ಯಾನೇಜರ್ ಅಸಿಸ್ಟೆಂಟ್ ಪರ್ಸನಲ್ ಮ್ಯಾನೇಜರ್, ಸೀನಿಯರ್ ಅಕೌಂಟೆಂಟ್ ಮತ್ತು ತತ್ಸಮಾನ ಹುದ್ದೆ. | 15423-40 | 593-21 | 14688-95 | 564-96 | 13989-48 | 538-06 | 13323-31 | 512-44 |
| ಹಿರಿಯ ಗುಮಾಸ್ತ, ಕ್ಯಾಷಿಯರ್, ಜಡ್ಜ್ಮೆಂಟ್ ರೈಟರ್, ಸ್ಟೆನೋಗ್ರಾಫರ್, ಸ್ಟೋರ್ ಕೀಪರ್, ರಿಸೆಪ್ಷನಿಸ್ಟ್, (ಸ್ವಾಗತಗಾರರು) ಮತ್ತು ತತ್ಸಮಾನ ಹುದ್ದೆ. | 14021-27 | 539-28 | 13353-59 | 513-60 | 12717-71 | 489-14 | 12112-10 | 465-85 |
| ಕಿರಿಯ ಗುಮಾಸ್ತ , ಬುಕಿಂಗ್ ಗುಮಾಸ್ತ, ಕಂಪ್ಯೂಟರ್ ಆಪರೇಟರ್, ಟೈಪಿಸ್ಟ್, ಟೆಲಿಫೋನ್ ಆಪರೇಟರ್, ಡಾಟಾ ಎಂಟ್ರೀ ಆಪರೇಟರ್ ಮತ್ತು ತತ್ಸಮಾನ ಹುದ್ದೆ. | 12746-61 | 490-25 | 12139-63 | 466-91 | 11561-55 | 444-68 | 11011-00 | 423-50 |
| ಜವಾನ, ವಾಚ್ಮನ್, ಲಿಫ್ಟ್ ಆಪರೇಟರ್, ಆಫೀಸ್ ಬಾಯ್, ಅಟೆಂಡರ್, ಹೆಲ್ಪರ್/ಸಹಾಯಕ, ದಲಾಯತ್, ಮಜ್ದೂರ್, ಸ್ವೀಪರ್ ಮತ್ತು ತತ್ಸಮಾನ ಹುದ್ದೆ. | 11587-83 | 445-69 | 11036-03 | 424-46 | 10510-50 | 404-25 | 10010-00 | 385-00 |
| ಹೆವಿ ವೆಹಿಕಲ್ ಡ್ರೈವರ್, ಟ್ರ್ಯಾಕ್ಟರ್ ಡ್ರೈವರ್ ಬಹು ಆಕ್ಸೆಲ್ ಮತ್ತು ಘನ ವಾಹನ ಚಾಲಕರು, ಅರ್ಥ್ ಮೂವರ್ಸ್ ಚಾಲಕರು, ಕ್ರೇನ್ ಜೋಡಿಸಿದ ವಾಹನ ಚಾಲಕರು, ಟ್ರಾಕ್ಟರ್ ಚಾಲಕರು, ರೋಡ್ ರೋಲರ್ ಮತ್ತು ರಸ್ತೆ ನಿರ್ಮಾಣ ಕಾಮಗಾರಿ ವಾಹನಗಳ ಚಾಲಕರು | 14021-27 | 539-28 | 13353-59 | 513-60 | 12717-71 | 489-14 | 12112-10 | 465-85 |
| ಕಾರ್ ಡ್ರೈವರ್ ಜೀಪ್ ಡ್ರೈವರ್ ಲಘು ವಾಹನ ಚಾಲಕರು | 12746-61 | 490-25 | 12139-63 | 466-91 | 11561-55 | 444-68 | 11011-00 | 423-50 |
| ಟಂ ಟಂ, ತ್ರಿಚಕ್ರ ವಾಹನ ಚಾಲಕರು | 11587-83 | 445-69 | 11036-03 | 424-46 | 10510-50 | 404-25 | 10010-00 | 385-00 |

ಮೇಲ್ಕಂಡ ಕೋಷ್ಟಕದಲ್ಲಿಯ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ರಾಜ್ಯ ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನಿಗದಿಪಡಿಸಿದ್ದು, ಈ ಎಲ್ಲಾ ಷರತ್ತುಗಳನ್ನು ಯಥಾವತ್ತಾಗಿ ಸಂಬಂಧಿಸಿದ ಉದ್ಯೋಗದಾತರು ಪಾಲಿಸಲು ಬಾಧ್ಯಸ್ಥರಿರುತ್ತಾರೆ;

1. **ವ್ಯತ್ಯಾಸವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರ ಹಾಗೂ ಪಾವತಿ:** ನಿಗಧಿತ ಕನಿಷ್ಠ ವೇತನಕ್ಕನುಗುಣವಾಗಿ ಪಾವತಿಸಬೇಕಾದ ವ್ಯತ್ಯಸ್ಥವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಉದ್ಯೋಗದಾತರು ಮಾಡತಕ್ಕದ್ದು. ಹಿಂದಿನ ಕ್ಯಾಲೆಂಡರ್ ವರ್ಷದ ಹನ್ನೆರಡು (12) ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ತುಟ್ಟಿಭತ್ಯೆಯನ್ನು ಪ್ರತಿ ವರ್ಷದ ಏಪ್ರಿಲ್ ಮೊದಲನೇ ದಿನಾಂಕದಿಂದ ಅನ್ವಯವಾಗುವಂತೆ ಉದ್ಯೋಗದಾತರು ಪ್ರತಿ ವರ್ಷ ಲೆಕ್ಕಾಚಾರ ಮಾಡಿ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು. ಆದುದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2016 ರಿಂದ ಡಿಸೆಂಬರ್ 2016ರ) ಸರಾಸರಿ ಆಧಾರದ ಮೇಲೆ 2017 ಏಪ್ರಿಲ್ ಒಂದು (1) ನೇ ತಾರೀಖಿನಿಂದ ಜಾರಿಗೆ ಬರುತ್ತದೆ. ಗ್ರಾಹಕ ಬೆಲೆ ಸೂಚ್ಯಾಂಕ 6537 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ ನಾಲ್ಕು (4) ಪೈಸೆಯಂತೆ ಈ ಕೆಳಕಂಡ ವಿಧಾನದನ್ವಯ ಲೆಕ್ಕಾಚಾರ ಮಾಡಿ ತುಟ್ಟಿ ಭತ್ಯೆಯನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

**ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:–** ಮಾಸಿಕ ತುಟ್ಟಿಭತ್ಯೆ ಹಾಗೂ ದಿನದ ತುಟ್ಟಿಭತ್ಯೆಯನ್ನು ಕೆಳಕಂಡ ಸೂತ್ರಗಳನ್ವಯ ಕ್ರಮವಾಗಿ ಲೆಕ್ಕಾಚಾರ ಮಾಡತಕ್ಕದ್ದು;

**ಅ) ಮಾಸಿಕ ವೇತನವನ್ನು ಪಡೆಯುವವರು:–** ಮಾಸಿಕ ವೇತನ ಪಡೆಯುವ ಕಾರ್ಮಿಕರಿಗೆ ಈ ಕೆಳಕಂಡ ಸೂತ್ರದನ್ವಯ ತುಟಿಭತ್ಯೆಯನ್ನು ಲೆಕ್ಕ ಮಾಡತಕ್ಕದ್ದು ಹಾಗೂ ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸಿ ಪಾವತಿಸತಕ್ಕದ್ದು.

**ಮಾಸಿಕ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x ಮೂವತ್ತು(30) ದಿನಗಳು**

**ಆ) ದಿನಗೂಲಿ ವೇತನ ಪಡೆಯುವವರು :–** ದಿನಗೂಲಿ ಪಡೆಯುವ ಕಾರ್ಮಿಕರಿಗೆ ಮಾಸಿಕ ಕನಿಷ್ಠ ವೇತನ ದರವನ್ನು ಇಪ್ಪತ್ತಾರು (26) ದಿನಗಳಿಂದ ವಿಭಾಗಿಸಿ, {ನಾಲ್ಕು (4) ವಾರದ ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ} ಈ ಕೆಳಕಂಡ ಸೂತ್ರದನ್ವಯ ಲೆಕ್ಕ ಮಾಡತಕ್ಕದ್ದು. ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ ಅರ್ಹರಾದ ಕಾರ್ಮಿಕರಿಗೆ ಪಾವತಿಸತಕ್ಕದ್ದು.

**ದಿನದ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x** ಮೂವತ್ತು (30) ದಿನಗಳು / ಇಪ್ಪತ್ತಾರು (26)

2. **ಸೇವಾ ಹಿರಿತನ ಪರಿಗಣನೆ ಭತ್ಯೆ :** ಈ ಅಧಿಸೂಚನೆ ಜಾರಿಗೆ ಬಂದ ದಿನಾಂಕದಿಂದ ಯಾವುದೇ ಕಾರ್ಮಿಕನು ಓರ್ವ ಉದ್ಯೋಗದಾತರ ಸಂಸ್ಥೆಯಲ್ಲಿ ಅಥವಾ ಮಾಲೀಕರ ಅಧೀನದಲ್ಲಿ ನಿರಂತರ ಹತ್ತು (10) ವರ್ಷಗಳ ಸೇವೆಯನ್ನು ಸಲ್ಲಿಸಿದಲ್ಲಿ, ತನ್ನ ಪೂರ್ಣಗೊಳಿಸಿದ ಪ್ರತಿ ಹತ್ತು ವರ್ಷದ ಮೇಲ್ಪಟ್ಟ ಸೇವೆಗೆ ಅನುಗುಣವಾಗಿ ಆಯಾ ಕಾರ್ಮಿಕ ವರ್ಗಕ್ಕೆ ನಿಗದಿಪಡಿಸಿರುವ ಒಟ್ಟು ಮಾಸಿಕ ಕನಿಷ್ಠ ಮೂಲ ವೇತನದ ಮೇಲೆ ವರ್ಷವೊಂದರ ಸೇವೆಗೆ ಶೇಕಡಾ ಒಂದು (1) ರಷ್ಟು ಮೊತ್ತವನ್ನು ಸೇವಾ ಹಿರಿತನ ಪರಿಗಣನೆ ಭತ್ಯೆಯನ್ನಾಗಿ ಗರಿಷ್ಠ ಶೇಕಡಾ ಹತ್ತು (10) ರ ಮೇಲ್ಮಿತಿಗೆ ಒಳಪಟ್ಟು ಪಡೆಯಲು ಕಾರ್ಮಿಕರು ಅರ್ಹರಿರುತ್ತಾರೆ. ಪರಂತು ಈ ಅಧಿಸೂಚನೆ ಜಾರಿಗೆ ಬಂದ ದಿನಾಂಕಕ್ಕೆ ಇಪ್ಪತ್ತು (20) ವರ್ಷಕ್ಕಿಂತ ಹೆಚ್ಚಿನ ಸೇವೆಯನ್ನು ಸಲ್ಲಿಸಿದ ಕಾರ್ಮಿಕರಿದ್ದಲ್ಲಿ ಒಂದು ಸಲಕ್ಕೆ ಮಾತ್ರ ಸೇವಾ ಹಿರಿತನ ಮೊತ್ತವನ್ನು ಆಯಾ ಕಾರ್ಮಿಕ ವರ್ಗಕ್ಕೆ ನಿಗಧಿಪಡಿಸಿರುವ ಒಟ್ಟು ಮಾಸಿಕ ಕನಿಷ್ಠ ವೇತನದ ಶೇ 10ರ ಗರಿಷ್ಠಮಿತಿಗೆ ಒಳಪಟ್ಟು ಪಡೆಯಲು ಅರ್ಹರಿರುತ್ತಾರೆ. ಈ ಸೇವಾ ಹಿರಿತನ ಪರಿಗಣನೆ ಭತ್ಯೆಯ ಮೊತ್ತವು ಮೇಲ್ಕಂಡ ಷರತ್ತು ಸಂಖ್ಯೆ 1ರಲ್ಲಿ ವಿಧಿಸಿದ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು ಹೊರತುಪಡಿಸಿ, ಮೂಲವೇತನದ ಆಧಾರದಲ್ಲಿ ನಿಗದಿಪಡಿಸಿದ ' ಸೇವಾ ಹಿರಿತನದ ಪರಿಗಣನೆ ಭತ್ಯೆಯ ಮೊತ್ತ' ವಾಗಿರುತ್ತದೆ.

***ವಿವರಣೆ:*** "ನಿರಂತರ ಸೇವೆಯನ್ನು ಲೆಕ್ಕ ಮಾಡಬೇಕಾದಾಗ ಹಿಂದಿನ ಆರ್ಥಿಕ ವರ್ಷದಲ್ಲಿ, ಸದರಿ ಸಂಸ್ಥೆಯಲ್ಲಿ ಕನಿಷ್ಠ ಎರಡು ನೂರ ನಲವತ್ತು (240) ದಿನಗಳು ಸೇವೆ ಸಲ್ಲಿಸಿದ ಕಾರ್ಮಿಕನು ಸದರಿ ವರ್ಷದಲ್ಲಿ ನಿರಂತರ ಸೇವೆ ಸಲ್ಲಿಸಿರುತ್ತಾನೆಂದು ಉದ್ಯೋಗದಾತರು ಪರಿಗಣಿಸತಕ್ಕದ್ದು"

3. **ಮಹಿಳೆಯರಿಗೆ ಸಮಾನ ವೇತನ :** ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಹಾಗೂ ಸಮ ಪ್ರಮಾಣದ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರಯರಿಗೂ ಸಮಾನ ದರದ ವೇತನಗಳನ್ನು ಉದ್ಯೋಗದಾತರು ಸಮಾನ ವೇತನ ಕಾಯ್ದೆ–1976ರ ಪ್ರಾವಧಾನಗಳನ್ವಯ ಮಹಿಳಾ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು.

4. **ಕಾರ್ಮಿಕರ ಹಕ್ಕುಗಳ ರಕ್ಷಣೆ:** ಯಾವುದೇ ಪ್ರದೇಶ ಅಥವಾ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಈ ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ಕನಿಷ್ಠ ವೇತನದ ದರಗಳಿಗಿಂತ ಹೆಚ್ಚಿನ ವೇತನವನ್ನು ಈಗಾಗಲೇ ಕೈಗಾರಿಕಾ ವಿವಾದಗಳ ಕಾಯ್ದೆ–1947 ರಡಿಯಲ್ಲಿಯ ಒಪ್ಪಂದ, ಕರಾರು ಅಥವಾ ಬೇರೆ ಯಾವುದೇ ರೀತಿಯನ್ವಯ ಪಡೆಯುತ್ತಿದ್ದಲ್ಲಿ, ಸದರಿ ಹೆಚ್ಚಿನ ವೇತನವನ್ನು ಮುಂದುವರೆದು ಪಡೆಯಲು ಕಾರ್ಮಿಕರು ಅರ್ಹರಾಗಿದ್ದು, ಅದನ್ನು ಪಾವತಿಸಲು ಉದ್ಯೋಗದಾತರು ಬಾಧ್ಯಸ್ಥರಿರುತ್ತಾರೆ.

5. **ಸಮರೂಪದ ಕೆಲಸದ ವರ್ಗಗಳಿಗೆ ಸಮನಾದ ವೇತನ:** ಈ ಅಧಿಸೂಚನೆಯಲ್ಲಿ ಕೆಲಸದ ಸ್ವರೂಪದ ವರ್ಗವನ್ನು ನಮೂದಿಸದೇ ಇರುವ ಕೆಲಸದ ಸ್ವರೂಪದ ವರ್ಗಗಳಿಗೆ ಸೇರಿದ ಕಾರ್ಮಿಕರಿಗೆ ಅದೇ ಸ್ವರೂಪದ (ಸಮಾನ) ಕೆಲಸ ನಿರ್ವಹಿಸುತ್ತಿರುವ ಇತರೆ ಕೆಲಸದ ಸ್ವರೂಪದ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಉದ್ಯೋಗದಾತರು ಸಂದಾಯ ಮಾಡತಕ್ಕದ್ದು. ಈ ಕುರಿತು ಯಾವುದೇ ವಿವಾದ ಉದ್ಭವಿಸಿದಲ್ಲಿ, ಸಂಬಂಧಿಸಿದ ಉದ್ಯೋಗದಾತರು ಒಂದು ತ್ರಿಪಕ್ಷಿಯ (ಸ್ವತಂತ್ರ ಸದಸ್ಯರು–3, ಕಾರ್ಮಿಕ ಪ್ರತಿನಿಧಿಗಳು –3 ಹಾಗೂ ಉದ್ಯೋಗದಾತರು –3, ಹೀಗೆ ಒಟ್ಟು ಒಂಬತ್ತು ಜನರ) ಸಮಿತಿಯನ್ನು ರಚಿಸಿ, ಸದರಿ ಸಮಿತಿಯು ಸ್ವಾಭಾವಿಕ ನ್ಯಾಯತತ್ವಗಳನ್ನು ಪರಿಪಾಲಿಸಿ, ಪಕ್ಷಗಾರರ ವಾದಗಳನ್ನು ಆಲಿಸಿ, ಎಲ್ಲಾ ವಿವಾದಾಂಶಗಳನ್ನು ಹಾಗೂ ಕೆಲಸದ ಕೌಶಲ್ಯದ ವರ್ಗವನ್ನು ಸಹ ವಿಶ್ಲೇಷಿಸಿ ಎರಡು ತಿಂಗಳ ಅವಧಿಯೊಳಗೆ ನೀಡುವ ಕನಿಷ್ಠ ವೇತನ ದರದ ವರದಿಯನ್ವಯ ಕ್ರಮವಹಿಸತಕ್ಕದ್ದು. ಸದರಿ ವರದಿಯ ಅನುಷ್ಠಾನಕ್ಕಾಗಿ "ಸಕ್ಷಮ ಅಧಿಕಾರಿ"ಯನ್ನು ಉದ್ಯೋಗದಾತರು ನಿಯುಕ್ತಿಗೊಳಿಸತಕ್ಕದ್ದು. ಸಕ್ಷಮ ಅಧಿಕಾರಿಯ ವರದಿ ಅನುಷ್ಠಾನ ಕ್ರಮದ ಬಗ್ಗೆ ಅಥವಾ ವರದಿಯ ಬಗ್ಗೆ ವಿವಾದವಿದ್ದಲ್ಲಿ, ಈ ಕುರಿತು "ಮೇಲ್ಮನವಿ ಪ್ರಾಧಿಕಾರಿ"ಯನ್ನು ಸಹ ನಿಯುಕ್ತಿಗೊಳಿಸಿ, ಉದ್ಯೋಗದಾತರು ಅಧಿಸೂಚನೆಯನ್ನು ಹೊರಡಿಸತಕ್ಕದ್ದು. ಒಂದು ತಿಂಗಳ

ಕಾಲಮಿತಿಯೊಳಗೆ 'ಸಕ್ಷಮ ಪ್ರಾಧಿಕಾರಿ' ಹಾಗೂ 'ಮೇಲ್ಮನವಿ ಪ್ರಾಧಿಕಾರಿ' ಗಳು ಸ್ವಾಭಾವಿಕ ನ್ಯಾಯತತ್ವಗಳನ್ವಯ ಪ್ರಕರಣಗಳ ಇತ್ಯರ್ಥಕ್ಕೆ ಕ್ರಮವಹಿಸತಕ್ಕದ್ದು. ' ಮೇಲ್ಮನವಿ ಪ್ರಾಧಿಕಾರಿ' ಯ ನಿರ್ಣಯವು ಅಂತಿಮವಾಗಿದ್ದು, ಅದನ್ನು ಪಾಲಿಸಲು ಎಲ್ಲಾ ಪಕ್ಷಗಾರರು ಬಾಧ್ಯಸ್ಥರಿರುತ್ತಾರೆ.

6. **ಕನಿಷ್ಠ ವೇತನ ಸ್ವೀಕರಿಸುವ ಹಕ್ಕಿನ ರಕ್ಷಣೆ:** ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ ಎಂಟು (8) ಗಂಟೆಗಳ ಕೆಲಸದ ವೇತನವು ಅದೇ ಸ್ವರೂಪದ (ತರಹದ) ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರದಂತೆ ಉದ್ಯೋಗದಾತರು ಕ್ರಮವಹಿಸತಕ್ಕದ್ದು. ಈ ಬಗ್ಗೆ ವಿವಾದವಿದ್ದಲ್ಲಿ ಮೇಲ್ಕಂಡ ಷರತ್ತು ಸಂಖ್ಯೆ-5 ರಲ್ಲಿಯ ವಿವಾದ-ಪರಿಹಾರ ವ್ಯವಸ್ಥೆಯನ್ನು ಉದ್ಯೋಗದಾತರು ಸೃಷ್ಟಿಸಿ, ಕಾನೂನುಸಮ್ಮತ ಪರಿಹಾರವನ್ನು ರೂಪಿಸತಕ್ಕದ್ದು.

7. **ದುಡಿಮೆಯ ಅವಧಿಯ ಪ್ರಮಾಣಕ್ಕನುಗುಣವಾಗಿ ಕನಿಷ್ಠ ವೇತನ:** ಒಂದು ದಿನದ ಕೆಲಸ ಎಂದರೆ ಎಂಟು (8) ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು ಎಂಟು (8) ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಥವಾ ಕಾರ್ಮಿಕರು ಕೆಲಸ ನಿರ್ವಹಿಸಿದ್ದಲ್ಲಿ, ಅಂತಹ ಕಡಿಮೆ ಅವಧಿಯ ಪ್ರಮಾಣಕ್ಕನುಗುಣವಾಗಿ ಕನಿಷ್ಠ ವೇತನವನ್ನು ಕರ್ನಾಟಕ ಕನಿಷ್ಠ ವೇತನ ನಿಯಮಗಳು, 1958ರ ನಿಯಮ 27 ರನ್ವಯ ಆ ಕೆಲಸದ ವರ್ಗಕ್ಕೆ ನಿಗದಿಪಡಿಸಿರುವ ದಿನವೊಂದರ ಕನಿಷ್ಠ ವೇತನವನ್ನು ಗಂಟೆಗಳ ಕನಿಷ್ಠ ವೇತನವನ್ನಾಗಿ ಲೆಕ್ಕ ಹಾಕಿ, ಸಂಬಂಧಿಸಿದ ಕಾರ್ಮಿಕರಿಗೆ ಉದ್ಯೋಗದಾತರು ಪಾವತಿಸತಕ್ಕದ್ದು.

8. **ಕನಿಷ್ಠ ವೇತನದ ಪಾವತಿಯ ವಿಧಾನ :** ನಿಗಧಿತ ಕನಿಷ್ಠ ವೇತನದ ಮೂಲವೇತನ ಹಾಗೂ ತುಟ್ಟಿಭತ್ಯೆ ಲೆಕ್ಕಾಚಾರದಲ್ಲಿ ರೂಪಾಯಿಯ ಭಾಗಾಂಶವು ಬಂದ ಪಕ್ಷದಲ್ಲಿ ಅದನ್ನು ಸಮೀಪದ ಹೆಚ್ಚಿನ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ, ಕಾರ್ಮಿಕರಿಗೆ ಪಾವತಿಸತಕ್ಕದ್ದು.

9. **ಬ್ಯಾಂಕ್ ಖಾತೆಯ ಮೂಲಕ ವೇತನ ಪಾವತಿ:** ವೇತನ ಪಾವತಿ ಕಾಯ್ದೆ-1936ರ ಕಲಂ 6 ರ ಪ್ರಾವಧಾನದ ಅನ್ವಯ ಕಾರ್ಮಿಕರಿಗೆ ವೇತನವನ್ನು ಉದ್ಯೋಗದಾತರು ನೇರವಾಗಿ ಕಾರ್ಮಿಕರ ಬ್ಯಾಂಕ್ ಖಾತೆಗೆ ವರ್ಗಾಯಿಸುವ ಮೂಲಕ ಪಾವತಿಸತಕ್ಕದ್ದು.

10. **ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನ ದರಗಳ ಅನ್ವಯಿಸುವಿಕೆ:** ಈ ಅನುಸೂಚಿತ ಉದ್ದಿಮೆಗೆ ಒಳಪಡುವ ಸಂಸ್ಥೆಗಳಲ್ಲಿ ಹೊರಗುತ್ತಿಗೆ ವ್ಯವಸ್ಥೆಯ ಮೂಲಕ ಗುತ್ತಿಗೆ ಕಾರ್ಮಿಕ (ನಿಷೇದ ಮತ್ತು ನಿಯಂತ್ರಣ) ಕಾಯ್ದೆ-1970 ಹಾಗೂ ಇತರೆ ಶಾಸನಬದ್ದ ವ್ಯವಸ್ಥೆಗಳನ್ವಯ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೂ ಕೂಡಾ ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಉದ್ಯೋಗದಾತರು ಅನ್ವಯಿಸಿ, ಪಾವತಿಯನ್ನು ಮಾಡತಕ್ಕದ್ದು.

11. **ಸಾಮಾಜಿಕ ಭದ್ರತೆಯ ಕಾಯ್ದೆಗಳಡಿಯಲ್ಲಿ ಉದ್ಯೋಗದಾತರ ವಂತಿಗೆಯ ಪಾವತಿ:** ಕನಿಷ್ಠ ವೇತನದ ಮೊತ್ತವು ( ಮೂಲ ವೇತನ + ತುಟ್ಟಿಭತ್ಯೆ) ಕರ್ತವ್ಯ ನಿರ್ವಹಿಸಿದ ಕಾರ್ಮಿಕನ ಅರ್ಜಿತ ವೇತನವಾಗಿದ್ದು, ಉದ್ಯೋಗದಾತರು ಈ ಕೆಳಕಂಡ ಕಾಯ್ದೆಗಳಡಿಯಲ್ಲಿ ಪಾವತಿಸಬೇಕಾದ " ಉದ್ಯೋಗದಾತರ ವಂತಿಗೆ " ಯನ್ನು ಕಾರ್ಮಿಕರ ಅರ್ಜಿತ ಕನಿಷ್ಠ ವೇತನದ ಮೊತ್ತದಿಂದ ಕಡಿತಗೊಳಿಸದೆ, ಪ್ರತ್ಯೇಕವಾಗಿ ಉದ್ಯೋಗದಾತರ ಸಂಪನ್ಮೂಲದಿಂದಲೇ ಪಾವತಿ ಮಾಡತಕ್ಕದ್ದು;

1. ನೌಕರರ ರಾಜ್ಯ ವಿಮಾ ಕಾಯ್ದೆ-1948
2. ನೌಕರರ ಭವಿಷ್ಯ ನಿಧಿ ಹಾಗೂ ಇತರೆ ಪ್ರಾವಧಾನಗಳ ಕಾಯ್ದೆ-1952

12. **ರಜಾದಿನದಲ್ಲಿಯ ದುಡಿಮೆಯ ವೇತನ :** ಉದ್ಯೋಗದಾತರ ಸಂಸ್ಥೆಯಲ್ಲಿ ಶಾಸನದನ್ವಯ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ, 1948 ಮತ್ತು ಅದರಡಿಯ ಕರ್ನಾಟಕ ನಿಯಮಗಳಲ್ಲಿಯ ಪ್ರಾವದಾನಗಳು ಹಾಗೂ ಕರ್ನಾಟಕ ಔದ್ಯೋಗಿಕ ಸಂಸ್ಥೆಗಳು (ರಾಷ್ಟ್ರೀಯ ಮತ್ತು ಹಬ್ಬದ ರಜಾದಿನಗಳು) ಕಾಯ್ದೆ-1963ರ ಪ್ರಾವಧಾನಗಳನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

13. **ಹೆಚ್ಚುವರಿ ಅವಧಿ ದುಡಿಮೆಯ ವೇತನ:** ಕೆಲಸಗಾರರು ದಿನದ ನಿಗಧಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಕಾರ್ಮಿಕರಿಗೆ ಹೆಚ್ಚುವರಿ ಅವಧಿಯ ಕೆಲಸಕ್ಕೆ ಕನಿಷ್ಠ ವೇತನ ಕಾಯ್ದೆ-1948 ರ ಕಲಂ 14 ರನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

14. **ಅಪ್ರೆಂಟೈಸ್ ಅವಧಿಯ ವೇತನ :** ಯಾವುದೇ ಉದ್ಯೋಗದಾತರ ಸಂಸ್ಥೆಯಲ್ಲಿ ಸೇವಾನುಭವ ಪಡೆಯುವುದಕ್ಕಾಗಿ ದಿ ಅಪ್ರೆಂಟೈಸ್ ಕಾಯ್ದೆ -1961 ರ ಪ್ರಾವಧಾನಗಳನ್ವಯ ತರಬೇತಿ ಪಡೆಯುವ ಅಪ್ರೆಂಟೈಸ್‌ಗಳಿಗೆ ದಿ ಅಪ್ರೆಂಟೈಸ್ ಕಾಯ್ದೆ -1961 ರ ಪ್ರಾವಧಾನಗಳನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

15. **ಸ್ಥಾಯಿ ಆದೇಶಗಳಲ್ಲಿಯ ಪ್ರಾವಧಾನಗಳನ್ವಯ ತರಬೇತಿ ಅವಧಿಯ ವೇತನ:** ಯಾವುದೇ ಉದ್ಯೋಗದಾತರ ಸಂಸ್ಥೆಯಲ್ಲಿ ತರಬೇತಿ, ಪಡೆಯುವ ಉದ್ಯೋಗಿಗಳಿಗೆ ಔದ್ಯೋಗಿಕ ಉದ್ಯೋಗಗಳ (ಸ್ಥಾಯಿ ಆದೇಶಗಳ) ಕಾಯ್ದೆ 1946 ಹಾಗೂ ಅದರಡಿಯ ಕರ್ನಾಟಕ ನಿಯಮಗಳನ್ವಯ ಪ್ರಮಾಣೀಕೃತ ಸ್ಥಾಯಿ ಆದೇಶಗಳಲ್ಲಿ ಅಥವಾ ಮಾದರಿ ಸ್ಥಾಯಿ ಆದೇಶಗಳಲ್ಲಿ ನಿಗಧಿತವಾದ "ತರಬೇತಿ ಅವಧಿ"ಯಲ್ಲಿ ಈ ಅಧಿಸೂಚನೆಯ ಮೂಲಕ ನಿಗಧಿಗೊಳಿಸಿದ ಕನಿಷ್ಠ ವೇತನದ ಶೇಕಡಾ 75 (ಎಪ್ಪತ್ತೈದು) ರಷ್ಟು ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

16. **ಸರ್ಕಾರದ ಯೋಜನೆ / ಕಾರ್ಯಕ್ರಮದಡಿಯಲ್ಲಿ ಹಾಗೂ ಸಾಮಾನ್ಯ ತರಬೇತಿಯ ಅವಧಿಯ ವೇತನ:** ಮೇಲ್ಕಂಡ ಷರತ್ತು ಸಂಖ್ಯೆ 11 ಹಾಗೂ 12 ನ್ನು ಹೊರತುಪಡಿಸಿ, ತರಬೇತಿ ಪಡೆಯುವ ಉದ್ಯೋಗಿಗಳಿಗೆ (ಟ್ರೈನಿಗಳಿಗೆ) ಈ ಅಧಿಸೂಚನೆಯಡಿ ನಿಗಧಿಪಡಿಸಿದ ಕೆಲಸದ ಸ್ವರೂಪಗಳಿಗೆ ನಿಗಧಿಪಡಿಸಿರುವ ಕನಿಷ್ಠ ವೇತನವನ್ನು ಪಾವತಿಸತಕ್ಕದ್ದು. ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರ ಯಾವುದೇ ತರಬೇತಿಗಾಗಿ ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ರೂಪಿಸಿದ್ದು, ಸದರಿ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಉದ್ಯೋಗದಾತರು ಅನುಷ್ಠಾನಗೊಳಿಸುತ್ತಿದಲ್ಲಿ, ಸದರಿ ಯೋಜನೆಗಳಡಿಯಲ್ಲಿ / ಕಾರ್ಯಕ್ರಮದಡಿಯಲ್ಲಿ ನಿಗಧಿಪಡಿಸಿರುವ ವೇತನವನ್ನು ಉದ್ಯೋಗದಾತರು ತರಬೇತಿ ಪಡೆಯುವವರಿಗೆ ಪಾವತಿಸತಕ್ಕದ್ದು.

17. **ರೂಢಿಗತ ಸೌಲಭ್ಯಗಳ ಮುಂದುವರಿಕೆ:** ಅಧಿಸೂಚಿತ ಕನಿಷ್ಠ ವೇತನಕ್ಕೆ ಹೆಚ್ಚುವರಿಯಾಗಿ ರೂಡಿ ಮತ್ತು ಪದ್ಧತಿಯನ್ವಯ ವಸ್ತು ರೂಪದಲ್ಲಿ ಯಾವುದೇ ಸಂಭಾವನೆಯನ್ನು ಉದ್ಯೋಗದಾತರಿಂದ ಕಾರ್ಮಿಕರು ಪಡೆಯುತ್ತಿದ್ದಲ್ಲಿ, ಸದರಿ ಹೆಚ್ಚುವರಿ ವಸ್ತು ರೂಪದ ಸಂಭಾವನೆಯನ್ನು ಮುಂದುವರೆಸಲು ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

18. **ದಿವ್ಯಾಂಗ ಕಾರ್ಮಿಕರ ವೇತನ:** ವಿಕಲಚೇತನ ವ್ಯಕ್ತಿಗಳು ಕೆಲಸ ನಿರ್ವಹಿಸುತ್ತಿದ್ದಲ್ಲಿ ಸದರಿ ಕೆಲಸವನ್ನು ನಿರ್ವಹಿಸುತ್ತಿರುವ ಇತರೆ ಸಾಮಾನ್ಯ ಕಾರ್ಮಿಕರು ಪಡೆಯುತ್ತಿರುವ ವೇತನಕ್ಕೆ ಸಮನಾಗಿ ವೇತನವನ್ನು ಪಡೆಯಲು ವಿಕಲಚೇತನ (ದಿವ್ಯಾಂಗ) ಕಾರ್ಮಿಕರು ಅರ್ಹರಾಗಿದ್ದು, ಇದನ್ನು ವಿಕಲಾಂಗ ವ್ಯಕ್ತಿಗಳು (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಹಾಗೂ ಪೂರ್ಣ ಭಾಗವಹಿಸುವಿಕೆ) ಕಾಯ್ದೆ-1995 ರ ಪ್ರಾವಧಾನಗಳ ಹಿನ್ನೆಲೆಯಲ್ಲಿ ಪಾವತಿಸಲು ಉದ್ಯೋಗದಾತರು ಕ್ರಮವಹಿಸತಕ್ಕದ್ದು.

19. **ಕನಿಷ್ಠ ವೇತನ ಮೊತ್ತದ ಕಡ್ಡಾಯ ಪಾವತಿ:** ಕರ್ತವ್ಯ ನಿರ್ವಹಿಸಿದ ಕಾರ್ಮಿಕರಿಗೆ ಪಾವತಿ ಮಾಡುವ ಒಟ್ಟು ವೇತನವು, ಈ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ಕನಿಷ್ಠವೇತನ ದರಗಳನ್ನು ಮತ್ತು ಕಾಲಕಾಲಕ್ಕೆ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು ಸೇರ್ಪಡಿಸಿದಾಗ ಬರುವ ಮೊತ್ತಕ್ಕೆ ಕಡಿಮೆಯಾಗದಂತೆ ವೇತನವನ್ನು ಕಡ್ಡಾಯವಾಗಿ ಉದ್ಯೋಗದಾತರು ಪಾವತಿಸತಕ್ಕದ್ದು

20. **ಕಾರ್ಮಿಕರ ಕೆಲಸದ ಸ್ವರೂಪಗಳ ವರ್ಗೀಕರಣ:** ಕಾರ್ಮಿಕರು ಉದ್ಯೋಗದಾತರ ಸಂಸ್ಥೆಯಲ್ಲಿ ನಿರ್ವಹಿಸುವ ಕೆಲಸದ ಸ್ವರೂಪವನ್ನು ಅವರ ಕೌಶಲ್ಯಗಳಿಗನುಗುಣವಾಗಿ ನಾಲ್ಕು (04) ವರ್ಗಗಳಲ್ಲಿ ವಿಂಗಡಿಸಿದ್ದು, ಅದರ ಸಾಮಾನ್ಯ ವ್ಯಾಖ್ಯಾನ ಈ ಕೆಳಗಿನಂತಿದೆ;

**ಅ. ಅತಿ ಕುಶಲ:** ಅತಿ ಕುಶಲ ಕೆಲಸಗಾರರು ಎಂದರೆ ಯಾರು ಹೆಚ್ಚಿನ ನೈಪುಣ್ಯತೆ ಕೆಲಸವನ್ನು ಅತಿ ಹೆಚ್ಚು ನಿಖರವಾಗಿ ಮಾಡಬಲ್ಲವರಾಗಿದ್ದು, ನಕ್ಷೆಯನ್ನು ಓದಬಲ್ಲ ಮತ್ತು ಅದರ ಆಧಾರದ ಮೇಲೆ ಕೆಲಸ ಮಾಡಬಲ್ಲವರಾಗಿದ್ದು, ಅವರ ವಿಭಾಗದ 'ಕುಶಲ' ಮತ್ತು ಇತರೇ ಕೆಲಸಗಾರರ ಕೆಲಸವನ್ನು ನಿರ್ದೇಶಿಸಬಲ್ಲ ಸಾಮರ್ಥ್ಯವುಳ್ಳವರಾಗಿದ್ದು, ಆ ವಿಭಾಗದ ಕೆಲಸವನ್ನು ಸ್ವತಂತ್ರವಾಗಿ ನಿರ್ವಹಿಸಿಕೊಂಡು ಹೋಗಬಲ್ಲವರಾಗಿರಬೇಕು.

**ಆ. ಕುಶಲ:** ಕುಶಲ ಕೆಲಸಗಾರರು ಅಂದರೆ ಸ್ವತಂತ್ರವಾಗಿ ಹಾಗೂ ಪರಿಣಾಮಕಾರಿಯಾಗಿ ಮತ್ತು ಕೆಲಸವನ್ನು ಸರಿಯಾಗಿ ಮಾಡಬಲ್ಲ ಸಾಮರ್ಥ್ಯವುಳ್ಳ ಕಾರ್ಮಿಕ. ಅವಶ್ಯ ಬಿದ್ದರೆ ಸರಳವಾದ ನಕ್ಷೆಗಳನ್ನು ಓದಿ, ಕೆಲಸ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.

**ಇ. ಅರೆ ಕುಶಲ** : ತನ್ನ ಕಸುಬಿನ ಬಗ್ಗೆ ಸಾಕಷ್ಟು ಜ್ಞಾನವಿರುವ ಹಾಗೂ ಪುನರಾವರ್ತನೆ ಕೆಲಸ ಮಾಡುವ ಸಾಮರ್ಥ್ಯವುಳ್ಳ ಹಾಗೂ ಯಂತ್ರೋಪಕರಣಗಳ ಸಹಾಯದಿಂದ ಸರಳವಾದ ಕೆಲಸಗಳನ್ನು ಮಾಡಬಲ್ಲವರು.

**ಈ. ಕುಶಲರಲ್ಲದವರು** : ಸ್ವತಂತ್ರವಾದ ನಿರ್ಣಯದ ಅವಶ್ಯಕತೆಯಿಲ್ಲದ ಅಥವಾ ಹಿಂದಿನ ಅನುಭವ ಇಲ್ಲದೆ ಆದರೆ ಉದ್ಯೋಗದ ವಾತಾವರಣದ ಪರಿಚಯವಿದ್ದು ಕೆಲಸ ಮಾಡುವುದು, ದೈಹಿಕ ಪರಿಶ್ರಮವಿಲ್ಲದೆ ವಿವಿಧ ರೀತಿಯ ವಸ್ತುಗಳು ಮತ್ತು ಸಾಮಾನ್ಯ ಜ್ಞಾನವಿರುವ ಕೆಲಸವನ್ನು ಮಾಡುವವರು.

21. **ಭೌಗೋಳಿಕ ಪ್ರದೇಶಗಳ ವರ್ಗೀಕರಣ:** ಕನಿಷ್ಠ ವೇತನ ದರಗಳನ್ನು ರಾಜ್ಯದ ನಾಲ್ಕು (04) ಭೌಗೋಳಿಕ ಪ್ರದೇಶವಾರು ಆಧಾರದ ಮೇಲೆ ಅಧಿಸೂಚಿಸಲಾಗಿದ್ದು, ಈ ಭೌಗೋಳಿಕ ಪ್ರದೇಶಗಳ ವಿವರಣೆಯನ್ನು ಈ ಕೆಳಕಂಡಂತೆ ನೀಡಲಾಗಿರುತ್ತದೆ;

| | | |
|---|---|---|
| ಅ | ವಲಯ – 1 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿಯ ಅಧಿಸೂಚಿತ ಪ್ರದೇಶಗಳು |
| ಆ | ವಲಯ – 2 | ವಲಯ–1 ಅನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಮಹಾನಗರಪಾಲಿಕೆಗಳ ವ್ಯಾಪ್ತಿಯಲ್ಲಿಯ ಅಧಿಸೂಚಿತ ಪ್ರದೇಶಗಳು |
| ಇ | ವಲಯ – 3 | ವಲಯ–1 ಹಾಗೂ ವಲಯ–2 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು. |
| ಈ | ವಲಯ – 4 | ವಲಯ–1, ವಲಯ–2 ಮತ್ತು 3 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಇತರೆ ಎಲ್ಲಾ ಪ್ರದೇಶಗಳು |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ.

**ಎಲ್.ಎಸ್.ಶ್ರೀಕಂಠಬಾಬು,**
ಸರ್ಕಾರದ ಉಪ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

**PR-49**
**SC-200**

## ಕಾರ್ಮಿಕ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ : ಕಾಇ 24 ಎಲ್ಎಂಡಬ್ಲ್ಯೂ 2017, ಬೆಂಗಳೂರು, ದಿನಾಂಕ : 30–12–2017**

ಕರ್ನಾಟಕ ರಾಜ್ಯದಾದ್ಯಂತ **"ಮರಗೆಲಸ ಅಥವಾ ಮರ ಕೊಯ್ಯುವ, (Wood Work Including Carpentry and Saw Mill Industry)"** ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಅನ್ವಯವಾಗುವ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲುದ್ದೇಶಿಸಿ, ರಾಜ್ಯ ಸರ್ಕಾರವು ತನಗೆ ಕನಿಷ್ಠ ವೇತನ ಕಾಯ್ದೆ, 1948ರ ಕಲಂ 5 (1)(ಬಿ) ರ ಪ್ರಾವಧಾನದನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರಡು ಅಧಿಸೂಚನೆ ಸಂಖ್ಯೆ: ಕಾಇ 24 ಎಲ್ಎಂಡಬ್ಲ್ಯೂ 2017, ಬೆಂಗಳೂರು ದಿನಾಂಕ: 28–04–2017 ಅನ್ನು ಕರ್ನಾಟಕ ರಾಜ್ಯಪತ್ರದ ಭಾಗ 4ಎ ಭಾಗ ಪುಟ ಸಂಖ್ಯೆ: 4532 ರಿಂದ 4536 ರಲ್ಲಿ ದಿನಾಂಕ: 22 ನೇ ಜೂನ್ 2017 ರಂದು ಪ್ರಕಟಿಸಿರುತ್ತದೆ ಹಾಗೂ ತನ್ಮೂಲಕ ಈ ಕರಡು ಅಧಿಸೂಚನೆಯಿಂದ ಬಾಧಿತರಾಗುವ ಹಾಗೂ ಸಂಬಂಧವಿರುವ ವ್ಯಕ್ತಿಗಳು ಹಾಗೂ ಅವರನ್ನು ಪ್ರತಿನಿಧಿಸುವ ಸಂಘ–ಸಂಸ್ಥೆಗಳ ಗಮನಕ್ಕೆ ವಿಷಯವನ್ನು ರಾಜ್ಯ ಸರ್ಕಾರವು ತಂದಿರುತ್ತದೆ. ರಾಜ್ಯ ಸರ್ಕಾರವು ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸಲು ಎರಡು (02) ತಿಂಗಳ ಕಾಲಾವಕಾಶವನ್ನು ಸಂಬಂಧಿಸಿದವರೆಲ್ಲರಿಗೂ ಕಲ್ಪಿಸಿರುತ್ತದೆ. ಸದರಿ ಅವಧಿಯಲ್ಲಿ ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಹಲವು ನಿರ್ದಿಷ್ಟವಾದ ಹಾಗೂ ಸಾಮಾನ್ಯವಾದ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸಂಬಂಧಿಸಿದವರಿಂದ ರಾಜ್ಯ ಸರ್ಕಾರವು ಸ್ವೀಕರಿಸಿರುತ್ತದೆ.

ರಾಜ್ಯ ಸರ್ಕಾರವು ತನ್ನ ಪತ್ರ ಸಂಖ್ಯೆ: ಕಾಇ 02 ಎಲ್ಎಂಡಬ್ಲ್ಯೂ 2017 ದಿನಾಂಕ: 08–11–2017 ರ ಮೂಲಕ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಸಭೆಯನ್ನು ಕರೆದು ಸದರಿ ಕರಡು ಅಧಿಸೂಚನೆ ಬಗ್ಗೆ ಸಲಹೆಗಳನ್ನು ನೀಡುವಂತೆ ಸೂಚಿಸಲಾಗಿ, ದಿನಾಂಕ: 06–12–2017 ರಂದು ನಿಯಮಾನುಸಾರ ನಡೆದ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಸಭೆಯಲ್ಲಿ ಮೇಲ್ಕಂಡ ಕರಡು ಅಧಿಸೂಚನೆ ಹಾಗೂ ಅದಕ್ಕೆ ಸಂಬಂಧಿಸಿದಂತೆ ಸ್ವೀಕರಿಸಲಾದ ಸಲಹೆಗಳು ಹಾಗೂ ಆಕ್ಷೇಪಣೆಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸದರಿ ಮಂಡಳಿಯಲ್ಲಿ ಸರ್ಕಾರದ ಪ್ರಸ್ತಾವನೆಯನ್ನು ಸುಧೀರ್ಘವಾಗಿ ಸಮಾಲೋಚಿಸಿ, **ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಮಂಡಳಿಯು ಸರ್ಕಾರಕ್ಕೆ ತನ್ನ ಶಿಫಾರಸ್ಸನ್ನು ನೀಡಿರುತ್ತದೆ.**

ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯು ದಿನಾಂಕ: 06–12–2017ರ ಸಭೆಯಲ್ಲಿ ನೀಡಿರುವ ಸಲಹೆಗಳನ್ನು ಹಾಗೂ ಸಂಬಂಧಿಸಿದ ಇತರೆ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿರುವ ರಾಜ್ಯ ಸರ್ಕಾರವು, ತನಗೆ ಕನಿಷ್ಠ ವೇತನ ಕಾಯ್ದೆ, 1948ರ ಕಲಂ 3(1)(ಬಿ) ಸಹವಾಚಿತ ಕಲಂ 5(1)(ಬಿ) ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ತತ್ಸಂಬಂಧದ ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಕರ್ನಾಟಕ ರಾಜ್ಯದಾದ್ಯಂತ **"ಮರಗೆಲಸ ಅಥವಾ ಮರ ಕೊಯ್ಯುವ, (Wood Work Including Carpentry and Saw Mill Industry)"** ಅನುಸೂಚಿತ ಉದ್ದಿಮೆಯ

ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ **ಈ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ** ಈ ಕೆಳಕಂಡ ಕನಿಷ್ಠ ವೇತನ ದರಗಳ ಕೋಷ್ಟಕದಲ್ಲಿರುವಂತೆ, ಕನಿಷ್ಠ ವೇತನ ದರಗಳನ್ನು ಈ ಅಧಿಸೂಚನೆಯ ಮೂಲಕ ಪರಿಷ್ಕರಿಸಲಾಗಿರುತ್ತದೆ. ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಪಾವತಿಸಲು, ಕನಿಷ್ಠ ವೇತನ ಕಾಯ್ದೆ–1948ರ ಕಲಂ 12 ರನ್ವಯ ಸಂಬಂಧಿಸಿದ ಎಲ್ಲಾ ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

**ಕನಿಷ್ಠ ವೇತನ ದರಗಳ ಕೋಷ್ಟಕ**

**"ಮರಗೆಲಸ ಅಥವಾ ಮರ ಕೊಯ್ಯುವ, (Wood Work Including Carpentry and Saw Mill Industry)"**

**ಎ. ಮರಗೆಲಸ ಕೈಗಾರಿಕೆ**

| ಕೆಲಸದ ವರ್ಗೀಕರಣ | ವಲಯ–1 | | ವಲಯ–2 | | ವಲಯ–3 | | ವಲಯ–4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| **ಅತಿ ಕುಶಲ ಕಾರ್ಮಿಕರು**<br>ಒಳಾಂಗಣ ವಿನ್ಯಾಸದ ನಮೂನೆ ತಯಾರಕರು,<br>ಒಳಾಂಗಣ ಅಲಂಕಾರ ಹಾಗೂ ಪೀಠೋಪಕರಣಗಳ ಹೊದಿಕೆ (Upholstry)<br>ಇತರೆ ಅತಿಕುಶಲ ಕೆಲಸಕ್ಕೆ | 15423–40 | 593–21 | 14688–95 | 564–96 | 13989–48 | 538–06 | 13323–31 | 512–44 |
| **ಕುಶಲ ಕಾರ್ಮಿಕರು**<br>ಪೀಠೋಪಕರಣ ಮತ್ತು ಕಟ್ಟಡಗಳಲ್ಲಿ ಮರಗೆಲಸ ಮಾಡುವ ಬಡಗಿಗಳು.<br>ಹೊಳಪುಗಾರರು (ಪಾಲಿಷ್ ಮಾಡುವವರು) ಕೆಲಸಗಾರರು (Upholstry) (2ನೇ ದರ್ಜೆ)<br>ಇತರೆ ಕುಶಲ ಕೆಲಸಕ್ಕೆ | 14021–27 | 539–28 | 13353–59 | 513–60 | 12717–71 | 489–14 | 12112–10 | 465–85 |
| **ಅರೆ ಕುಶಲ ಕಾರ್ಮಿಕರು**<br>ಸಹಾಯಕ ಬಡಗಿಗಳು,<br>ಪ್ಯಾಕರ್‌ಗಳು, ಸಹಾಯಕ ಹೊಳಪುಗಾರರು, ಮರದ ಚೌಕಟ್ಟುಗಳನ್ನು ಕಟ್ಟುವವರು<br>ಇತರೆ ಅರೆಕುಶಲ ಕೆಲಸಕ್ಕೆ | 12746–61 | 490–25 | 12139–63 | 466–91 | 11561–55 | 444–68 | 11011–00 | 423–50 |
| **ಅಕುಶಲ ಕಾರ್ಮಿಕರು**<br>ಅಭ್ಯಾಸಿ (ಅಪ್ರೆಂಟಿಸ್) ಗಳು<br>ಕೈ ದುಡಿಮೆಗಾರರು (Manual Worker)<br>ಇತರೆ ಅಕುಶಲ ಕೆಲಸಕ್ಕೆ | 11587–83 | 445–69 | 11036–03 | 424–46 | 10510–50 | 404–25 | 10010–00 | 385–00 |
| **ಬಿ. ಮರ ಕೊಯ್ಯುವ ಕಾರ್ಖಾನೆಗಳು** | | | | | | | | |
| **ಕುಶಲ ಕಾರ್ಮಿಕರು**<br>ಯಂತ್ರ ಮೇಜು ನಿರ್ವಹಣೆ ಮತ್ತು ಮೇಸ್ತ್ರಿಗಳು, ಗರಗಸ ಚೂಪು ಮಾಡುವವರು,<br>ಸರ್ಕುಲರ್ ಆಪರೇಟರ್ಸ್<br>ಇತರೆ ಕುಶಲ ಕೆಲಸಕ್ಕೆ | 14021–27 | 539–28 | 13353–59 | 513–60 | 12717–71 | 489–14 | 12112–10 | 465–85 |

| ಕೆಲಸದ ವರ್ಗೀಕರಣ | ವಲಯ-1 | | ವಲಯ-2 | | ವಲಯ-3 | | ವಲಯ-4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| <u>ಅರೆ ಕುಶಲ ಕಾರ್ಮಿಕರು</u><br>ಯಂತ್ರದ ಮೇಜು ನಿರ್ವಾಹಕನಿಗೆ ಸಹಾಯಕರು<br>ಕೈಯಿಂದ ಕೊಯ್ದು ದಿಮ್ಮಿ ತುಂಡು ಮಾಡುವವರು (Hand Sawyer & Logger)<br>ತಳ್ಳುಬಂಡಿ ನಿರ್ವಾಹಕರು<br>ಇತರೆ ಅರೆಕುಶಲ ಕೆಲಸಕ್ಕೆ | 12746-61 | 490-25 | 12139-63 | 466-91 | 11561-55 | 444-68 | 11011-00 | 423-50 |
| <u>ಅಕುಶಲ ಕಾರ್ಮಿಕರು</u><br>ಹಮಾಲರು, ಸಹಾಯಕರು<br>ಇತರ ಅಕುಶಲ ಕೆಲಸಕ್ಕೆ | 11587-83 | 445-69 | 11036-03 | 424-46 | 10510-50 | 404-25 | 10010-00 | 385-00 |

**ಕಛೇರಿ ಸಿಬ್ಬಂದಿಗಳು ಮತ್ತು ಚಾಲಕರು**

| ಹುದ್ದೆಗಳ ವಿವರ | ವಲಯ-1 | | ವಲಯ-2 | | ವಲಯ-3 | | ವಲಯ-4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| ಮ್ಯಾನೇಜರ್, ಪರ್ಸನಲ್ ಆಫೀಸರ್ ಮಾರ್ಕೆಟಿಂಗ್ ಮ್ಯಾನೇಜರ್/ ಕಛೇರಿ ಮೇಲ್ವಿಚಾರಣೆಯ ತತ್ಸಮಾನ ಹುದ್ದೆ, | 16423-00 | 631-00 | 15688-00 | 603-38 | 14989-00 | 576-50 | 14323-00 | 550-88 |
| ಅಸಿಸ್ಟೆಂಟ್ ಮ್ಯಾನೇಜರ್ ಅಸಿಸ್ಟೆಂಟ್ ಪರ್ಸನಲ್ ಮ್ಯಾನೇಜರ್, ಸೀನಿಯರ್ ಅಕೌಂಟೆಂಟ್ ಮತ್ತು ತತ್ಸಮಾನ ಹುದ್ದೆ. | 15423-40 | 593-21 | 14688-95 | 564-96 | 13989-48 | 538-06 | 13323-31 | 512-44 |
| ಹಿರಿಯ ಗುಮಾಸ್ತ, ಕ್ಯಾಷಿಯರ್, ಜಡ್ಜ್ಮೆಂಟ್ ರೈಟರ್, ಸ್ಟೆನೋಗ್ರಾಫರ್, ಸ್ಟೋರ್ ಕೀಪರ್, ರಿಸೆಪ್ಷನಿಸ್ಟ್, (ಸ್ವಾಗತಗಾರರು) ಮತ್ತು ತತ್ಸಮಾನ ಹುದ್ದೆ. | 14021-27 | 539-28 | 13353-59 | 513-60 | 12717-71 | 489-14 | 12112-10 | 465-85 |
| ಕಿರಿಯ ಗುಮಾಸ್ತ , ಬುಕಿಂಗ್ ಗುಮಾಸ್ತ, ಕಂಪ್ಯೂಟರ್ ಆಪರೇಟರ್, ಟೈಪಿಸ್ಟ್, ಟೆಲಿಫೋನ್ ಆಪರೇಟರ್, ಡಾಟಾ ಎಂಟ್ರೀ ಆಪರೇಟರ್ ಮತ್ತು ತತ್ಸಮಾನ ಹುದ್ದೆ. | 12746-61 | 490-25 | 12139-63 | 466-91 | 11561-55 | 444-68 | 11011-00 | 423-50 |
| ಜವಾನ, ವಾಚ್ಮನ್, ಲಿಫ್ಟ್ ಆಪರೇಟರ್, ಆಫೀಸ್ ಬಾಯ್, ಅಟೆಂಡರ್, ಹೆಲ್ಪರ್/ಸಹಾಯಕ, ದಲಾಯತ್, ಮಜ್ದೂರ್, ಸ್ವೀಪರ್ ಮತ್ತು ತತ್ಸಮಾನ ಹುದ್ದೆ. | 11587-83 | 445-69 | 11036-03 | 424-46 | 10510-50 | 404-25 | 10010-00 | 385-00 |

| ಹುದ್ದೆಗಳ ವಿವರ | ವಲಯ–1 | | ವಲಯ–2 | | ವಲಯ–3 | | ವಲಯ–4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| ಹೆವಿ ವೆಹಿಕಲ್ ಡ್ರೈವರ್, ಟ್ರ್ಯಾಕ್ಟರ್ ಡ್ರೈವರ್ ಬಹು ಆಕ್ಸೆಲ್ ಮತ್ತು ಘನ ವಾಹನ ಚಾಲಕರು, ಅರ್ಥ್ ಮೂವರ್ಸ್ ಚಾಲಕರು, ಕ್ರೇನ್ ಜೋಡಿಸಿದ ವಾಹನ ಚಾಲಕರು, ಟ್ರಾಕ್ಟರ್ ಚಾಲಕರು, ರೋಡ್ ರೋಲರ್ ಮತ್ತು ರಸ್ತೆ ನಿರ್ಮಾಣ ಕಾಮಗಾರಿ ವಾಹನಗಳ ಚಾಲಕರು | 14021–27 | 539–28 | 13353–59 | 513–60 | 12717–71 | 489–14 | 12112–10 | 465–85 |
| ಕಾರ್ ಡ್ರೈವರ್ ಜೀಪ್ ಡ್ರೈವರ್ ಲಘು ವಾಹನ ಚಾಲಕರು | 12746–61 | 490–25 | 12139–63 | 466–91 | 11561–55 | 444–68 | 11011–00 | 423–50 |
| ಟಂ ಟಂ, ತ್ರಿಚಕ್ರ ವಾಹನ ಚಾಲಕರು | 11587–83 | 445–69 | 11036–03 | 424–46 | 10510–50 | 404–25 | 10010–00 | 385–00 |

**ಮೇಲ್ಕಂಡ ಕೋಷ್ಟಕದಲ್ಲಿಯ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ರಾಜ್ಯ ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನಿಗದಿಪಡಿಸಿದ್ದು, ಈ ಎಲ್ಲಾ ಷರತ್ತುಗಳನ್ನು ಯಥಾವತ್ತಾಗಿ ಸಂಬಂಧಿಸಿದ ಉದ್ಯೋಗದಾತರು ಪಾಲಿಸಲು ಬಾಧ್ಯಸ್ಥರಿರುತ್ತಾರೆ;**

1 **ವ್ಯತ್ಯಾಸವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರ ಹಾಗೂ ಪಾವತಿ:** ನಿಗಧಿತ ಕನಿಷ್ಠ ವೇತನ ಕ್ಕನುಗುಣವಾಗಿ ಪಾವತಿಸಬೇಕಾದ ವ್ಯತ್ಯಸ್ಥವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಉದ್ಯೋಗದಾತರು ಮಾಡತಕ್ಕದ್ದು. ಹಿಂದಿನ ಕ್ಯಾಲೆಂಡರ್ ವರ್ಷದ ಹನ್ನೆರಡು (12) ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ತುಟ್ಟಿಭತ್ಯೆಯನ್ನು ಪ್ರತಿ ವರ್ಷದ ಏಪ್ರಿಲ್ ಮೊದಲನೇ ದಿನಾಂಕದಿಂದ ಅನ್ವಯವಾಗುವಂತೆ ಉದ್ಯೋಗದಾತರು ಪ್ರತಿ ವರ್ಷ ಲೆಕ್ಕಾಚಾರ ಮಾಡಿ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು. ಆದುದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2016 ರಿಂದ ಡಿಸೆಂಬರ್ 2016ರ) ಸರಾಸರಿ ಆಧಾರದ ಮೇಲೆ 2017 ಏಪ್ರಿಲ್ ಒಂದು (1) ನೇ ತಾರೀಖಿನಿಂದ ಜಾರಿಗೆ ಬರುತ್ತದೆ. ಗ್ರಾಹಕ ಬೆಲೆ ಸೂಚ್ಯಾಂಕ 6537 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ ನಾಲ್ಕು (4) ಪೈಸೆಯಂತೆ ಈ ಕೆಳಕಂಡ ವಿಧಾನದನ್ವಯ ಲೆಕ್ಕಾಚಾರ ಮಾಡಿ ತುಟ್ಟಿ ಭತ್ಯೆಯನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

**ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:–** ಮಾಸಿಕ ತುಟ್ಟಿಭತ್ಯೆ ಹಾಗೂ ದಿನದ ತುಟ್ಟಿಭತ್ಯೆಯನ್ನು ಕೆಳಕಂಡ ಸೂತ್ರಗಳನ್ವಯ ಕ್ರಮವಾಗಿ ಲೆಕ್ಕಾಚಾರ ಮಾಡತಕ್ಕದ್ದು;

**ಅ) ಮಾಸಿಕ ವೇತನವನ್ನು ಪಡೆಯುವವರು:–** ಮಾಸಿಕ ವೇತನ ಪಡೆಯುವ ಕಾರ್ಮಿಕರಿಗೆ ಈ ಕೆಳಕಂಡ ಸೂತ್ರದನ್ವಯ ತುಟಿಭತ್ಯೆಯನ್ನು ಲೆಕ್ಕ ಮಾಡತಕ್ಕದ್ದು ಹಾಗೂ ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸಿ ಪಾವತಿಸತಕ್ಕದ್ದು.

**ಮಾಸಿಕ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x ಮೂವತ್ತು(30) ದಿನಗಳು**

**ಆ) ದಿನಗೂಲಿ ವೇತನ ಪಡೆಯುವವರು :–** ದಿನಗೂಲಿ ಪಡೆಯುವ ಕಾರ್ಮಿಕರಿಗೆ ಮಾಸಿಕ ಕನಿಷ್ಠ ವೇತನ ದರವನ್ನು ಇಪ್ಪತ್ತಾರು (26) ದಿನಗಳಿಂದ ವಿಭಾಗಿಸಿ, {ನಾಲ್ಕು (4) ವಾರದ ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ} ಈ ಕೆಳಕಂಡ ಸೂತ್ರದನ್ವಯ ಲೆಕ್ಕ ಮಾಡತಕ್ಕದ್ದು. ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ ಅರ್ಹರಾದ ಕಾರ್ಮಿಕರಿಗೆ ಪಾವತಿಸತಕ್ಕದ್ದು.

**ದಿನದ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x ಮೂವತ್ತು(30) ದಿನಗಳು / ಇಪ್ಪತ್ತಾರು (26)**

2. **ಸೇವಾ ಹಿರಿತನ ಪರಿಗಣನೆ ಭತ್ಯೆ :** ಈ ಅಧಿಸೂಚನೆ ಜಾರಿಗೆ ಬಂದ ದಿನಾಂಕದಿಂದ ಯಾವುದೇ ಕಾರ್ಮಿಕನು ಒರ್ವ ಉದ್ಯೋಗದಾತರ ಸಂಸ್ಥೆಯಲ್ಲಿ ಅಥವಾ ಮಾಲೀಕರ ಅಧೀನದಲ್ಲಿ ನಿರಂತರ ಹತ್ತು (10) ವರ್ಷಗಳ ಸೇವೆಯನ್ನು ಸಲ್ಲಿಸಿದಲ್ಲಿ, ತನ್ನ ಪೂರ್ಣಗೊಳಿಸಿದ ಪ್ರತಿ ಹತ್ತು ವರ್ಷದ ಮೇಲ್ಪಟ್ಟ ಸೇವೆಗೆ ಅನುಗುಣವಾಗಿ ಆಯಾ ಕಾರ್ಮಿಕ ವರ್ಗಕ್ಕೆ ನಿಗದಿಪಡಿಸಿರುವ ಒಟ್ಟು ಮಾಸಿಕ ಕನಿಷ್ಠ ಮೂಲ ವೇತನದ ಮೇಲೆ ವರ್ಷವೊಂದರ ಸೇವೆಗೆ ಶೇಕಡಾ ಒಂದು (1) ರಷ್ಟು ಮೊತ್ತವನ್ನು ಸೇವಾ ಹಿರಿತನ ಪರಿಗಣನೆ ಭತ್ಯೆಯನ್ನಾಗಿ ಗರಿಷ್ಠ ಶೇಕಡಾ ಹತ್ತು (10) ರ ಮೇಲ್ಮಿತಿಗೆ ಒಳಪಟ್ಟು ಪಡೆಯಲು ಕಾರ್ಮಿಕರು ಅರ್ಹರಿರುತ್ತಾರೆ. ಪರಂತು ಈ ಅಧಿಸೂಚನೆ ಜಾರಿಗೆ ಬಂದ ದಿನಾಂಕಕ್ಕೆ ಇಪ್ಪತ್ತು (20) ವರ್ಷಕ್ಕಿಂತ ಹೆಚ್ಚಿನ ಸೇವೆಯನ್ನು ಸಲ್ಲಿಸಿದ ಕಾರ್ಮಿಕರಿದ್ದಲ್ಲಿ ಒಂದು ಸಲಕ್ಕೆ ಮಾತ್ರ ಸೇವಾ ಹಿರಿತನ ಮೊತ್ತವನ್ನು ಆಯಾ ಕಾರ್ಮಿಕ ವರ್ಗಕ್ಕೆ ನಿಗಧಿಪಡಿಸಿರುವ ಒಟ್ಟು ಮಾಸಿಕ ಕನಿಷ್ಠ ವೇತನದ ಶೇ 10ರ ಗರಿಷ್ಠಮಿತಿಗೆ ಒಳಪಟ್ಟು ಪಡೆಯಲು ಅರ್ಹರಿರುತ್ತಾರೆ.ಈ ಸೇವಾ ಹಿರಿತನ ಪರಿಗಣನೆ ಭತ್ಯೆಯ ಮೊತ್ತವು ಮೇಲ್ಕಂಡ ಷರತ್ತು ಸಂಖ್ಯೆ 1ರಲ್ಲಿ ವಿಧಿಸಿದ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು ಹೊರತುಪಡಿಸಿ, ಮೂಲವೇತನದ ಆಧಾರದಲ್ಲಿ ನಿಗದಿಪಡಿಸಿದ ' ಸೇವಾ ಹಿರಿತನದ ಪರಿಗಣನೆ ಭತ್ಯೆಯ ಮೊತ್ತ' ವಾಗಿರುತ್ತದೆ.

***ವಿವರಣೆ:*** "ನಿರಂತರ ಸೇವೆಯನ್ನು ಲೆಕ್ಕ ಮಾಡಬೇಕಾದಾಗ ಹಿಂದಿನ ಆರ್ಥಿಕ ವರ್ಷದಲ್ಲಿ, ಸದರಿ ಸಂಸ್ಥೆಯಲ್ಲಿ ಕನಿಷ್ಠ ಎರಡು ನೂರ ನಲವತ್ತು (240) ದಿನಗಳು ಸೇವೆ ಸಲ್ಲಿಸಿದ ಕಾರ್ಮಿಕನು ಸದರಿ ವರ್ಷದಲ್ಲಿ ನಿರಂತರ ಸೇವೆ ಸಲ್ಲಿಸಿರುತ್ತಾನೆಂದು ಉದ್ಯೋಗದಾತರು ಪರಿಗಣಿಸತಕ್ಕದ್ದು"

3. **ಮಹಿಳೆಯರಿಗೆ ಸಮಾನ ವೇತನ :** ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಹಾಗೂ ಸಮ ಪ್ರಮಾಣದ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರಯರಿಗೂ ಸಮಾನ ದರದ ವೇತನಗಳನ್ನು ಉದ್ಯೋಗದಾತರು ಸಮಾನ ವೇತನ ಕಾಯ್ದೆ–1976ರ ಪ್ರಾವಧಾನಗಳನ್ವಯ ಮಹಿಳಾ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು.

4. **ಕಾರ್ಮಿಕರ ಹಕ್ಕುಗಳ ರಕ್ಷಣೆ:** ಯಾವುದೇ ಪ್ರದೇಶ ಅಥವಾ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಈ ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ಕನಿಷ್ಠ ವೇತನದ ದರಗಳಿಗಿಂತ ಹೆಚ್ಚಿನ ವೇತನವನ್ನು ಈಗಾಗಲೇ ಕೈಗಾರಿಕಾ ವಿವಾದಗಳ ಕಾಯ್ದೆ–1947 ರಡಿಯಲ್ಲಿಯ ಒಪ್ಪಂದ, ಕರಾರು ಅಥವಾ ಬೇರೆ ಯಾವುದೇ ರೀತಿಯನ್ವಯ ಪಡೆಯುತ್ತಿದ್ದಲ್ಲಿ, ಸದರಿ ಹೆಚ್ಚಿನ ವೇತನವನ್ನು ಮುಂದುವರೆದು ಪಡೆಯಲು ಕಾರ್ಮಿಕರು ಅರ್ಹರಾಗಿದ್ದು, ಅದನ್ನು ಪಾವತಿಸಲು ಉದ್ಯೋಗದಾತರು ಬಾಧ್ಯಸ್ಥರಿರುತ್ತಾರೆ.

5. **ಸಮರೂಪದ ಕೆಲಸದ ವರ್ಗಗಳಿಗೆ ಸಮನಾದ ವೇತನ:** ಈ ಅಧಿಸೂಚನೆಯಲ್ಲಿ ಕೆಲಸದ ಸ್ವರೂಪದ ವರ್ಗವನ್ನು ನಮೂದಿಸದೇ ಇರುವ ಕೆಲಸದ ಸ್ವರೂಪದ ವರ್ಗಗಳಿಗೆ ಸೇರಿದ ಕಾರ್ಮಿಕರಿಗೆ ಅದೇ ಸ್ವರೂಪದ (ಸಮಾನ) ಕೆಲಸ ನಿರ್ವಹಿಸುತ್ತಿರುವ ಇತರೆ ಕೆಲಸದ ಸ್ವರೂಪದ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಉದ್ಯೋಗದಾತರು ಸಂದಾಯ ಮಾಡತಕ್ಕದ್ದು. ಈ ಕುರಿತು ಯಾವುದೇ ವಿವಾದ ಉದ್ಭವಿಸಿದಲ್ಲಿ, ಸಂಬಂಧಿಸಿದ ಉದ್ಯೋಗದಾತರು ಒಂದು ತ್ರಿಪಕ್ಷೀಯ (ಸ್ವತಂತ್ರ ಸದಸ್ಯರು–3, ಕಾರ್ಮಿಕ ಪ್ರತಿನಿಧಿಗಳು –3 ಹಾಗೂ ಉದ್ಯೋಗದಾತರು –3, ಹೀಗೆ ಒಟ್ಟು ಒಂಬತ್ತು ಜನರ) ಸಮಿತಿಯನ್ನು ರಚಿಸಿ, ಸದರಿ ಸಮಿತಿಯು ಸ್ವಾಭಾವಿಕ ನ್ಯಾಯತತ್ವಗಳನ್ನು ಪರಿಪಾಲಿಸಿ, ಪಕ್ಷಗಾರರ ವಾದಗಳನ್ನು ಆಲಿಸಿ, ಎಲ್ಲಾ ವಿವಾದಾಂಶಗಳನ್ನು ಹಾಗೂ ಕೆಲಸದ ಕೌಶಲ್ಯದ ವರ್ಗವನ್ನು ಸಹ ವಿಶ್ಲೇಷಿಸಿ ಎರಡು ತಿಂಗಳ ಅವಧಿಯೊಳಗೆ ನೀಡುವ ಕನಿಷ್ಠ ವೇತನ ದರದ ವರದಿಯನ್ವಯ ಕ್ರಮವಹಿಸತಕ್ಕದ್ದು. ಸದರಿ ವರದಿಯ ಅನುಷ್ಠಾನಕ್ಕಾಗಿ "ಸಕ್ಷಮ ಅಧಿಕಾರಿ"ಯನ್ನು ಉದ್ಯೋಗದಾತರು ನಿಯುಕ್ತಿ ಗೊಳಿಸತಕ್ಕದ್ದು. ಸಕ್ಷಮ ಅಧಿಕಾರಿಯ ವರದಿ ಅನುಷ್ಠಾನ ಕ್ರಮದ ಬಗ್ಗೆ ಅಥವಾ ವರದಿಯ ಬಗ್ಗೆ ವಿವಾದವಿದ್ದಲ್ಲಿ, ಈ ಕುರಿತು "ಮೇಲ್ಮನವಿ ಪ್ರಾಧಿಕಾರಿ"ಯನ್ನು ಸಹ ನಿಯುಕ್ತಿಗೊಳಿಸಿ, ಉದ್ಯೋಗದಾತರು ಅಧಿಸೂಚನೆಯನ್ನು ಹೊರಡಿಸತಕ್ಕದ್ದು. ಒಂದು ತಿಂಗಳ ಕಾಲಮಿತಿಯೊಳಗೆ 'ಸಕ್ಷಮ ಪ್ರಾಧಿಕಾರಿ' ಹಾಗೂ 'ಮೇಲ್ಮನವಿ ಪ್ರಾಧಿಕಾರಿ' ಗಳು ಸ್ವಾಭಾವಿಕ ನ್ಯಾಯತತ್ವಗಳನ್ವಯ ಪ್ರಕರಣಗಳ ಇತ್ಯರ್ಥಕ್ಕೆ ಕ್ರಮವಹಿಸತಕ್ಕದ್ದು. ' ಮೇಲ್ಮನವಿ ಪ್ರಾಧಿಕಾರಿ' ಯ ನಿರ್ಣಯವು ಅಂತಿಮವಾಗಿದ್ದು, ಅದನ್ನು ಪಾಲಿಸಲು ಎಲ್ಲಾ ಪಕ್ಷಗಾರರು ಬಾಧ್ಯಸ್ಥರಿರುತ್ತಾರೆ.

6. **ಕನಿಷ್ಠ ವೇತನ ಸ್ವೀಕರಿಸುವ ಹಕ್ಕಿನ ರಕ್ಷಣೆ:** ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ ಎಂಟು (8) ಗಂಟೆಗಳ ಕೆಲಸದ ವೇತನವು ಅದೇ ಸ್ವರೂಪದ (ತರಹದ) ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರದಂತೆ ಉದ್ಯೋಗದಾತರು ಕ್ರಮವಹಿಸತಕ್ಕದ್ದು. ಈ ಬಗ್ಗೆ ವಿವಾದವಿದ್ದಲ್ಲಿ ಮೇಲ್ಕಂಡ ಷರತ್ತು ಸಂಖ್ಯೆ–5 ರಲ್ಲಿಯ ವಿವಾದ–ಪರಿಹಾರ ವ್ಯವಸ್ಥೆಯನ್ನು ಉದ್ಯೋಗದಾತರು ಸೃಷ್ಟಿಸಿ, ಕಾನೂನುಸಮ್ಮತ ಪರಿಹಾರವನ್ನು ರೂಪಿಸತಕ್ಕದ್ದು.

7. **ದುಡಿಮೆಯ ಅವಧಿಯ ಪ್ರಮಾಣಕ್ಕನುಗುಣವಾಗಿ ಕನಿಷ್ಠ ವೇತನ:** ಒಂದು ದಿನದ ಕೆಲಸ ಎಂದರೆ ಎಂಟು (8) ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು ಎಂಟು (8) ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಥವಾ ಕಾರ್ಮಿಕರು ಕೆಲಸ ನಿರ್ವಹಿಸಿದ್ದಲ್ಲಿ, ಅಂತಹ ಕಡಿಮೆ ಅವಧಿಯ ಪ್ರಮಾಣಕ್ಕನುಗುಣವಾಗಿ ಕನಿಷ್ಠ ವೇತನವನ್ನು ಕರ್ನಾಟಕ ಕನಿಷ್ಠ ವೇತನ ನಿಯಮಗಳು, 1958ರ ನಿಯಮ 27 ರನ್ವಯ ಆ ಕೆಲಸದ ವರ್ಗಕ್ಕೆ ನಿಗದಿಪಡಿಸಿರುವ ದಿನವೊಂದರ ಕನಿಷ್ಠ ವೇತನವನ್ನು ಗಂಟೆಗಳ ಕನಿಷ್ಠ ವೇತನವನ್ನಾಗಿ ಲೆಕ್ಕ ಹಾಕಿ, ಸಂಬಂಧಿಸಿದ ಕಾರ್ಮಿಕರಿಗೆ ಉದ್ಯೋಗದಾತರು ಪಾವತಿಸತಕ್ಕದ್ದು.

8. **ಕನಿಷ್ಠ ವೇತನದ ಪಾವತಿಯ ವಿಧಾನ :** ನಿಗದಿತ ಕನಿಷ್ಠ ವೇತನದ ಮೂಲವೇತನ ಹಾಗೂ ತುಟ್ಟಿಭತ್ಯೆ ಲೆಕ್ಕಾಚಾರದಲ್ಲಿ ರೂಪಾಯಿಯ ಭಾಗಾಂಶವು ಬಂದ ಪಕ್ಷದಲ್ಲಿ ಅದನ್ನು ಸಮೀಪದ ಹೆಚ್ಚಿನ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ, ಕಾರ್ಮಿಕರಿಗೆ ಪಾವತಿಸತಕ್ಕದ್ದು.

9. **ಬ್ಯಾಂಕ್ ಖಾತೆಯ ಮೂಲಕ ವೇತನ ಪಾವತಿ:** ವೇತನ ಪಾವತಿ ಕಾಯ್ದೆ–1936ರ ಕಲಂ 6 ರ ಪ್ರಾವಧಾನದ ಅನ್ವಯ ಕಾರ್ಮಿಕರಿಗೆ ವೇತನವನ್ನು ಉದ್ಯೋಗದಾತರು ನೇರವಾಗಿ ಕಾರ್ಮಿಕರ ಬ್ಯಾಂಕ್ ಖಾತೆಗೆ ವರ್ಗಾಯಿಸುವ ಮೂಲಕ ಪಾವತಿಸತಕ್ಕದ್ದು.

10. **ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನ ದರಗಳ ಅನ್ವಯಿಸುವಿಕೆ:** ಈ ಅನುಸೂಚಿತ ಉದ್ದಿಮೆಗೆ ಒಳಪಡುವ ಸಂಸ್ಥೆಗಳಲ್ಲಿ ಹೊರಗುತ್ತಿಗೆ ವ್ಯವಸ್ಥೆಯ ಮೂಲಕ ಗುತ್ತಿಗೆ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ–1970 ಹಾಗೂ ಇತರೆ ಶಾಸನಬದ್ಧ ವ್ಯವಸ್ಥೆಗಳನ್ವಯ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೂ ಕೂಡಾ ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಉದ್ಯೋಗದಾತರು ಅನ್ವಯಿಸಿ, ಪಾವತಿಯನ್ನು ಮಾಡತಕ್ಕದ್ದು.

11. **ಸಾಮಾಜಿಕ ಭದ್ರತೆಯ ಕಾಯ್ದೆಗಳಡಿಯಲ್ಲಿ ಉದ್ಯೋಗದಾತರ ವಂತಿಗೆಯ ಪಾವತಿ:** ಕನಿಷ್ಠ ವೇತನದ ಮೊತ್ತವು (ಮೂಲ ವೇತನ + ತುಟ್ಟಿಭತ್ಯೆ) ಕರ್ತವ್ಯ ನಿರ್ವಹಿಸಿದ ಕಾರ್ಮಿಕನ ಅರ್ಜಿತ ವೇತನವಾಗಿದ್ದು, ಉದ್ಯೋಗದಾತರು ಈ ಕೆಳಕಂಡ ಕಾಯ್ದೆಗಳಡಿಯಲ್ಲಿ ಪಾವತಿಸಬೇಕಾದ "ಉದ್ಯೋಗದಾತರ ವಂತಿಗೆ" ಯನ್ನು ಕಾರ್ಮಿಕರ ಅರ್ಜಿತ ಕನಿಷ್ಠ ವೇತನದ ಮೊತ್ತದಿಂದ ಕಡಿತಗೊಳಿಸದೆ, ಪ್ರತ್ಯೇಕವಾಗಿ ಉದ್ಯೋಗದಾತರ ಸಂಪನ್ಮೂಲದಿಂದಲೇ ಪಾವತಿ ಮಾಡತಕ್ಕದ್ದು;

    1. ನೌಕರರ ರಾಜ್ಯ ವಿಮಾ ಕಾಯ್ದೆ–1948
    2. ನೌಕರರ ಭವಿಷ್ಯ ನಿಧಿ ಹಾಗೂ ಇತರೆ ಪ್ರಾವಧಾನಗಳ ಕಾಯ್ದೆ–1952

12. **ರಜಾದಿನದಲ್ಲಿಯ ದುಡಿಮೆಯ ವೇತನ :** ಉದ್ಯೋಗದಾತರ ಸಂಸ್ಥೆಯಲ್ಲಿ ಶಾಸನದನ್ವಯ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ, 1948 ಮತ್ತು ಅದರಡಿಯ ಕರ್ನಾಟಕ ನಿಯಮಗಳಲ್ಲಿಯ ಪ್ರಾವಧಾನಗಳು

ಹಾಗೂ ಕರ್ನಾಟಕ ಔದ್ಯೋಗಿಕ ಸಂಸ್ಥೆಗಳು (ರಾಷ್ಟ್ರೀಯ ಮತ್ತು ಹಬ್ಬದ ರಜಾದಿನಗಳ) ಕಾಯ್ದೆ-1963ರ ಪ್ರಾವಧಾನಗಳನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

13. **ಹೆಚ್ಚುವರಿ ಅವಧಿ ದುಡಿಮೆಯ ವೇತನ:** ಕೆಲಸಗಾರರು ದಿನದ ನಿಗಧಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಕಾರ್ಮಿಕರಿಗೆ ಹೆಚ್ಚುವರಿ ಅವಧಿಯ ಕೆಲಸಕ್ಕೆ ಕನಿಷ್ಠ ವೇತನ ಕಾಯ್ದೆ-1948 ರ ಕಲಂ 14 ರನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

14. **ಅಪ್ರೆಂಟೈಸ್ ಅವಧಿಯ ವೇತನ :** ಯಾವುದೇ ಉದ್ಯೋಗದಾತರ ಸಂಸ್ಥೆಯಲ್ಲಿ ಸೇವಾನುಭವ ಪಡೆಯುವುದಕ್ಕಾಗಿ ದಿ ಅಪ್ರೆಂಟೈಸ್ ಕಾಯ್ದೆ -1961 ರ ಪ್ರಾವಧಾನಗಳನ್ವಯ ತರಬೇತಿ ಪಡೆಯುವ ಅಪ್ರೆಂಟೈಸ್‌ಗಳಿಗೆ ದಿ ಅಪ್ರೆಂಟೈಸ್ ಕಾಯ್ದೆ-1961 ರ ಪ್ರಾವಧಾನಗಳನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

15. **ಸ್ಥಾಯಿ ಆದೇಶಗಳಲ್ಲಿಯ ಪ್ರಾವಧಾನಗಳನ್ವಯ ತರಬೇತಿ ಅವಧಿಯ ವೇತನ:** ಯಾವುದೇ ಉದ್ಯೋಗದಾತರ ಸಂಸ್ಥೆಯಲ್ಲಿ ತರಬೇತಿ, ಪಡೆಯುವ ಉದ್ಯೋಗಿಗಳಿಗೆ ಔದ್ಯೋಗಿಕ ಉದ್ಯೋಗಗಳ (ಸ್ಥಾಯಿ ಆದೇಶಗಳ) ಕಾಯ್ದೆ 1946 ಹಾಗೂ ಅದರಡಿಯ ಕರ್ನಾಟಕ ನಿಯಮಗಳನ್ವಯ ಪ್ರಮಾಣೀಕೃತ ಸ್ಥಾಯಿ ಆದೇಶಗಳಲ್ಲಿ ಅಥವಾ ಮಾದರಿ ಸ್ಥಾಯಿ ಆದೇಶಗಳಲ್ಲಿ ನಿಗಧಿತವಾದ "ತರಬೇತಿ ಅವಧಿ"ಯಲ್ಲಿ ಈ ಅಧಿಸೂಚನೆಯ ಮೂಲಕ ನಿಗಧಿಗೊಳಿಸಿದ ಕನಿಷ್ಠ ವೇತನದ ಶೇಕಡಾ 75 (ಎಪ್ಪತ್ತೈದು) ರಷ್ಟು ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

16. **ಸರ್ಕಾರದ ಯೋಜನೆ / ಕಾರ್ಯಕ್ರಮದಡಿಯಲ್ಲಿ ಹಾಗೂ ಸಾಮಾನ್ಯ ತರಬೇತಿಯ ಅವಧಿಯ ವೇತನ:** ಮೇಲ್ಕಂಡ ಷರತ್ತು ಸಂಖ್ಯೆ 11 ಹಾಗೂ 12 ನ್ನು **ಹೊರತುಪಡಿಸಿ,** ತರಬೇತಿ ಪಡೆಯುವ ಉದ್ಯೋಗಿಗಳಿಗೆ (ಟ್ರೈನಿಗಳಿಗೆ) ಈ ಅಧಿಸೂಚನೆಯಡಿ ನಿಗಧಿಪಡಿಸಿದ ಕೆಲಸದ ಸ್ವರೂಪಗಳಿಗೆ ನಿಗಧಿಪಡಿಸಿರುವ ಕನಿಷ್ಠ ವೇತನವನ್ನು ಪಾವತಿಸತಕ್ಕದ್ದು. ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರ ಯಾವುದೇ ತರಬೇತಿಗಾಗಿ ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ರೂಪಿಸಿದ್ದು, ಸದರಿ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಉದ್ಯೋಗದಾತರು ಅನುಷ್ಠಾನಗೊಳಿಸುತ್ತಿದ್ದಲ್ಲಿ, ಸದರಿ ಯೋಜನೆಗಳಡಿಯಲ್ಲಿ / ಕಾರ್ಯಕ್ರಮದಡಿಯಲ್ಲಿ ನಿಗಧಿಪಡಿಸಿರುವ ವೇತನವನ್ನು ಉದ್ಯೋಗದಾತರು ತರಬೇತಿ ಪಡೆಯುವವರಿಗೆ ಪಾವತಿಸತಕ್ಕದ್ದು.

17. **ರೂಢಿಗತ ಸೌಲಭ್ಯಗಳ ಮುಂದುವರಿಕೆ:** ಅಧಿಸೂಚಿತ ಕನಿಷ್ಠ ವೇತನಕ್ಕೆ ಹೆಚ್ಚುವರಿಯಾಗಿ ರೂಡಿ ಮತ್ತು ಪದ್ಧತಿಯನ್ವಯ ವಸ್ತು ರೂಪದಲ್ಲಿ ಯಾವುದೇ ಸಂಭಾವನೆಯನ್ನು ಉದ್ಯೋಗದಾತರಿಂದ ಕಾರ್ಮಿಕರು ಪಡೆಯುತ್ತಿದ್ದಲ್ಲಿ, ಸದರಿ ಹೆಚ್ಚುವರಿ ವಸ್ತು ರೂಪದ ಸಂಭಾವನೆಯನ್ನು ಮುಂದುವರೆಸಲು ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

18. **ದಿವ್ಯಾಂಗ ಕಾರ್ಮಿಕರ ವೇತನ:** ವಿಕಲಚೇತನ ವ್ಯಕ್ತಿಗಳು ಕೆಲಸ ನಿರ್ವಹಿಸುತ್ತಿದ್ದಲ್ಲಿ ಸದರಿ ಕೆಲಸವನ್ನು ನಿರ್ವಹಿಸುತ್ತಿರುವ ಇತರೆ ಸಾಮಾನ್ಯ ಕಾರ್ಮಿಕರು ಪಡೆಯುತ್ತಿರುವ ವೇತನಕ್ಕೆ ಸಮನಾಗಿ ವೇತನವನ್ನು ಪಡೆಯಲು ವಿಕಲಚೇತನ (ದಿವ್ಯಾಂಗ) ಕಾರ್ಮಿಕರು ಅರ್ಹರಾಗಿದ್ದು, ಇದನ್ನು ವಿಕಲಾಂಗ ವ್ಯಕ್ತಿಗಳು (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಹಾಗೂ ಪೂರ್ಣ ಭಾಗವಹಿಸುವಿಕೆ) ಕಾಯ್ದೆ-1995 ರ ಪ್ರಾವಧಾನಗಳ ಹಿನ್ನೆಲೆಯಲ್ಲಿ ಪಾವತಿಸಲು ಉದ್ಯೋಗದಾತರು ಕ್ರಮವಹಿಸತಕ್ಕದ್ದು.

19. **ಕನಿಷ್ಠ ವೇತನ ಮೊತ್ತದ ಕಡ್ಡಾಯ ಪಾವತಿ:** ಕರ್ತವ್ಯ ನಿರ್ವಹಿಸಿದ ಕಾರ್ಮಿಕರಿಗೆ ಪಾವತಿ ಮಾಡುವ ಒಟ್ಟು ವೇತನವು, ಈ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ಕನಿಷ್ಠವೇತನ ದರಗಳನ್ನು ಮತ್ತು ಕಾಲಕಾಲಕ್ಕೆ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು ಸೇರ್ಪಡಿಸಿದಾಗ ಬರುವ ಮೊತ್ತಕ್ಕೆ ಕಡಿಮೆ ಯಾಗದಂತೆ ವೇತನವನ್ನು ಕಡ್ಡಾಯವಾಗಿ ಉದ್ಯೋಗದಾತರು ಪಾವತಿಸತಕ್ಕದ್ದು .

20. **ಕಾರ್ಮಿಕರ ಕೆಲಸದ ಸ್ವರೂಪಗಳ ವರ್ಗೀಕರಣ:** ಕಾರ್ಮಿಕರು ಉದ್ಯೋಗದಾತರ ಸಂಸ್ಥೆಯಲ್ಲಿ ನಿರ್ವಹಿಸುವ ಕೆಲಸದ ಸ್ವರೂಪವನ್ನು ಅವರ ಕೌಶಲ್ಯಗಳಿಗನುಗುಣವಾಗಿ ನಾಲ್ಕು (04) ವರ್ಗಗಳಲ್ಲಿ ವಿಂಗಡಿಸಿದ್ದು, ಅದರ ಸಾಮಾನ್ಯ ವ್ಯಾಖ್ಯಾನ ಈ ಕೆಳಗಿನಂತಿದೆ;

ಅ. **ಅತಿ ಕುಶಲ:** ಅತಿ ಕುಶಲ ಕೆಲಸಗಾರರು ಎಂದರೆ ಯಾರು ಹೆಚ್ಚಿನ ನೈಪುಣ್ಯತೆ ಕೆಲಸವನ್ನು ಅತಿ ಹೆಚ್ಚು ನಿಖರವಾಗಿ ಮಾಡಬಲ್ಲವರಾಗಿದ್ದು, ನಕ್ಷೆಯನ್ನು ಓದಬಲ್ಲ ಮತ್ತು ಅದರ ಆಧಾರದ ಮೇಲೆ ಕೆಲಸ ಮಾಡಬಲ್ಲವರಾಗಿದ್ದು, ಅವರ ವಿಭಾಗದ 'ಕುಶಲ', ಮತ್ತು ಇತರೇ ಕೆಲಸಗಾರರ ಕೆಲಸವನ್ನು ನಿರ್ದೇಶಿಸಬಲ್ಲ ಸಾಮರ್ಥ್ಯವುಳ್ಳವರಾಗಿದ್ದು, ಆ ವಿಭಾಗದ ಕೆಲಸವನ್ನು ಸ್ವತಂತ್ರವಾಗಿ ನಿರ್ವಹಿಸಿಕೊಂಡು ಹೋಗಬಲ್ಲವರಾಗಿರಬೇಕು.

ಆ. **ಕುಶಲ:** ಕುಶಲ ಕೆಲಸಗಾರರು ಅಂದರೆ ಸ್ವತಂತ್ರವಾಗಿ ಹಾಗೂ ಪರಿಣಾಮಕಾರಿಯಾಗಿ ಮತ್ತು ಕೆಲಸವನ್ನು ಸರಿಯಾಗಿ ಮಾಡಬಲ್ಲ ಸಾಮರ್ಥ್ಯವುಳ್ಳ ಕಾರ್ಮಿಕ. ಅವಶ್ಯ ಬಿದ್ದರೆ ಸರಳವಾದ ನಕ್ಷೆಗಳನ್ನು ಓದಿ, ಕೆಲಸ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.

ಇ. **ಅರೆ ಕುಶಲ :** ತನ್ನ ಕಸುಬಿನ ಬಗ್ಗೆ ಸಾಕಷ್ಟು ಜ್ಞಾನವಿರುವ ಹಾಗೂ ಪುನರಾವರ್ತನೆ ಕೆಲಸ ಮಾಡುವ ಸಾಮರ್ಥ್ಯವುಳ್ಳ ಹಾಗೂ ಯಂತ್ರೋಪಕರಣಗಳ ಸಹಾಯದಿಂದ ಸರಳವಾದ ಕೆಲಸಗಳನ್ನು ಮಾಡಬಲ್ಲವರು.

ಈ. **ಕುಶಲರಲ್ಲದವರು :** ಸ್ವತಂತ್ರವಾದ ನಿರ್ಣಯದ ಅವಶ್ಯಕತೆಯಿಲ್ಲದ ಅಥವಾ ಹಿಂದಿನ ಅನುಭವ ಇಲ್ಲದೆ ಆದರೆ ಉದ್ಯೋಗದ ವಾತಾವರಣದ ಪರಿಚಯವಿದ್ದು ಕೆಲಸ ಮಾಡುವುದು, ದೈಹಿಕ ಪರಿಶ್ರಮವಿಲ್ಲದೆ ವಿವಿಧ ರೀತಿಯ ವಸ್ತುಗಳು ಮತ್ತು ಸಾಮಾನ್ಯ ಜ್ಞಾನವಿರುವ ಕೆಲಸವನ್ನು ಮಾಡುವವರು.

21. **ಭೌಗೋಳಿಕ ಪ್ರದೇಶಗಳ ವರ್ಗೀಕರಣ:** ಕನಿಷ್ಠ ವೇತನ ದರಗಳನ್ನು ರಾಜ್ಯದ ನಾಲ್ಕು (04) ಭೌಗೋಳಿಕ ಪ್ರದೇಶವಾರು ಆಧಾರದ ಮೇಲೆ ಅಧಿಸೂಚಿಸಲಾಗಿದ್ದು, ಈ ಭೌಗೋಳಿಕ ಪ್ರದೇಶಗಳ ವಿವರಣೆಯನ್ನು ಈ ಕೆಳಕಂಡಂತೆ ನೀಡಲಾಗಿರುತ್ತದೆ;

ಅ ವಲಯ – 1 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿಯ ಅಧಿಸೂಚಿತ ಪ್ರದೇಶಗಳು.

ಆ ವಲಯ – 2 ವಲಯ–1 ಅನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಮಹಾನಗರಪಾಲಿಕೆಗಳ ವ್ಯಾಪ್ತಿಯಲ್ಲಿಯ ಅಧಿಸೂಚಿತ ಪ್ರದೇಶಗಳು.

ಇ ವಲಯ – 3 ವಲಯ–1 ಹಾಗೂ ವಲಯ–2 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು.

ಈ ವಲಯ – 4 ವಲಯ–1, ವಲಯ–2 ಮತ್ತು 3 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಇತರೆ ಎಲ್ಲಾ ಪ್ರದೇಶಗಳು.

PR-50
SC-200

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಲ್.ಎಸ್.ಶ್ರೀಕಂಠಬಾಬು,
ಸರ್ಕಾರದ ಉಪ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

## ಕಾರ್ಮಿಕ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ : ಕಾಇ 2 ಎಲ್ಎಂಡಬ್ಲ್ಯೂ 2017, ಬೆಂಗಳೂರು, ದಿನಾಂಕ : 30–12–2017**

ಕರ್ನಾಟಕ ರಾಜ್ಯದಾದ್ಯಂತ **"ಹತ್ತಿ ಹೆಕ್ಕುವ ಮತ್ತು ಅಮುಕುವ" (Cotton Ginning and Pressing Manufacturing)** ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಅನ್ವಯವಾಗುವ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲುದ್ದೇಶಿಸಿ, ರಾಜ್ಯ ಸರ್ಕಾರವು ತನಗೆ ಕನಿಷ್ಠ ವೇತನ ಕಾಯ್ದೆ, 1948ರ ಕಲಂ 5 (1)(ಬಿ)ರ ಪ್ರಾವಧಾನದನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರಡು ಅಧಿಸೂಚನೆ ಸಂಖ್ಯೆ: ಕಾಇ 02 ಎಲ್ಎಂಡಬ್ಲ್ಯೂ 2017, ದಿನಾಂಕ: 16–03–2017 ಅನ್ನು ಕರ್ನಾಟಕ ರಾಜ್ಯಪತ್ರ (ವಿಶೇಷ ರಾಜ್ಯ ಪತ್ರಿಕೆ) ಭಾಗ–III ರ ನಂ. 276 ರಲ್ಲಿ (ಪುಟ ಸಂಖ್ಯೆ: 1 ರಿಂದ 4) ದಿನಾಂಕ 18ನೇ ಮಾರ್ಚ್ 2017 ರಂದು ಪ್ರಕಟಿಸಿರುತ್ತದೆ ಹಾಗೂ ತನ್ಮೂಲಕ ಈ ಕರಡು ಅಧಿಸೂಚನೆಯಿಂದ ಬಾಧಿತರಾಗುವ ಹಾಗೂ ಸಂಬಂಧವಿರುವ ವ್ಯಕ್ತಿಗಳು ಹಾಗೂ ಅವರನ್ನು ಪ್ರತಿನಿಧಿಸುವ ಸಂಘ–ಸಂಸ್ಥೆಗಳ ಗಮನಕ್ಕೆ ವಿಷಯವನ್ನು ರಾಜ್ಯ ಸರ್ಕಾರವು ತಂದಿರುತ್ತದೆ. ರಾಜ್ಯ ಸರ್ಕಾರವು ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸಲು ಎರಡು (02) ತಿಂಗಳ ಕಾಲಾವಕಾಶವನ್ನು ಸಂಬಂಧಿಸಿದವರೆಲ್ಲರಿಗೂ ಕಲ್ಪಿಸಿರುತ್ತದೆ. ಸದರಿ ಅವಧಿಯಲ್ಲಿ ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಹಲವು ನಿರ್ದಿಷ್ಟವಾದ ಹಾಗೂ ಸಾಮಾನ್ಯವಾದ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸಂಬಂಧಿಸಿದವರಿಂದ ರಾಜ್ಯ ಸರ್ಕಾರವು ಸ್ವೀಕರಿಸಿರುತ್ತದೆ.

ರಾಜ್ಯ ಸರ್ಕಾರವು ತನ್ನ ಪತ್ರ ಸಂಖ್ಯೆ: ಕಾಇ 02 ಎಲ್ಎಂಡಬ್ಲ್ಯೂ 2017, ದಿನಾಂಕ: 08–11–2017 ರ ಮೂಲಕ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಸಭೆಯನ್ನು ಕರೆದು ಸದರಿ ಕರಡು ಅಧಿಸೂಚನೆ ಬಗ್ಗೆ ಸಲಹೆಗಳನ್ನು ನೀಡುವಂತೆ ಸೂಚಿಸಲಾಗಿ, ದಿನಾಂಕ: 06–12–2017 ರಂದು ನಿಯಮಾನುಸಾರ ನಡೆದ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಸಭೆಯಲ್ಲಿ ಮೇಲ್ಕಂಡ ಕರಡು ಅಧಿಸೂಚನೆ ಹಾಗೂ ಅದಕ್ಕೆ ಸಂಬಂಧಿಸಿದಂತೆ ಸ್ವೀಕರಿಸಲಾದ ಸಲಹೆಗಳು ಹಾಗೂ ಆಕ್ಷೇಪಣೆಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸದರಿ ಮಂಡಳಿಯಲ್ಲಿ ಸರ್ಕಾರದ ಪ್ರಸ್ತಾವನೆಯನ್ನು ಸುಧೀರ್ಘವಾಗಿ ಸಮಲೋಚಿಸಿ ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಮಂಡಳಿಯು ಸರ್ಕಾರಕ್ಕೆ ತನ್ನ ಶಿಫಾರಸ್ಸನ್ನು ನೀಡಿರುತ್ತದೆ.

ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯು ದಿನಾಂಕ: 06–12–2017ರ ಸಭೆಯಲ್ಲಿ ನೀಡಿರುವ ಸಲಹೆಗಳನ್ನು ಹಾಗೂ ಸಂಬಂಧಿಸಿದ ಇತರೆ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿರುವ ರಾಜ್ಯ ಸರ್ಕಾರವು, ತನಗೆ ಕನಿಷ್ಠ ವೇತನ ಕಾಯ್ದೆ, 1948ರ ಕಲಂ 3(1)(ಬಿ) ಸಹವಾಚಿತ ಕಲಂ 5 (1)(ಬಿ) ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ತತ್ಸಂಬಂಧದ ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಕರ್ನಾಟಕ ರಾಜ್ಯದಾದ್ಯಂತ "ಹತ್ತಿ ಹೆಕ್ಕುವ ಮತ್ತು ಅಮುಕುವ" ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಈ ಅಧಿಸೂಚನೆಯು ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ ಈ ಕೆಳಕಂಡ ಕನಿಷ್ಠ ವೇತನ ದರಗಳ ಕೋಷ್ಟಕದಲ್ಲಿರುವಂತೆ, ಕನಿಷ್ಠ ವೇತನ ದರಗಳನ್ನು ಈ ಅಧಿಸೂಚನೆಯ ಮೂಲಕ ಪರಿಷ್ಕರಿಸಲಾಗಿರುತ್ತದೆ. ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಪಾವತಿಸಲು, ಕನಿಷ್ಠ ವೇತನ ಕಾಯ್ದೆ–1948ರ ಕಲಂ 12 ರನ್ವಯ ಸಂಬಂಧಿಸಿದ ಎಲ್ಲಾ ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

**ಕನಿಷ್ಠ ವೇತನ ದರಗಳ ಕೋಷ್ಟಕ**

| ಹತ್ತಿ ಹೆಕ್ಕುವ ಮತ್ತು ಅಮುಕುವ (Cotton Ginning and Pressing Manufacturing) | | | | | | |
|---|---|---|---|---|---|---|
| ಅನುಸೂಚಿತ ಉದ್ದಿಮೆಗಳ ಕೆಲಸದ ವರ್ಗೀಕರಣ | ವಲಯ–1 | | ವಲಯ–2 | | ವಲಯ–3 | |
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| **1.ಕುಶಲ–ಎ** | 11061–60 | 425–45 | 10774–29 | 414–40 | 10056–00 | 386–77 |
| ಬಡಗಿ | | | | | | |
| ಕಮ್ಮಾರರು | | | | | | |
| ಯಂತ್ರ ಕುಶಲ (ಮೆಕ್ಯಾನಿಕ್) | | | | | | |
| **2. ಕುಶಲ–ಬಿ** | 10851–60 | 417–37 | 10569–74 | 406–53 | 9865–09 | 379–43 |
| ಕುದಿಪಾತ್ರೆ ನಿರ್ವಾಹಕ (Boiler man) | | | | | | |
| ಕವಾಟ ನಿರ್ವಾಹಕ (Valveman) | | | | | | |

| | | | | | | | |
|---|---|---|---|---|---|---|---|
| ಯಂತ್ರಚಾಲಕ (Engine Driver) | | | | | | | |
| ಜೋಡಣೆಗಾರ (Fitter) | | | | | | | |
| ಟರ್ನರ್ | | | | | | | |
| ಓಪನರ್ ಮ್ಯಾನ್ | | | | | | | |
| 3. ಅರೆ ಕುಶಲ | | | | | | | |
| ಫೈರ್ ಮ್ಯಾನ್ | | 10726–60 | 412–56 | 10447–98 | 401–84 | 9751–45 | 375–05 |
| ಸುರುಳಿ ಕತ್ತರಿಸುವವ | | | | | | | |
| ನಂಬರ್ ಮೇಕರ್ಸ್ | | | | | | | |
| ಫಿನಿಷಿಂಗ್ ಮ್ಯಾನ್ | | | | | | | |
| **4. ಕುಶಲರಲ್ಲದವರು–ಎ** | | | | | | | |
| ಮಕದಂ | | 10551–60 | 405–83 | 10277–53 | 395–29 | 9592–36 | 368–94 |
| **5. ಕುಶಲರಲ್ಲದವರು–ಬಿ** | | | | | | | |
| ಕಾವಲುಗಾರ, ಜವಾನ | ಕಛೇರಿ ಸಿಬ್ಬಂದಿ | | | | | | |
| ಕಛೇರಿ ಹುಡುಗ | | | | | | | |
| ಗುಡಿಸುವವರು | | | | | | | |
| ಹತ್ತಿಯ ಉಬನ್ನುಎತ್ತುವ ಮತ್ತು ಶುಚಿ ಮಾಡುವುದಕ್ಕೆ ನೇಮಿಸಿಕೊಂಡ ಕೆಲಸಗಾರರು | | 10521–60 | 404–68 | 10248–31 | 394–16 | 9565–08 | 367–88 |
| ಮಜ್ದೂರ್ ಮೇಲೆ ನಮೂದಿಸದ ಯಾವುದೇ ಕುಶಲಿಗಳಲ್ಲದವರು | | | | | | | |
| ಹತ್ತಿ ಹೆಕ್ಕುವವ | | | | | | | |

| | | | | | | |
|---|---|---|---|---|---|---|
| **ಚಾಲಕ / ಕ್ಲೀನರ್** | | | | | | |
| ಲಾರಿ ಡ್ರೈವರ್ | 12184–00 | 468–62 | 11872–00 | 456–62 | 11092–00 | 426–62 |
| ಕಾರ್/ಜೀಪ್ ಡ್ರೈವರ್ | 11456–00 | 440–61 | 11170–00 | 429–62 | 10520–00 | 404–61 |
| ಲಾರಿ/ ಕಾರ್/ಜೀಪ್ ಕ್ಲೀನರ್ | 10520–00 | 404–61 | 10260–00 | 394–61 | 9610–00 | 369–61 |

| | | | | | | |
|---|---|---|---|---|---|---|
| **ಕಛೇರಿ ಸಿಬ್ಬಂದಿ** | | | | | | |
| ಮ್ಯಾನೇಜರ್ / ಪರ್ಸನಲ್ ಆಫೀಸರ್ | 13900–00 | 534–61 | 13510–00 | 519–61 | 12600–00 | 484–62 |
| ಅಸಿಸ್ಟೆಂಟ್ ಮ್ಯಾನೇಜರ್ /ಅಸಿಸ್ಟೆಂಟ್ ಪರ್ಸನಲ್ ಮ್ಯಾನೇಜರ್ | 13380–00 | 494–62 | 12990–00 | 499–62 | 12210–00 | 469–62 |
| ಅಕೌಂಟೆಂಟ್ | 12860–00 | 494–62 | 12600–00 | 484–62 | 11820–00 | 454–62 |
| ಕ್ಯಾಷಿಯರ್ / ಸೀನಿಯರ್ ಕ್ಲರ್ಕ್ / ಬುಕಿಂಗ್ ಕ್ಲರ್ಕ್ | 12600–00 | 484–62 | 12340–00 | 474–62 | 11560–00 | 444–62 |
| ಶೀಘ್ರಲಿಪಿಗಾರ / ಕಂಪ್ಯೂಟರ್ ಆಪರೇಟರ್ | | | | | | |
| ಸ್ಟೋರ್ ಕೀಪರ್ / ರಿಸೆಪ್ಷನಿಷ್ಟ್ / ಟೆಲಿಫೋನ್ ಆಪರೇಟರ್ | 12470–00 | 479–61 | 12080–00 | 464–61 | 11430–00 | 439–61 |
| ಬೆರಳಚ್ಚುಗಾರ / ಡಾಟಾ ಎಂಟ್ರಿ ಆಪರೇಟರ್ | | | | | | |
| ಗುಮಾಸ್ತ / ಜೂನಿಯರ್ ಕ್ಲರ್ಕ್ | | | | | | |
| ಆಫೀಸ್ ಬಾಯ್ / ಪ್ಯೂನ್ / ವಾಚಮೆನ್ / ಸ್ವೀಪರ್ / ಅಟೆಂಡರ್ | 10520–00 | 404–61 | 10260–00 | 394–61 | 9610–00 | 369–61 |

ಮೇಲ್ಕಂಡ ಕೋಷ್ಟಕದಲ್ಲಿಯ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ರಾಜ್ಯ ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನಿಗದಿಪಡಿಸಿದ್ದು, ಈ ಎಲ್ಲಾ ಷರತ್ತುಗಳನ್ನು ಯಥಾವತ್ತಾಗಿ ಸಂಬಂಧಿಸಿದ ಉದ್ಯೋಗದಾತರು ಪಾಲಿಸಲು ಬಾಧ್ಯಸ್ಥರಿರುತ್ತಾರೆ;

1. **ವ್ಯತ್ಯಾಸವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರ ಹಾಗೂ ಪಾವತಿ:** ನಿಗಧಿತ ಕನಿಷ್ಠ ವೇತನಕ್ಕನುಗುಣವಾಗಿ ಪಾವತಿಸಬೇಕಾದ ವ್ಯತ್ಯಸ್ಥವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಉದ್ಯೋಗದಾತರು ಮಾಡತಕ್ಕದ್ದು. ಹಿಂದಿನ ಕ್ಯಾಲೆಂಡರ್ ವರ್ಷದ ಹನ್ನೆರಡು (12) ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ತುಟ್ಟಿಭತ್ಯೆಯನ್ನು ಪ್ರತಿ ವರ್ಷದ ಏಪ್ರಿಲ್ ಮೊದಲನೇ ದಿನಾಂಕದಿಂದ ಅನ್ವಯವಾಗುವಂತೆ ಉದ್ಯೋಗದಾತರು ಪ್ರತಿ ವರ್ಷ ಲೆಕ್ಕಾಚಾರ ಮಾಡಿ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು. ಆದುದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2016 ರಿಂದ ಡಿಸೆಂಬರ್ 2016ರ) ಸರಾಸರಿ ಆಧಾರದ ಮೇಲೆ 2017 ಏಪ್ರಿಲ್ ಒಂದು (1) ನೇ ತಾರೀಖಿನಿಂದ ಜಾರಿಗೆ ಬರುತ್ತದೆ. ಗ್ರಾಹಕ ಬೆಲೆ ಸೂಚ್ಯಾಂಕ 6537 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ ನಾಲ್ಕು (4) ಪೈಸೆಯಂತೆ ಈ ಕೆಳಕಂಡ ವಿಧಾನದನ್ವಯ ಲೆಕ್ಕಾಚಾರ ಮಾಡಿ ತುಟ್ಟಿಭತ್ಯೆಯನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

**ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:–** ಮಾಸಿಕ ತುಟ್ಟಿಭತ್ಯೆ ಹಾಗೂ ದಿನದ ತುಟ್ಟಿಭತ್ಯೆಯನ್ನು ಕೆಳಕಂಡ ಸೂತ್ರಗಳನ್ವಯ ಕ್ರಮವಾಗಿ ಲೆಕ್ಕಾಚಾರಮಾಡತಕ್ಕದ್ದು;

ಅ) **ಮಾಸಿಕ ವೇತನವನ್ನು ಪಡೆಯುವವರು:–** ಮಾಸಿಕ ವೇತನ ಪಡೆಯುವ ಕಾರ್ಮಿಕರಿಗೆ ಈ ಕೆಳಕಂಡ ಸೂತ್ರದನ್ವಯ ತುಟಿಭತ್ಯೆಯನ್ನು ಲೆಕ್ಕ ಮಾಡತಕ್ಕದ್ದು ಹಾಗೂ ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸಿ ಪಾವತಿಸತಕ್ಕದ್ದು.

**ಮಾಸಿಕ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x ಮೂವತ್ತು(30) ದಿನಗಳು**

ಆ) **ದಿನಗೂಲಿ ವೇತನ ಪಡೆಯುವವರು :–** ದಿನಗೂಲಿ ಪಡೆಯುವ ಕಾರ್ಮಿಕರಿಗೆ ಮಾಸಿಕ ಕನಿಷ್ಠ ವೇತನ ದರವನ್ನು ಇಪ್ಪತ್ತಾರು (26) ದಿನಗಳಿಂದ ವಿಭಾಗಿಸಿ, {ನಾಲ್ಕು (4) ವಾರದ ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ} ಈ ಕೆಳಕಂಡ ಸೂತ್ರದನ್ವಯ ಲೆಕ್ಕ ಮಾಡತಕ್ಕದ್ದು. ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ ಅರ್ಹರಾದ ಕಾರ್ಮಿಕರಿಗೆ ಪಾವತಿಸತಕ್ಕದ್ದು.

**ದಿನದ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x** ಮೂವತ್ತು(30) ದಿನಗಳು/ ಇಪ್ಪತ್ತಾರು (26)

2. **ಸೇವಾ ಹಿರಿತನ ಪರಿಗಣನೆ ಭತ್ಯೆ :** ಈ ಅಧಿಸೂಚನೆ ಜಾರಿಗೆ ಬಂದ ದಿನಾಂಕದಿಂದ ಯಾವುದೇ ಕಾರ್ಮಿಕನು ಓರ್ವ ಉದ್ಯೋಗದಾತರ ಸಂಸ್ಥೆಯಲ್ಲಿ ಅಥವಾ ಮಾಲೀಕರ ಅಧೀನದಲ್ಲಿ ನಿರಂತರ ಹತ್ತು (10) ವರ್ಷಗಳ ಸೇವೆಯನ್ನು ಸಲ್ಲಿಸಿದಲ್ಲಿ, ತನ್ನ ಪೂರ್ಣಗೊಳಿಸಿದ ಪ್ರತಿ ಹತ್ತುವರ್ಷದ ಮೇಲ್ಪಟ್ಟ ಸೇವೆಗೆ ಅನುಗುಣವಾಗಿ ಆಯಾ ಕಾರ್ಮಿಕ ವರ್ಗಕ್ಕೆ ನಿಗದಿಪಡಿಸಿರುವ ಒಟ್ಟು ಮಾಸಿಕ ಕನಿಷ್ಠ ಮೂಲ ವೇತನದ ಮೇಲೆ ವರ್ಷವೊಂದರ ಸೇವೆಗೆ ಶೇಕಡಾ ಒಂದು (1) ರಷ್ಟು ಮೊತ್ತವನ್ನು ಸೇವಾ ಹಿರಿತನ ಪರಿಗಣನೆ ಭತ್ಯೆಯನ್ನಾಗಿ ಗರಿಷ್ಠ ಶೇಕಡಾ ಹತ್ತು (10) ರ ಮೇಲ್ಮಿತಿಗೆ ಒಳಪಟ್ಟು ಪಡೆಯಲು ಕಾರ್ಮಿಕರು ಅರ್ಹರಿರುತ್ತಾರೆ. ಪರಂತು ಈ ಅಧಿಸೂಚನೆ ಜಾರಿಗೆ ಬಂದ ದಿನಾಂಕಕ್ಕೆ ಇಪ್ಪತ್ತು (20) ವರ್ಷಕ್ಕಿಂತ ಹೆಚ್ಚಿನ ಸೇವೆಯನ್ನು ಸಲ್ಲಿಸಿದ ಕಾರ್ಮಿಕರಿದ್ದಲ್ಲಿ ಒಂದು ಸಲಕ್ಕೆ ಮಾತ್ರ ಸೇವಾ ಹಿರಿತನ ಮೊತ್ತವನ್ನು ಆಯಾ ಕಾರ್ಮಿಕ ವರ್ಗಕ್ಕೆ ನಿಗಧಿಪಡಿಸಿರುವ ಒಟ್ಟು ಮಾಸಿಕ ಕನಿಷ್ಠ ವೇತನದ ಶೇ 10ರ ಗರಿಷ್ಠ ಮಿತಿಗೆ ಒಳಪಟ್ಟು ಪಡೆಯಲು ಅರ್ಹರಿರುತ್ತಾರೆ. ಈ ಸೇವಾ ಹಿರಿತನ ಪರಿಗಣನೆ ಭತ್ಯೆಯ ಮೊತ್ತವು ಮೇಲ್ಕಂಡ ಷರತ್ತು ಸಂಖ್ಯೆ 1ರಲ್ಲಿ ವಿಧಿಸಿದ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು ಹೊರತುಪಡಿಸಿ, ಮೂಲವೇತನದ ಆಧಾರದಲ್ಲಿ ನಿಗದಿಪಡಿಸಿದ 'ಸೇವಾ ಹಿರಿತನದ ಪರಿಗಣನೆ ಭತ್ಯೆಯ ಮೊತ್ತ' ವಾಗಿರುತ್ತದೆ.

***ವಿವರಣೆ:*** "ನಿರಂತರ ಸೇವೆಯನ್ನು ಲೆಕ್ಕ ಮಾಡಬೇಕಾದಾಗ ಹಿಂದಿನ ಆರ್ಥಿಕ ವರ್ಷದಲ್ಲಿ, ಸದರಿ ಸಂಸ್ಥೆಯಲ್ಲಿ ಕನಿಷ್ಠ ಎರಡು ನೂರ ನಲವತ್ತು (240) ದಿನಗಳು ಸೇವೆ ಸಲ್ಲಿಸಿದ ಕಾರ್ಮಿಕನು ಸದರಿ ವರ್ಷದಲ್ಲಿ ನಿರಂತರ ಸೇವೆ ಸಲ್ಲಿಸಿರುತ್ತಾನೆಂದು ಉದ್ಯೋಗದಾತರು ಪರಿಗಣಿಸತಕ್ಕದ್ದು".

3. **ಮಹಿಳೆಯರಿಗೆ ಸಮಾನ ವೇತನ :** ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಹಾಗೂ ಸಮ ಪ್ರಮಾಣದ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರಯರಿಗೂ ಸಮಾನ ದರದ ವೇತನಗಳನ್ನು ಉದ್ಯೋಗದಾತರು ಸಮಾನ ವೇತನ ಕಾಯ್ದೆ–1976ರ ಪ್ರಾವಧಾನಗಳನ್ವಯ ಮಹಿಳಾ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು.

4. **ಕಾರ್ಮಿಕರ ಹಕ್ಕುಗಳ ರಕ್ಷಣೆ:** ಯಾವುದೇ ಪ್ರದೇಶ ಅಥವಾ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಈ ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ಕನಿಷ್ಠ ವೇತನದ ದರಗಳಿಗಿಂತ ಹೆಚ್ಚಿನ ವೇತನವನ್ನು ಈಗಾಗಲೇ ಕೈಗಾರಿಕಾ ವಿವಾದಗಳ ಕಾಯ್ದೆ–1947 ರಡಿಯಲ್ಲಿಯ ಒಪ್ಪಂದ, ಕರಾರು ಅಥವಾ ಬೇರೆ ಯಾವುದೇ ರೀತಿಯನ್ವಯ ಪಡೆಯುತ್ತಿದ್ದಲ್ಲಿ, ಸದರಿ ಹೆಚ್ಚಿನ ವೇತನವನ್ನು ಮುಂದುವರೆದು ಪಡೆಯಲು ಕಾರ್ಮಿಕರು ಅರ್ಹರಾಗಿದ್ದು, ಅದನ್ನು ಪಾವತಿಸಲು ಉದ್ಯೋಗದಾತರು ಬಾಧ್ಯಸ್ಥರಿರುತ್ತಾರೆ.

5. **ಸಮರೂಪದ ಕೆಲಸದ ವರ್ಗಗಳಿಗೆ ಸಮನಾದ ವೇತನ:** ಈ ಅಧಿಸೂಚನೆಯಲ್ಲಿ ಕೆಲಸದ ಸ್ವರೂಪದ ವರ್ಗವನ್ನು ನಮೂದಿಸದೇ ಇರುವ ಕೆಲಸದ ಸ್ವರೂಪದ ವರ್ಗಗಳಿಗೆ ಸೇರಿದ ಕಾರ್ಮಿಕರಿಗೆ ಅದೇ ಸ್ವರೂಪದ (ಸಮಾನ) ಕೆಲಸ ನಿರ್ವಹಿಸುತ್ತಿರುವ ಇತರೆ ಕೆಲಸದ ಸ್ವರೂಪದ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಉದ್ಯೋಗದಾತರು ಸಂದಾಯ ಮಾಡತಕ್ಕದ್ದು. ಈ ಕುರಿತು ಯಾವುದೇ ವಿವಾದ ಉದ್ಭವಿಸಿದಲ್ಲಿ, ಸಂಬಂಧಿಸಿದ ಉದ್ಯೋಗದಾತರು ಒಂದು ತ್ರಿಪಕ್ಷಿಯ (ಸ್ವತಂತ್ರ ಸದಸ್ಯರು–3, ಕಾರ್ಮಿಕ ಪ್ರತಿನಿಧಿಗಳು –3 ಹಾಗೂ ಉದ್ಯೋಗದಾತರು –3, ಹೀಗೆ ಒಟ್ಟು ಒಂಬತ್ತು ಜನರ) ಸಮಿತಿಯನ್ನು ರಚಿಸಿ, ಸದರಿ ಸಮಿತಿಯು ಸ್ವಾಭಾವಿಕ ನ್ಯಾಯತತ್ವಗಳನ್ನು ಪರಿಪಾಲಿಸಿ, ಪಕ್ಷಗಾರರ ವಾದಗಳನ್ನು ಆಲಿಸಿ, ಎಲ್ಲಾ ವಿವಾದಾಂಶಗಳನ್ನು ಹಾಗೂ ಕೆಲಸದ ಕೌಶಲ್ಯದ ವರ್ಗವನ್ನು ಸಹ ವಿಶ್ಲೇಷಿಸಿ ಎರಡು ತಿಂಗಳ ಅವಧಿಯೊಳಗೆ ನೀಡುವ ಕನಿಷ್ಠ ವೇತನ ದರದ ವರದಿಯನ್ವಯ ಕ್ರಮವಹಿಸತಕ್ಕದ್ದು. ಸದರಿ ವರದಿಯ ಅನುಷ್ಠಾನಕ್ಕಾಗಿ "ಸಕ್ಷಮ ಅಧಿಕಾರಿ"ಯನ್ನು ಉದ್ಯೋಗದಾತರು ನಿಯುಕ್ತಿಗೊಳಿಸತಕ್ಕದ್ದು. ಸಕ್ಷಮ ಅಧಿಕಾರಿಯ ವರದಿ ಅನುಷ್ಠಾನ ಕ್ರಮದ ಬಗ್ಗೆ ಅಥವಾ ವರದಿಯ ಬಗ್ಗೆ ವಿವಾದವಿದ್ದಲ್ಲಿ, ಈ ಕುರಿತು "ಮೇಲ್ಮನವಿ ಪ್ರಾಧಿಕಾರಿ"ಯನ್ನು ಸಹ ನಿಯುಕ್ತಿಗೊಳಿಸಿ, ಉದ್ಯೋಗದಾತರು ಅಧಿಸೂಚನೆಯನ್ನು ಹೊರಡಿಸತಕ್ಕದ್ದು. ಒಂದು ತಿಂಗಳ ಕಾಲಮಿತಿಯೊಳಗೆ 'ಸಕ್ಷಮ ಪ್ರಾಧಿಕಾರಿ' ಹಾಗೂ

'ಮೇಲ್ಮನವಿ ಪ್ರಾಧಿಕಾರಿ' ಗಳು ಸ್ವಾಭಾವಿಕ ನ್ಯಾಯತತ್ವಗಳನ್ವಯ ಪ್ರಕರಣಗಳ ಇತ್ಯರ್ಥಕ್ಕೆ ಕ್ರಮವಹಿಸತಕ್ಕದ್ದು. 'ಮೇಲ್ಮನವಿ ಪ್ರಾಧಿಕಾರಿ' ಯ ನಿರ್ಣಯವು ಅಂತಿಮವಾಗಿದ್ದು, ಅದನ್ನು ಪಾಲಿಸಲು ಎಲ್ಲಾ ಪಕ್ಷಗಾರರು ಬಾಧ್ಯಸ್ಥರಿರುತ್ತಾರೆ.

6. **ಕನಿಷ್ಠ ವೇತನ ಸ್ವೀಕರಿಸುವ ಹಕ್ಕಿನ ರಕ್ಷಣೆ:** ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ ಎಂಟು (8) ಗಂಟೆಗಳ ಕೆಲಸದ ವೇತನವು ಅದೇ ಸ್ವರೂಪದ (ತರಹದ) ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರದಂತೆ ಉದ್ಯೋಗದಾತರು ಕ್ರಮವಹಿಸತಕ್ಕದ್ದು. ಈ ಬಗ್ಗೆ ವಿವಾದವಿದ್ದಲ್ಲಿ ಮೇಲ್ಕಂಡ ಷರತ್ತು ಸಂಖ್ಯೆ-5 ರಲ್ಲಿಯ ವಿವಾದ-ಪರಿಹಾರ ವ್ಯವಸ್ಥೆಯನ್ನು ಉದ್ಯೋಗದಾತರು ಸೃಷ್ಟಿಸಿ, ಕಾನೂನು ಸಮ್ಮತ ಪರಿಹಾರವನ್ನು ರೂಪಿಸತಕ್ಕದ್ದು.

7. **ದುಡಿಮೆಯ ಅವಧಿಯ ಪ್ರಮಾಣಕ್ಕನುಗುಣವಾಗಿ ಕನಿಷ್ಠ ವೇತನ:** ಒಂದು ದಿನದ ಕೆಲಸ ಎಂದರೆ ಎಂಟು (8) ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು ಎಂಟು (8) ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಥವಾ ಕಾರ್ಮಿಕರು ಕೆಲಸ ನಿರ್ವಹಿಸಿದ್ದಲ್ಲಿ, ಅಂತಹ ಕಡಿಮೆ ಅವಧಿಯ ಪ್ರಮಾಣಕ್ಕನುಗುಣವಾಗಿ ಕನಿಷ್ಠ ವೇತನವನ್ನು ಕರ್ನಾಟಕ ಕನಿಷ್ಠ ವೇತನ ನಿಯಮಗಳು, 1958ರ ನಿಯಮ 27 ರನ್ವಯ ಆ ಕೆಲಸದ ವರ್ಗಕ್ಕೆ ನಿಗದಿಪಡಿಸಿರುವ ದಿನವೊಂದರ ಕನಿಷ್ಠ ವೇತನವನ್ನು ಗಂಟೆಗಳ ಕನಿಷ್ಠ ವೇತನವನ್ನಾಗಿ ಲೆಕ್ಕ ಹಾಕಿ, ಸಂಬಂಧಿಸಿದ ಕಾರ್ಮಿಕರಿಗೆ ಉದ್ಯೋಗದಾತರು ಪಾವತಿಸತಕ್ಕದ್ದು.

8. **ಕನಿಷ್ಠ ವೇತನದ ಪಾವತಿಯ ವಿಧಾನ** : ನಿಗದಿತ ಕನಿಷ್ಠ ವೇತನದ ಮೂಲವೇತನ ಹಾಗೂ ತುಟ್ಟಿಭತ್ಯೆ ಲೆಕ್ಕಾಚಾರದಲ್ಲಿ ರೂಪಾಯಿಯ ಭಾಗಾಂಶವು ಬಂದ ಪಕ್ಷದಲ್ಲಿ ಅದನ್ನು ಸಮೀಪದ ಹೆಚ್ಚಿನ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ, ಕಾರ್ಮಿಕರಿಗೆ ಪಾವತಿಸತಕ್ಕದ್ದು.

9. **ಬ್ಯಾಂಕ್ ಖಾತೆಯ ಮೂಲಕ ವೇತನ ಪಾವತಿ:** ವೇತನ ಪಾವತಿ ಕಾಯ್ದೆ-1936ರ ಕಲಂ 6 ರ ಪ್ರಾವಧಾನದ ಅನ್ವಯ ಕಾರ್ಮಿಕರಿಗೆ ವೇತನವನ್ನು ಉದ್ಯೋಗದಾತರು ನೇರವಾಗಿ ಕಾರ್ಮಿಕರ ಬ್ಯಾಂಕ್ ಖಾತೆಗೆ ವರ್ಗಾಯಿಸುವ ಮೂಲಕ ಪಾವತಿಸತಕ್ಕದ್ದು.

10. **ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನ ದರಗಳ ಅನ್ವಯಿಸುವಿಕೆ :** ಈ ಅನುಸೂಚಿತ ಉದ್ದಿಮೆಗೆ ಒಳಪಡುವ ಸಂಸ್ಥೆಗಳಲ್ಲಿ ಹೊರಗುತ್ತಿಗೆ ವ್ಯವಸ್ಥೆಯ ಮೂಲಕ ಗುತ್ತಿಗೆ ಕಾರ್ಮಿಕ (ನಿಷೇದ ಮತ್ತು ನಿಯಂತ್ರಣ) ಕಾಯ್ದೆ-1970 ಹಾಗೂ ಇತರೆ ಶಾಸನಬದ್ಧ ವ್ಯವಸ್ಥೆಗಳನ್ವಯ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೂ ಕೂಡಾ ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಉದ್ಯೋಗದಾತರು ಅನ್ವಯಿಸಿ, ಪಾವತಿಯನ್ನು ಮಾಡತಕ್ಕದ್ದು.

11. **ಸಾಮಾಜಿಕ ಭದ್ರತೆಯ ಕಾಯ್ದೆಗಳಡಿಯಲ್ಲಿ ಉದ್ಯೋಗದಾತರ ವಂತಿಗೆಯ ಪಾವತಿ.** ಕನಿಷ್ಠ ವೇತನದ ಮೊತ್ತವು (ಮೂಲ ವೇತನ + ತುಟ್ಟಿಭತ್ಯೆ) ಕರ್ತವ್ಯ ನಿರ್ವಹಿಸಿದ ಕಾರ್ಮಿಕನ ಅರ್ಜಿತ ವೇತನವಾಗಿದ್ದು, ಉದ್ಯೋಗದಾತರು ಈ ಕೆಳಕಂಡ ಕಾಯ್ದೆಗಳಡಿಯಲ್ಲಿ ಪಾವತಿಸಬೇಕಾದ **"ಉದ್ಯೋಗದಾತರ ವಂತಿಗೆ"** ಯನ್ನು ಕಾರ್ಮಿಕರ ಅರ್ಜಿತ ಕನಿಷ್ಠ ವೇತನದ ಮೊತ್ತದಿಂದ ಕಡಿತಗೊಳಿಸದೆ, ಪ್ರತ್ಯೇಕವಾಗಿ ಉದ್ಯೋಗದಾತರ ಸಂಪನ್ಮೂಲದಿಂದಲೇ ಪಾವತಿ ಮಾಡತಕ್ಕದ್ದು;

    1. **ನೌಕರರ ರಾಜ್ಯ ವಿಮಾ ಕಾಯ್ದೆ-1948**
    2. **ನೌಕರರ ಭವಿಷ್ಯ ನಿಧಿ ಹಾಗೂ ಇತರೆ ಪ್ರಾವಧಾನಗಳ ಕಾಯ್ದೆ-1952**

12. **ರಜಾದಿನದಲ್ಲಿಯ ದುಡಿಮೆಯ ವೇತನ :** ಉದ್ಯೋಗದಾತರ ಸಂಸ್ಥೆಯಲ್ಲಿ ಶಾಸನದನ್ವಯ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ, 1948 ಮತ್ತು ಅದರಡಿಯ ಕರ್ನಾಟಕ ನಿಯಮಗಳಲ್ಲಿಯ ಪ್ರಾವಧಾನಗಳು ಹಾಗೂ ಕರ್ನಾಟಕ ಔದ್ಯೋಗಿಕ ಸಂಸ್ಥೆಗಳು (ರಾಷ್ಟ್ರೀಯ ಮತ್ತು ಹಬ್ಬದ ರಜಾದಿನಗಳ) ಕಾಯ್ದೆ-1963ರ ಪ್ರಾವಧಾನಗಳನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

13. **ಹೆಚ್ಚುವರಿ ಅವಧಿ ದುಡಿಮೆಯ ವೇತನ:** ಕೆಲಸಗಾರರು ದಿನದ ನಿಗದಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಕಾರ್ಮಿಕರಿಗೆ ಹೆಚ್ಚುವರಿ ಅವಧಿಯ ಕೆಲಸಕ್ಕೆ ಕನಿಷ್ಠ ವೇತನ ಕಾಯ್ದೆ-1948 ರ ಕಲಂ 14 ರನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

14. **ಅಪ್ರೆಂಟೈಸ್ ಅವಧಿಯ ವೇತನ :** ಯಾವುದೇ ಉದ್ಯೋಗದಾತರ ಸಂಸ್ಥೆಯಲ್ಲಿ ಸೇವಾನುಭವ ಪಡೆಯುವುದಕ್ಕಾಗಿ ದಿ ಅಪ್ರೆಂಟೈಸ್ ಕಾಯ್ದೆ -1961 ರ ಪ್ರಾವಧಾನಗಳನ್ವಯ ತರಬೇತಿ ಪಡೆಯುವ ಅಪ್ರೆಂಟೈಸ್‌ಗಳಿಗೆ ದಿ ಅಪ್ರೆಂಟೈಸ್ ಕಾಯ್ದೆ -1961 ರ ಪ್ರಾವಧಾನಗಳನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

15. **ಸ್ಥಾಯಿ ಆದೇಶಗಳಲ್ಲಿಯ ಪ್ರಾವಧಾನಗಳನ್ವಯ ತರಬೇತಿ ಅವಧಿಯ ವೇತನ:** ಯಾವುದೇ ಉದ್ಯೋಗದಾತರ ಸಂಸ್ಥೆಯಲ್ಲಿ ತರಬೇತಿ, ಪಡೆಯುವ ಉದ್ಯೋಗಿಗಳಿಗೆ ಔದ್ಯೋಗಿಕ ಉದ್ಯೋಗಗಳ (ಸ್ಥಾಯಿ ಆದೇಶಗಳ) ಕಾಯ್ದೆ 1946 ಹಾಗೂ ಅದರಡಿಯ ಕರ್ನಾಟಕ ನಿಯಮಗಳನ್ವಯ ಪ್ರಮಾಣೀಕೃತ ಸ್ಥಾಯಿ ಆದೇಶಗಳಲ್ಲಿ ಅಥವಾ ಮಾದರಿ ಸ್ಥಾಯಿ ಆದೇಶಗಳಲ್ಲಿ ನಿಗಧಿತವಾದ "ತರಬೇತಿ ಅವಧಿ"ಯಲ್ಲಿ ಈ ಅಧಿಸೂಚನೆಯ ಮೂಲಕ ನಿಗಧಿಗೊಳಿಸಿದ ಕನಿಷ್ಠ ವೇತನದ ಶೇಕಡಾ 75 (ಎಪ್ಪತ್ತೈದು) ರಷ್ಟು ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

16. **ಸರ್ಕಾರದ ಯೋಜನೆ / ಕಾರ್ಯಕ್ರಮದಡಿಯಲ್ಲಿ ಹಾಗೂ ಸಾಮಾನ್ಯ ತರಬೇತಿಯ ಅವಧಿಯ ವೇತನ:** ಮೇಲ್ಕಂಡ ಷರತ್ತು ಸಂಖ್ಯೆ 11 ಹಾಗೂ 12 ನ್ನು ಹೊರತುಪಡಿಸಿ, ತರಬೇತಿ ಪಡೆಯುವ ಉದ್ಯೋಗಿಗಳಿಗೆ (ಟ್ರೈನಿಗಳಿಗೆ) ಈ ಅಧಿಸೂಚನೆಯಡಿ ನಿಗಧಿಪಡಿಸಿದ ಕೆಲಸದ ಸ್ವರೂಪಗಳಿಗೆ ನಿಗಧಿಪಡಿಸಿರುವ ಕನಿಷ್ಠ ವೇತನವನ್ನು ಪಾವತಿಸತಕ್ಕದ್ದು. ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರ ಯಾವುದೇ ತರಬೇತಿಗಾಗಿ ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ರೂಪಿಸಿದ್ದು, ಸದರಿ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಉದ್ಯೋಗದಾತರು ಅನುಷ್ಠಾನಗೊಳಿಸುತ್ತಿದಲ್ಲಿ, ಸದರಿ ಯೋಜನೆಗಳಡಿಯಲ್ಲಿ / ಕಾರ್ಯಕ್ರಮದಡಿಯಲ್ಲಿ ನಿಗಧಿಪಡಿಸಿರುವ ವೇತನವನ್ನು ಉದ್ಯೋಗದಾತರು ತರಬೇತಿ ಪಡೆಯುವವರಿಗೆ ಪಾವತಿಸತಕ್ಕದ್ದು.

17. **ರೂಢಿಗತ ಸೌಲಭ್ಯಗಳ ಮುಂದುವರಿಕೆ:** ಅಧಿಸೂಚಿತ ಕನಿಷ್ಠ ವೇತನಕ್ಕೆ ಹೆಚ್ಚುವರಿಯಾಗಿ ರೂಡಿ ಮತ್ತು ಪದ್ಧತಿಯನ್ವಯ ವಸ್ತು ರೂಪದಲ್ಲಿ ಯಾವುದೇ ಸಂಭಾವನೆಯನ್ನು ಉದ್ಯೋಗದಾತರಿಂದ ಕಾರ್ಮಿಕರು ಪಡೆಯುತ್ತಿದ್ದಲ್ಲಿ, ಸದರಿ ಹೆಚ್ಚುವರಿ ವಸ್ತು ರೂಪದ ಸಂಭಾವನೆಯನ್ನು ಮುಂದುವರೆಸಲು ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

18. **ದಿವ್ಯಾಂಗ ಕಾರ್ಮಿಕರ ವೇತನ:** ವಿಕಲಚೇತನ ವ್ಯಕ್ತಿಗಳು ಕೆಲಸ ನಿರ್ವಹಿಸುತ್ತಿದ್ದಲ್ಲಿ ಸದರಿ ಕೆಲಸವನ್ನು ನಿರ್ವಹಿಸುತ್ತಿರುವ ಇತರೆ ಸಾಮಾನ್ಯ ಕಾರ್ಮಿಕರು ಪಡೆಯುತ್ತಿರುವ ವೇತನಕ್ಕೆ ಸಮನಾಗಿ ವೇತನವನ್ನು ಪಡೆಯಲು ವಿಕಲಚೇತನ (ದಿವ್ಯಾಂಗ) ಕಾರ್ಮಿಕರು ಅರ್ಹರಾಗಿದ್ದು, ಇದನ್ನು ವಿಕಲಾಂಗ

ವ್ಯಕ್ತಿಗಳು (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಹಾಗೂ ಪೂರ್ಣ ಭಾಗವಹಿಸುವಿಕೆ) ಕಾಯ್ದೆ–1995 ರ ಪ್ರಾವಧಾನಗಳ ಹಿನ್ನೆಲೆಯಲ್ಲಿ ಪಾವತಿಸಲು ಉದ್ಯೋಗದಾತರು ಕ್ರಮವಹಿಸತಕ್ಕದ್ದು.

19. **ಕನಿಷ್ಠ ವೇತನ ಮೊತ್ತದ ಕಡ್ಡಾಯ ಪಾವತಿ:** ಕರ್ತವ್ಯ ನಿರ್ವಹಿಸಿದ ಕಾರ್ಮಿಕರಿಗೆ ಪಾವತಿ ಮಾಡುವ ಒಟ್ಟು ವೇತನವು, ಈ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ಕನಿಷ್ಠ ವೇತನ ದರಗಳನ್ನು ಮತ್ತು ಕಾಲಕಾಲಕ್ಕೆ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು ಸೇರ್ಪಡಿಸಿದಾಗ ಬರುವ ಮೊತ್ತಕ್ಕೆ ಕಡಿಮೆಯಾಗದಂತೆ ವೇತನವನ್ನು ಕಡ್ಡಾಯವಾಗಿ ಉದ್ಯೋಗದಾತರು ಪಾವತಿಸತಕ್ಕದ್ದು.

20. **ಕಾರ್ಮಿಕರ ಕೆಲಸದ ಸ್ವರೂಪಗಳ ವರ್ಗೀಕರಣ:** ಕಾರ್ಮಿಕರು ಉದ್ಯೋಗದಾತರ ಸಂಸ್ಥೆಯಲ್ಲಿ ನಿರ್ವಹಿಸುವ ಕೆಲಸದ ಸ್ವರೂಪವನ್ನು ಅವರ ಕೌಶಲ್ಯಗಳಿಗನುಗುಣವಾಗಿ ನಾಲ್ಕು (04) ವರ್ಗಗಳಲ್ಲಿ ವಿಂಗಡಿಸಿದ್ದು, ಅದರ ಸಾಮಾನ್ಯ ವ್ಯಾಖ್ಯಾನ ಈ ಕೆಳಗಿನಂತಿದೆ;

ಅ. **ಅತಿ ಕುಶಲ:** ಅತಿ ಕುಶಲ ಕೆಲಸಗಾರರು ಎಂದರೆ ಯಾರು ಹೆಚ್ಚಿನ ನೈಪುಣ್ಯತೆ ಕೆಲಸವನ್ನು ಅತಿ ಹೆಚ್ಚು ನಿಖರವಾಗಿ ಮಾಡಬಲ್ಲವರಾಗಿದ್ದು, ನಕ್ಷೆಯನ್ನು ಓದಬಲ್ಲ ಮತ್ತು ಅದರ ಆಧಾರದ ಮೇಲೆ ಕೆಲಸ ಮಾಡಬಲ್ಲವರಾಗಿದ್ದು, ಅವರ ವಿಭಾಗದ 'ಕುಶಲ', ಮತ್ತು ಇತರೇ ಕೆಲಸಗಾರರ ಕೆಲಸವನ್ನು ನಿರ್ದೇಶಿಸಬಲ್ಲ ಸಾಮರ್ಥ್ಯವುಳ್ಳವರಾಗಿದ್ದು, ಆ ವಿಭಾಗದ ಕೆಲಸವನ್ನು ಸ್ವತಂತ್ರವಾಗಿ ನಿರ್ವಹಿಸಿಕೊಂಡು ಹೋಗಬಲ್ಲವರಾಗಿರಬೇಕು.

ಆ. **ಕುಶಲ :** ಕುಶಲ ಕೆಲಸಗಾರರು ಅಂದರೆ ಸ್ವತಂತ್ರವಾಗಿ ಹಾಗೂ ಪರಿಣಾಮಕಾರಿಯಾಗಿ ಮತ್ತು ಕೆಲಸವನ್ನು ಸರಿಯಾಗಿ ಮಾಡಬಲ್ಲ ಸಾಮರ್ಥ್ಯವುಳ್ಳ ಕಾರ್ಮಿಕ ಅವಶ್ಯ ಬಿದ್ದರೆ ಸರಳವಾದ ನಕ್ಷೆಗಳನ್ನು ಓದಿ, ಕೆಲಸ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.

ಇ. **ಅರೆ ಕುಶಲ :** ತನ್ನ ಕಸುಬಿನ ಬಗ್ಗೆ ಸಾಕಷ್ಟು ಜ್ಞಾನವಿರುವ ಹಾಗೂ ಪುನರಾವರ್ತನೆ ಕೆಲಸ ಮಾಡುವ ಸಾಮರ್ಥ್ಯವುಳ್ಳ ಹಾಗೂ ಯಂತ್ರೋಪಕರಣಗಳ ಸಹಾಯದಿಂದ ಸರಳವಾದ ಕೆಲಸಗಳನ್ನು ಮಾಡಬಲ್ಲವರು.

ಈ. **ಕುಶಲರಲ್ಲದವರು :** ಸ್ವತಂತ್ರವಾದ ನಿರ್ಣಯದ ಅವಶ್ಯಕತೆಯಿಲ್ಲದ ಅಥವಾ ಹಿಂದಿನ ಅನುಭವ ಇಲ್ಲದೆ ಆದರೆ ಉದ್ಯೋಗದ ವಾತಾವರಣದ ಪರಿಚಯವಿದ್ದು ಕೆಲಸ ಮಾಡುವುದು, ದೈಹಿಕ ಪರಿಶ್ರಮವಿಲ್ಲದೆ ವಿವಿಧರೀತಿಯ ವಸ್ತುಗಳು ಮತ್ತು ಸಾಮಾನ್ಯ ಜ್ಞಾನವಿರುವ ಕೆಲಸವನ್ನು ಮಾಡುವವರು.

21. **ಭೌಗೋಳಿಕ ಪ್ರದೇಶಗಳ ವರ್ಗೀಕರಣ:** ಕನಿಷ್ಠ ವೇತನ ದರಗಳನ್ನು ರಾಜ್ಯದ ನಾಲ್ಕು (04) ಭೌಗೋಳಿಕ ಪ್ರದೇಶವಾರು ಆಧಾರದ ಮೇಲೆ ಅಧಿಸೂಚಿಸಲಾಗಿದ್ದು, ಈ ಭೌಗೋಳಿಕ ಪ್ರದೇಶಗಳ ವಿವರಣೆಯನ್ನು ಈ ಕೆಳಕಂಡಂತೆ ನೀಡಲಾಗಿರುತ್ತದೆ;

| | | |
|---|---|---|
| ಅ | ವಲಯ – 1 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿಯ ಅಧಿಸೂಚಿತ ಪ್ರದೇಶಗಳು. |
| ಆ | ವಲಯ – 2 | ವಲಯ–1 ಅನ್ನು ಹೊರತುಪಡಿಸಿ ರಾಜ್ಯದಎಲ್ಲಾ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿಯ ಅಧಿಸೂಚಿತ ಪ್ರದೇಶಗಳು. |
| ಇ | ವಲಯ – 3 | ವಲಯ–1 ಹಾಗೂ ವಲಯ–2 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು. |
| ಈ | ವಲಯ – 4 | ವಲಯ–1, ವಲಯ–2 ಮತ್ತು 3 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಇತರೆ ಎಲ್ಲಾ ಪ್ರದೇಶಗಳು. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಲ್.ಎಸ್.ಶ್ರೀಕಂಠಬಾಬು,
ಸರ್ಕಾರದ ಉಪ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

PR-51
SC-200

## ಕಾರ್ಮಿಕ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ : ಕಾಇ 21 ಎಲ್ಎಂಡಬ್ಲ್ಯೂ 2017, ಬೆಂಗಳೂರು, ದಿನಾಂಕ : 30–12–2017**

ಕರ್ನಾಟಕ ರಾಜ್ಯದಾದ್ಯಂತ **"ಸ್ಪಿನ್ನಿಂಗ್ ಮಿಲ್ಸ್ ಇಂಡಸ್ಟ್ರೀ '(Spinning Mills Industry)"** ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಅನ್ವಯವಾಗುವ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲುದ್ದೇಶಿಸಿ, ರಾಜ್ಯ ಸರ್ಕಾರವು ತನಗೆ ಕನಿಷ್ಠ ವೇತನ ಕಾಯ್ದೆ, 1948ರ ಕಲಂ 5 (1)(ಬಿ) ರ ಪ್ರಾವಧಾನದನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರಡು ಅಧಿಸೂಚನೆ ಸಂಖ್ಯೆ: ಕಾಇ 21 ಎಲ್ಎಂಡಬ್ಲ್ಯೂ 2017, ಬೆಂಗಳೂರು ದಿನಾಂಕ: 28–04–2017 ಅನ್ನು ಕರ್ನಾಟಕ ರಾಜ್ಯಪತ್ರದ ಭಾಗ 4ಎ ಭಾಗ ಪುಟ ಸಂಖ್ಯೆ: 4519 ರಿಂದ 4523 ರಲ್ಲಿ ದಿನಾಂಕ: 22 ನೇ ಜೂನ್ 2017 ರಂದು ಪ್ರಕಟಿಸಿರುತ್ತದೆ ಹಾಗೂ ತನ್ಮೂಲಕ ಈ ಕರಡು ಅಧಿಸೂಚನೆಯಿಂದ ಬಾಧಿತರಾಗುವ ಹಾಗೂ ಸಂಬಂಧವಿರುವ ವ್ಯಕ್ತಿಗಳು ಹಾಗೂ ಅವರನ್ನು ಪ್ರತಿನಿಧಿಸುವ ಸಂಘ–ಸಂಸ್ಥೆಗಳ ಗಮನಕ್ಕೆ ವಿಷಯವನ್ನು ರಾಜ್ಯ ಸರ್ಕಾರವು ತಂದಿರುತ್ತದೆ. ರಾಜ್ಯ ಸರ್ಕಾರವು ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸಲು ಎರಡು (02) ತಿಂಗಳ ಕಾಲಾವಕಾಶವನ್ನು ಸಂಬಂಧಿಸಿದವರೆಲ್ಲರಿಗೂ ಕಲ್ಪಿಸಿರುತ್ತದೆ. ಸದರಿ ಅವಧಿಯಲ್ಲಿ ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಹಲವು ನಿರ್ದಿಷ್ಟವಾದ ಹಾಗೂ ಸಾಮಾನ್ಯವಾದ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸಂಬಂಧಿಸಿದವರಿಂದ ರಾಜ್ಯ ಸರ್ಕಾರವು ಸ್ವೀಕರಿಸಿರುತ್ತದೆ.

ರಾಜ್ಯ ಸರ್ಕಾರವು ತನ್ನ ಪತ್ರ ಸಂಖ್ಯೆ: ಕಾಇ 02 ಎಲ್ಎಂಡಬ್ಲ್ಯೂ 2017 ದಿನಾಂಕ:08–11–2017 ರ ಮೂಲಕ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಸಭೆಯನ್ನು ಕರೆದು ಸದರಿ ಕರಡು ಅಧಿಸೂಚನೆ ಬಗ್ಗೆ ಸಲಹೆಗಳನ್ನು ನೀಡುವಂತೆ ಸೂಚಿಸಲಾಗಿ, ದಿನಾಂಕ:06–12–2017 ರಂದು ನಿಯಮಾನುಸಾರ ನಡೆದ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಸಭೆಯಲ್ಲಿ ಮೇಲ್ಕಂಡ ಕರಡು ಅಧಿಸೂಚನೆ ಹಾಗೂ ಅದಕ್ಕೆ ಸಂಬಂಧಿಸಿದಂತೆ ಸ್ವೀಕರಿಸಲಾದ ಸಲಹೆಗಳು ಹಾಗೂ ಆಕ್ಷೇಪಣೆಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸದರಿ ಮಂಡಳಿಯಲ್ಲಿ ಸರ್ಕಾರದ ಪ್ರಸ್ತಾವನೆಯನ್ನು ಸುದೀರ್ಘವಾಗಿ ಸಮಾಲೋಚಿಸಿ, ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಮಂಡಳಿಯು ಸರ್ಕಾರಕ್ಕೆ ತನ್ನ ಶಿಫಾರಸ್ಸನ್ನು ನೀಡಿರುತ್ತದೆ.

ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯು ದಿನಾಂಕ: 06–12–2017ರ ಸಭೆಯಲ್ಲಿ ನೀಡಿರುವ ಸಲಹೆಗಳನ್ನು ಹಾಗೂ ಸಂಬಂಧಿಸಿದ ಇತರೆ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿರುವ ರಾಜ್ಯ ಸರ್ಕಾರವು, ತನಗೆ ಕನಿಷ್ಠ ವೇತನ ಕಾಯ್ದೆ, 1948ರ ಕಲಂ 3(1)(ಬಿ) ಸಹವಾಚಿತ ಕಲಂ 5 (1)(ಬಿ) ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ತತ್ಸಂಬಂಧದ ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಕರ್ನಾಟಕ

ರಾಜ್ಯದಾದ್ಯಂತ **"ಸ್ಪಿನ್ನಿಂಗ್ ಮಿಲ್ಸ್ ಇಂಡಸ್ಟ್ರಿ " (Spinning Mills Industry)"** ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ **ಈ ಅಧಿಸೂಚನೆಯು ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ** ಈ ಕೆಳಕಂಡ ಕನಿಷ್ಠ ವೇತನ ದರಗಳ ಕೋಷ್ಟಕದಲ್ಲಿರುವಂತೆ, ಕನಿಷ್ಠ ವೇತನ ದರಗಳನ್ನು ಈ ಅಧಿಸೂಚನೆಯ ಮೂಲಕ ಪರಿಷ್ಕರಿಸಲಾಗಿರುತ್ತದೆ. ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಪಾವತಿಸಲು, ಕನಿಷ್ಠ ವೇತನ ಕಾಯ್ದೆ-1948ರ ಕಲಂ 12 ರನ್ವಯ ಸಂಬಂಧಿಸಿದ ಎಲ್ಲಾ ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

**<u>ಕನಿಷ್ಟ ವೇತನ ದರಗಳ ಕೋಷ್ಟಕ</u>**

**"ಸ್ಪಿನ್ನಿಂಗ್ ಮಿಲ್ಸ್ ಇಂಡಸ್ಟ್ರೀ (Spinning Mills Industry)"**

| ಕೆಲಸದ ವರ್ಗೀಕರಣ | ವಲಯ-1 | | ವಲಯ-2 | | ವಲಯ-3 | | ವಲಯ-4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| **ಅತಿ ಕುಶಲ ಕಾರ್ಮಿಕರು**<br>ಸೂಪರ್‌ವೈಸರ್, ಮೇಸ್ತ್ರಿ, ಇತರೆ ಅತಿಕುಶಲ ಕೆಲಸಕ್ಕೆ | 15423-40 | 593-21 | 14688-95 | 564-96 | 13989-48 | 538-06 | 13323-31 | 512-44 |
| **ಕುಶಲ ಕಾರ್ಮಿಕರು**<br>ಎಲೆಕ್ಟ್ರಿಷಿಯನ್, ಜನರೇಟರ್ ಆಪರೇಟರ್,<br>ಟರ್ನರ್, ವೆಲ್ಡರ್, ಲಫಮ್ ವೈಂಡರ್, ವೈಂಡಿಂಗ ಫಿಟ್ಟರ್,<br>ಕಾರ್ಡಿಂಗ್ ಫಿಟ್ಟರ್, ಪ್ರಿಪರೇಟರಿ ಫಿಟ್ಟರ್, ಫಿಟ್ಟರ್ ಬ್ಲೊ ರೂಂ,<br>ಸ್ಪಿನ್ನಿಂಗ್ ಫಿಟ್ಟರ್, ಫಿಟ್ಟರ್ ರಿಂಗ್ ಪ್ರೇವರ್, ಸ್ಪಂಡಲ್ ಗ್ಯಾಂಗರ್ಸ್, ಶೇಪರ್, ಪ್ರೆಸ್ಸರ್, ಸ್ಟ್ರಿಪ್ಪರ್,<br>ಸ್ಟಿಕ್ಕರ್ಸ್ , ಇತರೆ ಕುಶಲ ಕೆಲಸಕ್ಕೆ | 14021-27 | 539-28 | 13353-59 | 513-60 | 12717-71 | 489-14 | 12112-10 | 465-85 |
| **ಅರೆ ಕುಶಲ ಕಾರ್ಮಿಕರು**<br>ಕಾರ್ಡಿಂಗ್ ಅಸಿಸ್ಟಂಟ್, ಅಸಿಸ್ಟಂಟ್ ಫಿಟ್ಟರ್, ಪ್ರಿಪರೇಟರಿ ಅಸಿಸ್ಟಂಟ್ ಫಿಟ್ಟರ್, ಯಾರ್ನ ಕಂಡಿಷನರ್, ಕಾರ್ಡಿಂಗ್ ವರ್ಕರ್,<br>ಸಿಂಪ್ಲೆಟೆಕ್ಸ್ ಟೆಂಟರ್ಸ್, ಡ್ರಾಯಿಂಗ ಟೆಂಟರ್ಸ್, ಆಯಿಲರ್ಸ್, ಸೈಡರ್,<br>ರೀಸಕ್ ವೀಸರ್ಸ್, ಅಸಿಸ್ಟಂಟ್ ಫೀಪರ್ಸ್, ಕಾಯಿಸ್ ಗ್ರೈಂಡರ್ಸ್<br>ಬಟ್ಲಿಂಗ್ ಫೀಪರ್ಸ್, ಇತರೆ ಅರೆ ಕುಶಲ ಕೆಲಸಕ್ಕೆ | 12746-61 | 490-25 | 12139-63 | 466-91 | 11561-55 | 444-68 | 11011-00 | 423-50 |

| ಕೆಲಸದ ವರ್ಗೀಕರಣ | ವಲಯ 1 | | ವಲಯ 2 | | ವಲಯ 3 | | ವಲಯ 4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| **ಅಕುಶಲ ಕಾರ್ಮಿಕರು** ಬೆಲ್ ಬ್ರಷರ್ ಅಟೆಂಡರ್, ವರ್ಕ ಗ್ಯಾಪ್ ಅಟೆಂಡರ್, ಮೋಟಾರ್ ಅಟೆಂಡರ್, ಸ್ಕಚರ್ ಅಟೆಂಡರ್, ಸ್ಪಿನ್ನಿಂಗ್ ಟೇಪರ್ ಸ್ಟ್ರೀಚರ್, ಬ್ಲೊ ರೂಂ ಅಟೆಂಡರ್, ಕಾರ್ಡಿಂಗ್ ಅಟೆಂಡರ್, ಕೊಂಬರ್ ಟೆಂಟರ್, ಡೋಪಿಂಗ ಬಾಯ್ಸ್, ಹಾಫ್ ಕ್ಯಾರಿಯರ್, ಮಿಕ್ಸಿಂಗ್ ಅಟೆಂಡರ್/ ಹೆಲ್ಪರ್, ಸ್ಪಿನ್ನಿಂಗ್ ಜಾಬರ್, ರೀಲರ್ಸ್, ಮಿಕ್ಸಿಂಗ್ ಮಜ್ದೂರ್, ಫಿಟ್ಟರ್ ಹೆಲ್ಪರ್: ಮೆಂಟೆನನ್ಸ್ ಹೆಲ್ಪರ್, ಬೈಂಡಿಂಗ್ ವರ್ಕರ್, ತೂಕ ಮಾಡುವುದು, ವೇಸ್ಟ್ ಪಿಕ್ಕರ್ಸ್, ಮಜ್ದೂರ್, ಹೆಲ್ಪರ್ ಕಂ ವೈಂಡರ್, ಕ್ಲೀನಿಂಗ್ ಗ್ಯಾಂಗ್ ಇತರೆ ಅಕುಶಲ ಕೆಲಸಕ್ಕೆ | 11587–83 | 445–69 | 11036–03 | 424–46 | 10510–50 | 404–25 | 10010–00 | 385–00 |

**ಕಛೇರಿ ಸಿಬ್ಬಂದಿಗಳು ಮತ್ತು ಚಾಲಕರು**

| ಹುದ್ದೆಗಳ ವಿವರ | ವಲಯ–1 | | ವಲಯ–2 | | ವಲಯ–3 | | ವಲಯ–4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| ಮ್ಯಾನೇಜರ್, ಪರ್ಸನಲ್ ಆಫೀಸರ್ ಮಾರ್ಕೆಟಿಂಗ್ ಮ್ಯಾನೇಜರ್/ ಕಛೇರಿ ಮೇಲ್ವಿಚಾರಣೆಯ ತತ್ಸಮಾನ ಹುದ್ದೆ, | 16423–00 | 631–00 | 15688–00 | 603–38 | 14989–00 | 576–50 | 14323–00 | 550–88 |
| ಅಸಿಸ್ಟೆಂಟ್ ಮ್ಯಾನೇಜರ್ ಅಸಿಸ್ಟೆಂಟ್ ಪರ್ಸನಲ್ ಮ್ಯಾನೇಜರ್, ಸೀನಿಯರ್ ಅಕೌಂಟೆಂಟ್ ಮತ್ತು ತತ್ಸಮಾನ ಹುದ್ದೆ | 15423–40 | 593–21 | 14688–95 | 564–96 | 13989–48 | 538–06 | 13323–31 | 512–44 |

| ಹುದ್ದೆಗಳ ವಿವರ | ವಲಯ-1 | | ವಲಯ-2 | | ವಲಯ-3 | | ವಲಯ-4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| ಹಿರಿಯ ಗುಮಾಸ್ತ, ಕ್ಯಾಷಿಯರ್, ಜಡ್ಜ್‌ಮೆಂಟ್ ರೈಟರ್, ಸ್ಟೆನೋಗ್ರಾಫರ್, ಸ್ಟೋರ್ ಕೀಪರ್, ರಿಸೆಪ್ಷನಿಸ್ಟ್, (ಸ್ವಾಗತಗಾರರು) ಮತ್ತು ತತ್ಸಮಾನ ಹುದ್ದೆ. | 14021–27 | 539–28 | 13353–59 | 513–60 | 12717–71 | 489–14 | 12112–10 | 465–85 |
| ಕಿರಿಯ ಗುಮಾಸ್ತ , ಬುಕಿಂಗ್ ಗುಮಾಸ್ತ, ಕಂಪ್ಯೂಟರ್ ಆಫರೇಟರ್, ಟೈಪಿಸ್ಟ್, ಟೆಲಿಫೋನ್ ಆಫರೇಟರ್, ಡಾಟಾ ಎಂಟ್ರೀ ಆಫರೇಟರ್ ಮತ್ತು ತತ್ಸಮಾನ ಹುದ್ದೆ | 12746–61 | 490–25 | 12139–63 | 466–91 | 11561–55 | 444–68 | 11011–00 | 423–50 |
| ಜವಾನ, ವಾಚ್ಮನ್, ಲಿಫ್ಟ್ ಆಫರೇಟರ್, ಆಫೀಸ್ ಬಾಯ್, ಅಟೆಂಡರ್, ಹೆಲ್ಪರ್/ಸಹಾಯಕ, ದಲಾಯತ್, ಮಜ್ದೂರ್, ಸ್ವೀಪರ್ ಮತ್ತು ತತ್ಸಮಾನ ಹುದ್ದೆ. | 11587–83 | 445–69 | 11036–03 | 424–46 | 10510–50 | 404–25 | 10010–00 | 385–00 |
| ಹೆವಿ ವೆಹಿಕಲ್ ಡ್ರೈವರ್, ಟ್ರ್ಯಾಕ್ಟರ್ ಡ್ರೈವರ್ ಬಹು ಆಕ್ಸೆಲ್ ಮತ್ತು ಘನ ವಾಹನ ಚಾಲಕರು, ಅರ್ಥ್ ಮೂವರ್ಸ್ ಚಾಲಕರು, ಕ್ರೇನ್ ಜೋಡಿಸಿದ ವಾಹನ ಚಾಲಕರು, ಟ್ರಾಕ್ಟರ್ ಚಾಲಕರು, ರೋಡ್ ರೋಲರ್ ಮತ್ತು ರಸ್ತೆ ನಿರ್ಮಾಣ ಕಾಮಗಾರಿ ವಾಹನಗಳ ಚಾಲಕರು | 14021–27 | 539–28 | 13353–59 | 513–60 | 12717–71 | 489–14 | 12112–10 | 465–85 |
| ಕಾರ್ ಡ್ರೈವರ್ ಜೀಪ್ ಡ್ರೈವರ್ ಲಘು ವಾಹನ ಚಾಲಕರು | 12746–61 | 490–25 | 12139–63 | 466–91 | 11561–55 | 444–68 | 11011–00 | 423–50 |
| ಟಂ ಟಂ, ತ್ರಿಚಕ್ರ ವಾಹನ ಚಾಲಕರು | 11587–83 | 445–69 | 11036–03 | 424–46 | 10510–50 | 404–25 | 10010–00 | 385–00 |

ಮೇಲ್ಕಂಡ ಕೋಷ್ಟಕದಲ್ಲಿಯ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ರಾಜ್ಯ ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನಿಗದಿಪಡಿಸಿದ್ದು, ಈ ಎಲ್ಲಾ ಷರತ್ತುಗಳನ್ನು ಯಥಾವತ್ತಾಗಿ ಸಂಬಂಧಿಸಿದ ಉದ್ಯೋಗದಾತರು ಪಾಲಿಸಲು ಬಾಧ್ಯಸ್ಥರಿರುತ್ತಾರೆ;

1. **ವ್ಯತ್ಯಾಸವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರ ಹಾಗೂ ಪಾವತಿ:** ನಿಗಧಿತ ಕನಿಷ್ಠ ವೇತನಕ್ಕನುಗುಣವಾಗಿ ಪಾವತಿಸಬೇಕಾದ ವ್ಯತ್ಯಸ್ಥವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಉದ್ಯೋಗದಾತರು ಮಾಡತಕ್ಕದ್ದು. ಹಿಂದಿನ ಕ್ಯಾಲೆಂಡರ್ ವರ್ಷದ ಹನ್ನೆರಡು (12) ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ತುಟ್ಟಿಭತ್ಯೆಯನ್ನು ಪ್ರತಿ ವರ್ಷದ ಏಪ್ರಿಲ್ ಮೊದಲನೇ ದಿನಾಂಕದಿಂದ ಅನ್ವಯವಾಗುವಂತೆ ಉದ್ಯೋಗದಾತರು ಪ್ರತಿ ವರ್ಷ ಲೆಕ್ಕಾಚಾರ ಮಾಡಿ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು. ಆದುದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2016 ರಿಂದ ಡಿಸೆಂಬರ್ 2016ರ) ಸರಾಸರಿ ಆಧಾರದ ಮೇಲೆ 2017 ಏಪ್ರಿಲ್ ಒಂದು (1) ನೇ ತಾರೀಖಿನಿಂದ ಜಾರಿಗೆ ಬರುತ್ತದೆ. ಗ್ರಾಹಕ ಬೆಲೆ ಸೂಚ್ಯಾಂಕ 6537 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ ನಾಲ್ಕು (4) ಪೈಸೆಯಂತೆ ಈ ಕೆಳಕಂಡ ವಿಧಾನದನ್ವಯ ಲೆಕ್ಕಾಚಾರ ಮಾಡಿ ತುಟ್ಟಿ ಭತ್ಯೆಯನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

**ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:–** ಮಾಸಿಕ ತುಟ್ಟಿಭತ್ಯೆ ಹಾಗೂ ದಿನದ ತುಟ್ಟಿಭತ್ಯೆಯನ್ನು ಕೆಳಕಂಡ ಸೂತ್ರಗಳನ್ವಯ ಕ್ರಮವಾಗಿ ಲೆಕ್ಕಾಚಾರ ಮಾಡತಕ್ಕದ್ದು;

**ಅ) ಮಾಸಿಕ ವೇತನವನ್ನು ಪಡೆಯುವವರು:–** ಮಾಸಿಕ ವೇತನ ಪಡೆಯುವ ಕಾರ್ಮಿಕರಿಗೆ ಈ ಕೆಳಕಂಡ ಸೂತ್ರದನ್ವಯ ತುಟಿಭತ್ಯೆಯನ್ನು ಲೆಕ್ಕ ಮಾಡತಕ್ಕದ್ದು ಹಾಗೂ ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸಿ ಪಾವತಿಸತಕ್ಕದ್ದು.

**ಮಾಸಿಕ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x ಮೂವತ್ತು(30) ದಿನಗಳು**

**ಆ) ದಿನಗೂಲಿ ವೇತನ ಪಡೆಯುವವರು :–** ದಿನಗೂಲಿ ಪಡೆಯುವ ಕಾರ್ಮಿಕರಿಗೆ ಮಾಸಿಕ ಕನಿಷ್ಠ ವೇತನ ದರವನ್ನು ಇಪ್ಪತ್ತಾರು (26) ದಿನಗಳಿಂದ ವಿಭಾಗಿಸಿ, {ನಾಲ್ಕು (4) ವಾರದ ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ} ಈ ಕೆಳಕಂಡ ಸೂತ್ರದನ್ವಯ ಲೆಕ್ಕ ಮಾಡತಕ್ಕದ್ದು. ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ ಅರ್ಹರಾದ ಕಾರ್ಮಿಕರಿಗೆ ಪಾವತಿಸತಕ್ಕದ್ದು.

**ದಿನದ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x** ಮೂವತ್ತು(30) ದಿನಗಳು / ಇಪ್ಪತ್ತಾರು (26)

2. **ಸೇವಾ ಹಿರಿತನ ಪರಿಗಣನೆ ಭತ್ಯೆ :** ಈ ಅಧಿಸೂಚನೆ ಜಾರಿಗೆ ಬಂದ ದಿನಾಂಕದಿಂದ ಯಾವುದೇ ಕಾರ್ಮಿಕನು ಒರ್ವ ಉದ್ಯೋಗದಾತರ ಸಂಸ್ಥೆಯಲ್ಲಿ ಅಥವಾ ಮಾಲೀಕರ ಅಧೀನದಲ್ಲಿ ನಿರಂತರ ಹತ್ತು (10) ವರ್ಷಗಳ ಸೇವೆಯನ್ನು ಸಲ್ಲಿಸಿದಲ್ಲಿ, ತನ್ನ ಪೂರ್ಣಗೊಳಿಸಿದ ಪ್ರತಿ ಹತ್ತು ವರ್ಷದ ಮೇಲ್ಪಟ್ಟ ಸೇವೆಗೆ ಅನುಗುಣವಾಗಿ ಆಯಾ ಕಾರ್ಮಿಕ ವರ್ಗಕ್ಕೆ ನಿಗದಿಪಡಿಸಿರುವ ಒಟ್ಟು ಮಾಸಿಕ ಕನಿಷ್ಠ ಮೂಲ ವೇತನದ ಮೇಲೆ ವರ್ಷವೊಂದರ ಸೇವೆಗೆ ಶೇಕಡಾ ಒಂದು (1) ರಷ್ಟು ಮೊತ್ತವನ್ನು ಸೇವಾ ಹಿರಿತನ ಪರಿಗಣನೆ ಭತ್ಯೆಯನ್ನಾಗಿ ಗರಿಷ್ಠ ಶೇಕಡಾ ಹತ್ತು (10) ರ ಮೇಲ್ಮಿತಿಗೆ ಒಳಪಟ್ಟು ಪಡೆಯಲು ಕಾರ್ಮಿಕರು ಅರ್ಹರಿರುತ್ತಾರೆ. ಪರಂತು ಈ ಅಧಿಸೂಚನೆ ಜಾರಿಗೆ ಬಂದ ದಿನಾಂಕಕ್ಕೆ ಇಪ್ಪತ್ತು (20) ವರ್ಷಕ್ಕಿಂತ ಹೆಚ್ಚಿನ ಸೇವೆಯನ್ನು ಸಲ್ಲಿಸಿದ ಕಾರ್ಮಿಕರಿದ್ದಲ್ಲಿ ಒಂದು ಸಲಕ್ಕೆ ಮಾತ್ರ ಸೇವಾ ಹಿರಿತನ ಮೊತ್ತವನ್ನು ಆಯಾ ಕಾರ್ಮಿಕ ವರ್ಗಕ್ಕೆ ನಿಗಧಿಪಡಿಸಿರುವ ಒಟ್ಟು ಮಾಸಿಕ ಕನಿಷ್ಠ ವೇತನದ ಶೇ 10ರ ಗರಿಷ್ಠಮಿತಿಗೆ ಒಳಪಟ್ಟು ಪಡೆಯಲು ಅರ್ಹರಿರುತ್ತಾರೆ. ಈ ಸೇವಾ ಹಿರಿತನ ಪರಿಗಣನೆ ಭತ್ಯೆಯ ಮೊತ್ತವು ಮೇಲ್ಕಂಡ ಷರತ್ತು ಸಂಖ್ಯೆ 1ರಲ್ಲಿ ವಿಧಿಸಿದ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು ಹೊರತುಪಡಿಸಿ, ಮೂಲವೇತನದ ಆಧಾರದಲ್ಲಿ ನಿಗದಿಪಡಿಸಿದ 'ಸೇವಾ ಹಿರಿತನದ ಪರಿಗಣನೆ ಭತ್ಯೆಯ ಮೊತ್ತ' ವಾಗಿರುತ್ತದೆ.

*ವಿವರಣೆ:* "ನಿರಂತರ ಸೇವೆಯನ್ನು ಲೆಕ್ಕ ಮಾಡಬೇಕಾದಾಗ ಹಿಂದಿನ ಆರ್ಥಿಕ ವರ್ಷದಲ್ಲಿ, ಸದರಿ ಸಂಸ್ಥೆಯಲ್ಲಿ ಕನಿಷ್ಠ ಎರಡು ನೂರ ನಲವತ್ತು (240) ದಿನಗಳು ಸೇವೆ ಸಲ್ಲಿಸಿದ ಕಾರ್ಮಿಕನು ಸದರಿ ವರ್ಷದಲ್ಲಿ ನಿರಂತರ ಸೇವೆ ಸಲ್ಲಿಸಿರುತ್ತಾನೆಂದು ಉದ್ಯೋಗದಾತರು ಪರಿಗಣಿಸತಕ್ಕದ್ದು"

3. **ಮಹಿಳೆಯರಿಗೆ ಸಮಾನ ವೇತನ :** ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಹಾಗೂ ಸಮ ಪ್ರಮಾಣದ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರಯರಿಗೂ ಸಮಾನ ದರದ ವೇತನಗಳನ್ನು ಉದ್ಯೋಗದಾತರು ಸಮಾನ ವೇತನ ಕಾಯ್ದೆ–1976ರ ಪ್ರಾವಧಾನಗಳನ್ವಯ ಮಹಿಳಾ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು.

4. **ಕಾರ್ಮಿಕರ ಹಕ್ಕುಗಳ ರಕ್ಷಣೆ:** ಯಾವುದೇ ಪ್ರದೇಶ ಅಥವಾ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಈ ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ಕನಿಷ್ಠ ವೇತನದ ದರಗಳಿಗಿಂತ ಹೆಚ್ಚಿನ ವೇತನವನ್ನು ಈಗಾಗಲೇ ಕೈಗಾರಿಕಾ ವಿವಾದಗಳ ಕಾಯ್ದೆ–1947 ರಡಿಯಲ್ಲಿಯ ಒಪ್ಪಂದ, ಕರಾರು ಅಥವಾ ಬೇರೆ ಯಾವುದೇ ರೀತಿಯನ್ವಯ ಪಡೆಯುತ್ತಿದ್ದಲ್ಲಿ, ಸದರಿ ಹೆಚ್ಚಿನ ವೇತನವನ್ನು ಮುಂದುವರೆದು ಪಡೆಯಲು ಕಾರ್ಮಿಕರು ಅರ್ಹರಾಗಿದ್ದು, ಅದನ್ನು ಪಾವತಿಸಲು ಉದ್ಯೋಗದಾತರು ಬಾಧ್ಯಸ್ಥರಿರುತ್ತಾರೆ.

5. **ಸಮರೂಪದ ಕೆಲಸದ ವರ್ಗಗಳಿಗೆ ಸಮನಾದ ವೇತನ:** ಈ ಅಧಿಸೂಚನೆಯಲ್ಲಿ ಕೆಲಸದ ಸ್ವರೂಪದ ವರ್ಗವನ್ನು ನಮೂದಿಸದೇ ಇರುವ ಕೆಲಸದ ಸ್ವರೂಪದ ವರ್ಗಗಳಿಗೆ ಸೇರಿದ ಕಾರ್ಮಿಕರಿಗೆ ಅದೇ ಸ್ವರೂಪದ (ಸಮಾನ) ಕೆಲಸ ನಿರ್ವಹಿಸುತ್ತಿರುವ ಇತರೆ ಕೆಲಸದ ಸ್ವರೂಪದ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಉದ್ಯೋಗದಾತರು ಸಂದಾಯ ಮಾಡತಕ್ಕದ್ದು. ಈ ಕುರಿತು ಯಾವುದೇ ವಿವಾದ ಉದ್ಭವಿಸಿದಲ್ಲಿ, ಸಂಬಂಧಿಸಿದ ಉದ್ಯೋಗದಾತರು ಒಂದು ತ್ರಿಪಕ್ಷಿಯ (ಸ್ವತಂತ್ರ ಸದಸ್ಯರು–3, ಕಾರ್ಮಿಕ ಪ್ರತಿನಿಧಿಗಳು –3 ಹಾಗೂ ಉದ್ಯೋಗದಾತರು –3, ಹೀಗೆ ಒಟ್ಟು ಒಂಬತ್ತು ಜನರ) ಸಮಿತಿಯನ್ನು ರಚಿಸಿ, ಸದರಿ ಸಮಿತಿಯು ಸ್ವಾಭಾವಿಕ ನ್ಯಾಯತತ್ವಗಳನ್ನು ಪರಿಪಾಲಿಸಿ, ಪಕ್ಷಗಾರರ ವಾದಗಳನ್ನು ಆಲಿಸಿ, ಎಲ್ಲಾ ವಿವಾದಾಂಶಗಳನ್ನು ಹಾಗೂ ಕೆಲಸದ ಕೌಶಲ್ಯದ ವರ್ಗವನ್ನು ಸಹ ವಿಶ್ಲೇಷಿಸಿ ಎರಡು ತಿಂಗಳ ಅವಧಿಯೊಳಗೆ ನೀಡುವ ಕನಿಷ್ಠ ವೇತನ ದರದ ವರದಿಯನ್ವಯ ಕ್ರಮವಹಿಸತಕ್ಕದ್ದು. ಸದರಿ ವರದಿಯ ಅನುಷ್ಠಾನಕ್ಕಾಗಿ "ಸಕ್ಷಮ ಅಧಿಕಾರಿ"ಯನ್ನು ಉದ್ಯೋಗದಾತರು ನಿಯುಕ್ತಿಗೊಳಿಸತಕ್ಕದ್ದು. ಸಕ್ಷಮ ಅಧಿಕಾರಿಯ ವರದಿ ಅನುಷ್ಠಾನ ಕ್ರಮದ ಬಗ್ಗೆ ಅಥವಾ ವರದಿಯ ಬಗ್ಗೆ ವಿವಾದವಿದ್ದಲ್ಲಿ, ಈ ಕುರಿತು "ಮೇಲ್ಮನವಿ ಪ್ರಾಧಿಕಾರಿ"ಯನ್ನು ಸಹ ನಿಯುಕ್ತಿಗೊಳಿಸಿ, ಉದ್ಯೋಗದಾತರು ಅಧಿಸೂಚನೆಯನ್ನು ಹೊರಡಿಸತಕ್ಕದ್ದು. ಒಂದು ತಿಂಗಳ ಕಾಲಮಿತಿಯೊಳಗೆ 'ಸಕ್ಷಮ ಪ್ರಾಧಿಕಾರಿ' ಹಾಗೂ 'ಮೇಲ್ಮನವಿ ಪ್ರಾಧಿಕಾರಿ' ಗಳು ಸ್ವಾಭಾವಿಕ ನ್ಯಾಯತತ್ವಗಳನ್ವಯ ಪ್ರಕರಣಗಳ ಇತ್ಯರ್ಥಕ್ಕೆ ಕ್ರಮವಹಿಸತಕ್ಕದ್ದು. 'ಮೇಲ್ಮನವಿ ಪ್ರಾಧಿಕಾರಿ' ಯ ನಿರ್ಣಯವು ಅಂತಿಮವಾಗಿದ್ದು, ಅದನ್ನು ಪಾಲಿಸಲು ಎಲ್ಲಾ ಪಕ್ಷಗಾರರು ಬಾಧ್ಯಸ್ಥರಿರುತ್ತಾರೆ.

6. **ಕನಿಷ್ಠ ವೇತನ ಸ್ವೀಕರಿಸುವ ಹಕ್ಕಿನ ರಕ್ಷಣೆ:** ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ ಎಂಟು (8) ಗಂಟೆಗಳ ಕೆಲಸದ ವೇತನವು ಅದೇ ಸ್ವರೂಪದ (ತರಹದ) ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರದಂತೆ ಉದ್ಯೋಗದಾತರು ಕ್ರಮವಹಿಸತಕ್ಕದ್ದು. ಈ ಬಗ್ಗೆ ವಿವಾದವಿದ್ದಲ್ಲಿ ಮೇಲ್ಕಂಡ ಷರತ್ತು ಸಂಖ್ಯೆ-5 ರಲ್ಲಿಯ ವಿವಾದ-ಪರಿಹಾರ ವ್ಯವಸ್ಥೆಯನ್ನು ಉದ್ಯೋಗದಾತರು ಸೃಷ್ಟಿಸಿ, ಕಾನೂನುಸಮ್ಮತ ಪರಿಹಾರವನ್ನು ರೂಪಿಸತಕ್ಕದ್ದು.

7. **ದುಡಿಮೆಯ ಅವಧಿಯ ಪ್ರಮಾಣಕ್ಕನುಗುಣವಾಗಿ ಕನಿಷ್ಠ ವೇತನ:** ಒಂದು ದಿನದ ಕೆಲಸ ಎಂದರೆ ಎಂಟು (8) ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು ಎಂಟು (8) ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಥವಾ ಕಾರ್ಮಿಕರು ಕೆಲಸ ನಿರ್ವಹಿಸಿದ್ದಲ್ಲಿ, ಅಂತಹ ಕಡಿಮೆ ಅವಧಿಯ ಪ್ರಮಾಣಕ್ಕನುಗುಣವಾಗಿ ಕನಿಷ್ಠ ವೇತನವನ್ನು ಕರ್ನಾಟಕ ಕನಿಷ್ಠ ವೇತನ ನಿಯಮಗಳು, 1958ರ ನಿಯಮ 27 ರನ್ವಯ ಆ ಕೆಲಸದ ವರ್ಗಕ್ಕೆ ನಿಗದಿಪಡಿಸಿರುವ ದಿನವೊಂದರ ಕನಿಷ್ಠ ವೇತನವನ್ನು ಗಂಟೆಗಳ ಕನಿಷ್ಠ ವೇತನವನ್ನಾಗಿ ಲೆಕ್ಕ ಹಾಕಿ, ಸಂಬಂಧಿಸಿದ ಕಾರ್ಮಿಕರಿಗೆ ಉದ್ಯೋಗದಾತರು ಪಾವತಿಸತಕ್ಕದ್ದು.

8. **ಕನಿಷ್ಠ ವೇತನದ ಪಾವತಿಯ ವಿಧಾನ** : ನಿಗಧಿತ ಕನಿಷ್ಠ ವೇತನದ ಮೂಲವೇತನ ಹಾಗೂ ತುಟ್ಟಿಭತ್ಯೆ ಲೆಕ್ಕಾಚಾರದಲ್ಲಿ ರೂಪಾಯಿಯ ಭಾಗಾಂಶವು ಬಂದ ಪಕ್ಷದಲ್ಲಿ ಅದನ್ನು ಸಮೀಪದ ಹೆಚ್ಚಿನ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ, ಕಾರ್ಮಿಕರಿಗೆ ಪಾವತಿಸತಕ್ಕದ್ದು.

9. **ಬ್ಯಾಂಕ್ ಖಾತೆಯ ಮೂಲಕ ವೇತನ ಪಾವತಿ:** ವೇತನ ಪಾವತಿ ಕಾಯ್ದೆ-1936ರ ಕಲಂ 6 ರ ಪ್ರಾವಧಾನದ ಅನ್ವಯ ಕಾರ್ಮಿಕರಿಗೆ ವೇತನವನ್ನು ಉದ್ಯೋಗದಾತರು ನೇರವಾಗಿ ಕಾರ್ಮಿಕರ ಬ್ಯಾಂಕ್ ಖಾತೆಗೆ ವರ್ಗಾಯಿಸುವ ಮೂಲಕ ಪಾವತಿಸತಕ್ಕದ್ದು.

10. **ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನ ದರಗಳ ಅನ್ವಯಿಸುವಿಕೆ:** ಈ ಅನುಸೂಚಿತ ಉದ್ದಿಮೆಗೆ ಒಳಪಡುವ ಸಂಸ್ಥೆಗಳಲ್ಲಿ ಹೊರಗುತ್ತಿಗೆ ವ್ಯವಸ್ಥೆಯ ಮೂಲಕ ಗುತ್ತಿಗೆ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ-1970 ಹಾಗೂ ಇತರೆ ಶಾಸನಬದ್ಧ ವ್ಯವಸ್ಥೆಗಳನ್ವಯ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೂ ಕೂಡಾ ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಉದ್ಯೋಗದಾತರು ಅನ್ವಯಿಸಿ, ಪಾವತಿಯನ್ನು ಮಾಡತಕ್ಕದ್ದು.

11. **ಸಾಮಾಜಿಕ ಭದ್ರತೆಯ ಕಾಯ್ದೆಗಳಡಿಯಲ್ಲಿ ಉದ್ಯೋಗದಾತರ ವಂತಿಗೆಯ ಪಾವತಿ:** ಕನಿಷ್ಠ ವೇತನದ ಮೊತ್ತವು (ಮೂಲ ವೇತನ + ತುಟ್ಟಿಭತ್ಯೆ) ಕರ್ತವ್ಯ ನಿರ್ವಹಿಸಿದ ಕಾರ್ಮಿಕನ ಅರ್ಜಿತ ವೇತನವಾಗಿದ್ದು, ಉದ್ಯೋಗದಾತರು ಈ ಕೆಳಕಂಡ ಕಾಯ್ದೆಗಳಡಿಯಲ್ಲಿ ಪಾವತಿಸಬೇಕಾದ **"ಉದ್ಯೋಗದಾತರ ವಂತಿಗೆ"** ಯನ್ನು ಕಾರ್ಮಿಕರ ಅರ್ಜಿತ ಕನಿಷ್ಠ ವೇತನದ ಮೊತ್ತದಿಂದ ಕಡಿತಗೊಳಿಸದೆ, ಪ್ರತ್ಯೇಕವಾಗಿ ಉದ್ಯೋಗದಾತರ ಸಂಪನ್ಮೂಲದಿಂದಲೇ ಪಾವತಿ ಮಾಡತಕ್ಕದ್ದು;

    1. ನೌಕರರ ರಾಜ್ಯ ವಿಮಾ ಕಾಯ್ದೆ-1948
    2. ನೌಕರರ ಭವಿಷ್ಯ ನಿಧಿ ಹಾಗೂ ಇತರೆ ಪ್ರಾವಧಾನಗಳ ಕಾಯ್ದೆ-1952

12. **ರಜಾದಿನದಲ್ಲಿಯ ದುಡಿಮೆಯ ವೇತನ :** ಉದ್ಯೋಗದಾತರ ಸಂಸ್ಥೆಯಲ್ಲಿ ಶಾಸನದನ್ವಯ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ, 1948 ಮತ್ತು ಅದರಡಿಯ ಕರ್ನಾಟಕ ನಿಯಮಗಳಲ್ಲಿಯ ಪ್ರಾವಧಾನಗಳು ಹಾಗೂ ಕರ್ನಾಟಕ ಔದ್ಯೋಗಿಕ ಸಂಸ್ಥೆಗಳು (ರಾಷ್ಟ್ರೀಯ ಮತ್ತು ಹಬ್ಬದ ರಜಾದಿನಗಳ) ಕಾಯ್ದೆ-1963ರ ಪ್ರಾವಧಾನಗಳನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

13. **ಹೆಚ್ಚುವರಿ ಅವಧಿ ದುಡಿಮೆಯ ವೇತನ:** ಕೆಲಸಗಾರರು ದಿನದ ನಿಗಧಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಕಾರ್ಮಿಕರಿಗೆ ಹೆಚ್ಚುವರಿ ಅವಧಿಯ ಕೆಲಸಕ್ಕೆ ಕನಿಷ್ಠ ವೇತನ ಕಾಯ್ದೆ-1948 ರ ಕಲಂ 14 ರನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

14. **ಅಪ್ರೆಂಟೈಸ್ ಅವಧಿಯ ವೇತನ** : ಯಾವುದೇ ಉದ್ಯೋಗದಾತರ ಸಂಸ್ಥೆಯಲ್ಲಿ ಸೇವಾನುಭವ ಪಡೆಯುವುದಕ್ಕಾಗಿ ದಿ ಅಪ್ರೆಂಟೈಸ್ ಕಾಯ್ದೆ -1961 ರ ಪ್ರಾವಧಾನಗಳನ್ವಯ ತರಬೇತಿ ಪಡೆಯುವ ಅಪ್ರೆಂಟೈಸ್‌ಗಳಿಗೆ ದಿ ಅಪ್ರೆಂಟೈಸ್ ಕಾಯ್ದೆ -1961 ರ ಪ್ರಾವಧಾನಗಳನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

15. **ಸ್ಥಾಯಿ ಆದೇಶಗಳಲ್ಲಿಯ ಪ್ರಾವಧಾನಗಳನ್ವಯ ತರಬೇತಿ ಅವಧಿಯ ವೇತನ:** ಯಾವುದೇ ಉದ್ಯೋಗದಾತರ ಸಂಸ್ಥೆಯಲ್ಲಿ ತರಬೇತಿ, ಪಡೆಯುವ ಉದ್ಯೋಗಿಗಳಿಗೆ ಔದ್ಯೋಗಿಕ ಉದ್ಯೋಗಗಳ (ಸ್ಥಾಯಿ ಆದೇಶಗಳ) ಕಾಯ್ದೆ, 1946 ಹಾಗೂ ಅದರಡಿಯ ಕರ್ನಾಟಕ ನಿಯಮಗಳನ್ವಯ ಪ್ರಮಾಣೀಕೃತ ಸ್ಥಾಯಿ ಆದೇಶಗಳಲ್ಲಿ ಅಥವಾ ಮಾದರಿ ಸ್ಥಾಯಿ ಆದೇಶಗಳಲ್ಲಿ ನಿಗಧಿತವಾದ **"ತರಬೇತಿ ಅವಧಿ"** ಯಲ್ಲಿ ಈ ಅಧಿಸೂಚನೆಯ ಮೂಲಕ ನಿಗಧಿಗೊಳಿಸಿದ ಕನಿಷ್ಠ ವೇತನದ ಶೇಕಡಾ 75 (ಎಪ್ಪತ್ತೈದು) ರಷ್ಟು ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

16. **ಸರ್ಕಾರದ ಯೋಜನೆ / ಕಾರ್ಯಕ್ರಮದಡಿಯಲ್ಲಿ ಹಾಗೂ ಸಾಮಾನ್ಯ ತರಬೇತಿಯ ಅವಧಿಯ ವೇತನ:** ಮೇಲ್ಕಂಡ ಷರತ್ತು ಸಂಖ್ಯೆ 11 ಹಾಗೂ 12 ನ್ನು ಹೊರತುಪಡಿಸಿ, ತರಬೇತಿ ಪಡೆಯುವ ಉದ್ಯೋಗಿಗಳಿಗೆ (ಟ್ರೈನಿಗಳಿಗೆ) ಈ ಅಧಿಸೂಚನೆಯಡಿ ನಿಗಧಿಪಡಿಸಿದ ಕೆಲಸದ ಸ್ವರೂಪಗಳಿಗೆ ನಿಗಧಿಪಡಿಸಿರುವ ಕನಿಷ್ಠ ವೇತನವನ್ನು ಪಾವತಿಸತಕ್ಕದ್ದು. ಕೇಂದ್ರ ಸರ್ಕಾರ/ರಾಜ್ಯ ಸರ್ಕಾರ ಯಾವುದೇ ತರಬೇತಿಗಾಗಿ ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ರೂಪಿಸಿದ್ದು, ಸದರಿ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಉದ್ಯೋಗದಾತರು ಅನುಷ್ಠಾನಗೊಳಿಸುತ್ತಿದ್ದಲ್ಲಿ, ಸದರಿ ಯೋಜನೆಗಳಡಿಯಲ್ಲಿ/ಕಾರ್ಯಕ್ರಮದಡಿಯಲ್ಲಿ ನಿಗಧಿಪಡಿಸಿರುವ ವೇತನವನ್ನು ಉದ್ಯೋಗದಾತರು ತರಬೇತಿ ಪಡೆಯುವವರಿಗೆ ಪಾವತಿಸತಕ್ಕದ್ದು.

17. **ರೂಢಿಗತ ಸೌಲಭ್ಯಗಳ ಮುಂದುವರಿಕೆ:** ಅಧಿಸೂಚಿತ ಕನಿಷ್ಠ ವೇತನಕ್ಕೆ ಹೆಚ್ಚುವರಿಯಾಗಿ ರೂಡಿ ಮತ್ತು ಪದ್ಧತಿಯನ್ವಯ ವಸ್ತು ರೂಪದಲ್ಲಿ ಯಾವುದೇ ಸಂಭಾವನೆಯನ್ನು ಉದ್ಯೋಗದಾತರಿಂದ ಕಾರ್ಮಿಕರು ಪಡೆಯುತ್ತಿದ್ದಲ್ಲಿ, ಸದರಿ ಹೆಚ್ಚುವರಿ ವಸ್ತು ರೂಪದ ಸಂಭಾವನೆಯನ್ನು ಮುಂದುವರೆಸಲು ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

18. **ದಿವ್ಯಾಂಗ ಕಾರ್ಮಿಕರ ವೇತನ:** ವಿಕಲಚೇತನ ವ್ಯಕ್ತಿಗಳು ಕೆಲಸ ನಿರ್ವಹಿಸುತ್ತಿದ್ದಲ್ಲಿ ಸದರಿ ಕೆಲಸವನ್ನು ನಿರ್ವಹಿಸುತ್ತಿರುವ ಇತರ ಸಾಮಾನ್ಯ ಕಾರ್ಮಿಕರು ಪಡೆಯುತ್ತಿರುವ ವೇತನಕ್ಕೆ ಸಮನಾಗಿ ವೇತನವನ್ನು ಪಡೆಯಲು ವಿಕಲಚೇತನ (ದಿವ್ಯಾಂಗ) ಕಾರ್ಮಿಕರು ಅರ್ಹರಾಗಿದ್ದು, ಇದನ್ನು ವಿಕಲಾಂಗ ವ್ಯಕ್ತಿಗಳು (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಹಾಗೂ ಪೂರ್ಣ ಭಾಗವಹಿಸುವಿಕೆ) ಕಾಯ್ದೆ-1995 ರ ಪ್ರಾವಧಾನಗಳ ಹಿನ್ನೆಲೆಯಲ್ಲಿ ಪಾವತಿಸಲು ಉದ್ಯೋಗದಾತರು ಕ್ರಮವಹಿಸತಕ್ಕದ್ದು.

19. **ಕನಿಷ್ಠ ವೇತನ ಮೊತ್ತದ ಕಡ್ಡಾಯ ಪಾವತಿ:** ಕರ್ತವ್ಯ ನಿರ್ವಹಿಸಿದ ಕಾರ್ಮಿಕರಿಗೆ ಪಾವತಿ ಮಾಡುವ ಒಟ್ಟು ವೇತನವು, ಈ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ಕನಿಷ್ಠ ವೇತನ ದರಗಳನ್ನು ಮತ್ತು ಕಾಲ ಕಾಲಕ್ಕೆ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು ಸೇರ್ಪಡಿಸಿದಾಗ ಬರುವ ಮೊತ್ತಕ್ಕೆ ಕಡಿಮೆಯಾಗದಂತೆ ವೇತನವನ್ನು ಕಡ್ಡಾಯವಾಗಿ ಉದ್ಯೋಗದಾತರು ಪಾವತಿಸತಕ್ಕದ್ದು.

20. **ಕಾರ್ಮಿಕರ ಕೆಲಸದ ಸ್ವರೂಪಗಳ ವರ್ಗೀಕರಣ:** ಕಾರ್ಮಿಕರು ಉದ್ಯೋಗದಾತರ ಸಂಸ್ಥೆಯಲ್ಲಿ ನಿರ್ವಹಿಸುವ ಕೆಲಸದ ಸ್ವರೂಪವನ್ನು ಅವರ ಕೌಶಲ್ಯಗಳಿಗನುಗುಣವಾಗಿ ನಾಲ್ಕು (04) ವರ್ಗಗಳಲ್ಲಿ ವಿಂಗಡಿಸಿದ್ದು, ಅದರ ಸಾಮಾನ್ಯ ವ್ಯಾಖ್ಯಾನ ಈ ಕೆಳಗಿನಂತಿದೆ;

**ಅ. ಅತಿ ಕುಶಲ:** ಅತಿ ಕುಶಲ ಕೆಲಸಗಾರರು ಎಂದರೆ ಯಾರು ಹೆಚ್ಚಿನ ನೈಪುಣ್ಯತೆ ಕೆಲಸವನ್ನು ಅತಿ ಹೆಚ್ಚು ನಿಖರವಾಗಿ ಮಾಡಬಲ್ಲವರಾಗಿದ್ದು, ನಕ್ಷೆಯನ್ನು ಓದಬಲ್ಲ ಮತ್ತು ಅದರ ಆಧಾರದ ಮೇಲೆ ಕೆಲಸ ಮಾಡಬಲ್ಲವರಾಗಿದ್ದು, ಅವರ ವಿಭಾಗದ 'ಕುಶಲ', ಮತ್ತು ಇತರೇ ಕೆಲಸಗಾರರ ಕೆಲಸವನ್ನು ನಿರ್ದೇಶಿಸಬಲ್ಲ ಸಾಮರ್ಥ್ಯವುಳ್ಳವರಾಗಿದ್ದು, ಆ ವಿಭಾಗದ ಕೆಲಸವನ್ನು ಸ್ವತಂತ್ರವಾಗಿ ನಿರ್ವಹಿಸಿ ಕೊಂಡು ಹೋಗಬಲ್ಲವರಾಗಿರಬೇಕು.

ಆ. ಕುಶಲ: ಕುಶಲ ಕೆಲಸಗಾರರು ಎಂದರೆ ಸ್ವತಂತ್ರವಾಗಿ ಹಾಗೂ ಪರಿಣಾಮಕಾರಿಯಾಗಿ ಮತ್ತು ಕೆಲಸವನ್ನು ಸರಿಯಾಗಿ ಮಾಡಬಲ್ಲ ಸಾಮರ್ಥ್ಯವುಳ್ಳ ಕಾರ್ಮಿಕ. ಅವಶ್ಯ ಬಿದ್ದರೆ ಸರಳವಾದ ನಕ್ಷೆಗಳನ್ನು ಓದಿ, ಕೆಲಸ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.

**ಇ. ಅರೆ ಕುಶಲ :** ತನ್ನ ಕಸುಬಿನ ಬಗ್ಗೆ ಸಾಕಷ್ಟು ಜ್ಞಾನವಿರುವ ಹಾಗೂ ಪುನರಾವರ್ತನೆ ಕೆಲಸ ಮಾಡುವ ಸಾಮರ್ಥ್ಯವುಳ್ಳ ಹಾಗೂ ಯಂತ್ರೋಪಕರಣಗಳ ಸಹಾಯದಿಂದ ಸರಳವಾದ ಕೆಲಸಗಳನ್ನು ಮಾಡಬಲ್ಲವರು.

**ಈ. ಕುಶಲರಲ್ಲದವರು :** ಸ್ವತಂತ್ರವಾದ ನಿರ್ಣಯದ ಅವಶ್ಯಕತೆಯಿಲ್ಲದ ಅಥವಾ ಹಿಂದಿನ ಅನುಭವ ಇಲ್ಲದೆ ಆದರೆ ಉದ್ಯೋಗದ ವಾತಾವರಣದ ಪರಿಚಯವಿದ್ದು ಕೆಲಸ ಮಾಡುವುದು, ದೈಹಿಕ ಪರಿಶ್ರಮವಿಲ್ಲದೆ ವಿವಿಧ ರೀತಿಯ ವಸ್ತುಗಳು ಮತ್ತು ಸಾಮಾನ್ಯ ಜ್ಞಾನವಿರುವ ಕೆಲಸವನ್ನು ಮಾಡುವವರು.

21. **ಭೌಗೋಳಿಕ ಪ್ರದೇಶಗಳ ವರ್ಗೀಕರಣ:** ಕನಿಷ್ಠ ವೇತನ ದರಗಳನ್ನು ರಾಜ್ಯದ ನಾಲ್ಕು (04) ಭೌಗೋಳಿಕ ಪ್ರದೇಶವಾರು ಆಧಾರದ ಮೇಲೆ ಅಧಿಸೂಚಿಸಲಾಗಿದ್ದು, ಈ ಭೌಗೋಳಿಕ ಪ್ರದೇಶಗಳ ವಿವರಣೆಯನ್ನು ಈ ಕೆಳಕಂಡಂತೆ ನೀಡಲಾಗಿರುತ್ತದೆ;

| | | |
|---|---|---|
| ಅ | **ವಲಯ – 1** | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿಯ ಅಧಿಸೂಚಿತ ಪ್ರದೇಶಗಳು. |
| ಆ | **ವಲಯ – 2** | ವಲಯ-1 ಅನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಮಹಾನಗರಪಾಲಿಕೆಗಳ ವ್ಯಾಪ್ತಿಯಲ್ಲಿಯ ಅಧಿಸೂಚಿತ ಪ್ರದೇಶಗಳು. |
| ಇ | **ವಲಯ – 3** | ವಲಯ-1 ಹಾಗೂ ವಲಯ-2 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು. |
| ಈ | ವಲಯ – 4 | ವಲಯ-1, ವಲಯ-2 ಮತ್ತು 3 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಇತರೆ ಎಲ್ಲಾ ಪ್ರದೇಶಗಳು. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ.

**ಎಲ್.ಎಸ್.ಶ್ರೀಕಂಠಬಾಬು,**
ಸರ್ಕಾರದ ಉಪ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

**PR-52**
**SC-200**

## ಕಾರ್ಮಿಕ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ : ಕಾಇ 16 ಎಲ್‌ಎಂಡಬ್ಲ್ಯೂ 2017, ಬೆಂಗಳೂರು, ದಿನಾಂಕ : 30-12-2017**

**ಕರ್ನಾಟಕ ರಾಜ್ಯದಾದ್ಯಂತ "ಮೆಟಲ್ ರೋಲಿಂಗ್ ಮತ್ತು ರೀ-ರೋಲಿಂಗ್ (ನಾನ್-ಫೆರಸ್) Metal rolling and Re-rolling [Non-Ferrous] Industry"** ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಅನ್ವಯವಾಗುವ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲುದ್ದೇಶಿಸಿ, ರಾಜ್ಯ ಸರ್ಕಾರವು ತನಗೆ ಕನಿಷ್ಠ ವೇತನ ಕಾಯ್ದೆ, 1948ರ ಕಲಂ 5(1)(ಬಿ)ರ ಪ್ರಾವಧಾನದನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರಡು ಅಧಿಸೂಚನೆ ಸಂಖ್ಯೆ: ಕಾಇ 16 ಎಲ್‌ಎಂಡಬ್ಲ್ಯೂ 2017, ಬೆಂಗಳೂರು ದಿನಾಂಕ: 27-04-2017 ಅನ್ನು ಕರ್ನಾಟಕ ರಾಜ್ಯಪತ್ರದ ಭಾಗ 4ಎ ಪುಟ ಸಂಖ್ಯೆ: 4186 ರಿಂದ 4189 ರಲ್ಲಿ ದಿನಾಂಕ: 08 ನೇ ಜೂನ್ 2017 ರಂದು ಪ್ರಕಟಿಸಿರುತ್ತದೆ ಹಾಗೂ ತನ್ಮೂಲಕ ಈ ಕರಡು ಅಧಿಸೂಚನೆಯಿಂದ ಬಾಧಿತರಾಗುವ ಹಾಗೂ ಸಂಬಂಧವಿರುವ ವ್ಯಕ್ತಿಗಳು ಹಾಗೂ ಅವರನ್ನು ಪ್ರತಿನಿಧಿಸುವ ಸಂಘ-ಸಂಸ್ಥೆಗಳ ಗಮನಕ್ಕೆ ವಿಷಯವನ್ನು ರಾಜ್ಯ ಸರ್ಕಾರವು ತಂದಿರುತ್ತದೆ. ರಾಜ್ಯ ಸರ್ಕಾರವು ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸಲು ಎರಡು (02) ತಿಂಗಳ ಕಾಲಾವಕಾಶವನ್ನು ಸಂಬಂಧಿಸಿದವರೆಲ್ಲರಿಗೂ ಕಲ್ಪಿಸಿರುತ್ತದೆ. ಸದರಿ ಅವಧಿಯಲ್ಲಿ ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಹಲವು ನಿರ್ದಿಷ್ಟವಾದ ಹಾಗೂ ಸಾಮಾನ್ಯವಾದ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸಂಬಂಧಿಸಿದವರಿಂದ ರಾಜ್ಯ ಸರ್ಕಾರವು ಸ್ವೀಕರಿಸಿರುತ್ತದೆ.

ರಾಜ್ಯ ಸರ್ಕಾರವು ತನ್ನ ಪತ್ರ ಸಂಖ್ಯೆ: ಕಾಇ 02 ಎಲ್‌ಎಮ್‌ಡಬ್ಲ್ಯೂ 2017 ದಿನಾಂಕ: 08-11-2017 ರ ಮೂಲಕ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಸಭೆಯನ್ನು ಕರೆದು ಸದರಿ ಕರಡು ಅಧಿಸೂಚನೆ ಬಗ್ಗೆ ಸಲಹೆಗಳನ್ನು ನೀಡುವಂತೆ ಸೂಚಿಸಲಾಗಿ, ದಿನಾಂಕ: 06-12-2017

ರಂದು ನಿಯಮಾನುಸಾರ ನಡೆದ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಸಭೆಯಲ್ಲಿ ಮೇಲ್ಕಂಡ ಕರಡು ಅಧಿಸೂಚನೆ ಹಾಗೂ ಅದಕ್ಕೆ ಸಂಬಂಧಿಸಿದಂತೆ ಸ್ವೀಕರಿಸಲಾದ ಸಲಹೆಗಳು ಹಾಗೂ ಆಕ್ಷೇಪಣೆಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ, ಸದರಿ ಮಂಡಳಿಯಲ್ಲಿ ಸರ್ಕಾರದ ಪ್ರಸ್ತಾವನೆಯನ್ನು ಸುಧೀರ್ಘವಾಗಿ ಸಮಾಲೋಚಿಸಿ ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಮಂಡಳಿಯು ಸರ್ಕಾರಕ್ಕೆ ತನ್ನ ಶಿಫಾರಸ್ಸನ್ನು ನೀಡಿರುತ್ತದೆ.

ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯು ದಿನಾಂಕ: 06-12-2017ರ ಸಭೆಯಲ್ಲಿ ನೀಡಿರುವ ಸಲಹೆಗಳನ್ನು ಹಾಗೂ ಸಂಬಂಧಿಸಿದ ಇತರೆ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿರುವ ರಾಜ್ಯ ಸರ್ಕಾರವು, ತನಗೆ ಕನಿಷ್ಠ ವೇತನ ಕಾಯ್ದೆ, 1948ರ ಕಲಂ 3(1)(ಬಿ) ಸಹವಾಚಿತ ಕಲಂ 5(1)(ಬಿ) ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ತತ್ಸಂಬಂಧದ ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಕರ್ನಾಟಕ ರಾಜ್ಯಾದ್ಯಂತ **"ಮೆಟಲ್ ರೋಲಿಂಗ್ ಮತ್ತು ರೀ-ರೋಲಿಂಗ್ (ನಾನ್-ಫೆರಸ್) Metal rolling and Re-rolling [Non-Ferrous] Industry"** ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ **ಈ ಅಧಿಸೂಚನೆಯು ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ** ಈ ಕೆಳಕಂಡ ಕನಿಷ್ಠ ವೇತನ ದರಗಳ ಕೋಷ್ಟಕದಲ್ಲಿರುವಂತೆ, ಕನಿಷ್ಠ ವೇತನ ದರಗಳನ್ನು ಈ ಅಧಿಸೂಚನೆಯ ಮೂಲಕ ಪರಿಷ್ಕರಿಸಲಾಗಿರುತ್ತದೆ. ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಪಾವತಿಸಲು, ಕನಿಷ್ಠ ವೇತನ ಕಾಯ್ದೆ-1948ರ ಕಲಂ 12 ರನ್ವಯ ಸಂಬಂಧಿಸಿದ ಎಲ್ಲಾ ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

ಕನಿಷ್ಠ ವೇತನ ದರಗಳ ಕೋಷ್ಟಕ

| ಮೆಟಲ್ ರೋಲಿಂಗ್ ಮತ್ತು ರೀರೋಲಿಂಗ್ (ನಾನ್-ಫೆರಸ್) Metal rolling and Re-rolling [Non-Ferrous] Industry | | | | | | | | |
|---|---|---|---|---|---|---|---|---|
| ಕೆಲಸದ ವರ್ಗೀಕರಣ | ವಲಯ-1 | | ವಲಯ-2 | | ವಲಯ-3 | | ವಲಯ-4 | |
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| **ಅತಿ ಕುಶಲ ಕಾರ್ಮಿಕರು**<br>ಮ್ಯಾನೇಜರ್ (ಪ್ರೊಡಕ್ಷನ್)<br>ಫೋರ್‌ಮನ್, ಟೆಕ್ನಿಕಲ್ ಸೂಪರ್‌ವೈಸರ್, ರೋಲಿಂಗ್ ಬ್ಯಾಲೆಟ್ ಮೇಸ್ತ್ರಿ, ವೆಲ್ಡಿಂಗ್ ಮೇಸ್ತ್ರೀ, ಇತರೆ ಅತಿಕುಶಲ ಕೆಲಸಕ್ಕೆ. | 15423-40 | 593-21 | 14688-95 | 564-96 | 13989-48 | 538-06 | 13323-31 | 512-44 |
| **ಕುಶಲ ಕಾರ್ಮಿಕರು**<br>ರೋಲರ್ ಎಲೆಕ್ಟ್ರೀಷಿಯನ್,<br>ಕ್ಯಾಸ್ಟಿಂಗ್ ಮನ್, ಶೀಟ್ ಕಟ್ಟರ್, ಫಿಟ್ಟರ್, ವೆಲ್ಡರ್ಸ್ ಟೆಕ್ನಿಷಿಯನ್, ಆಪರೇಟರ್ ಮೆಟಲ್ ಕ್ಯಾಪ್ಟರ್, ಟರ್ನರ್ ಮೆಟಲ್ ರೋಲರ್, ಟಾಂಗ್ಸ್‌ಮನ್ ಶೇಪರ್‌ಮನ್,<br>ಕಟ್ಟಿಂಗ್ ಮಷಿನ್ ಆಪರೇಟರ್, ಬ್ಲಾಕ್‌ಸ್ಮಿತ್, ಶೇಪರ್, ಎಲೆಕ್ಟ್ರೀಷಿಯನ್,<br>ಇತರೆ ಕುಶಲ ಕೆಲಸಕ್ಕೆ | 14021-27 | 539-28 | 13353-59 | 513-60 | 12717-71 | 489-14 | 12112-10 | 465-85 |
| **ಅರೆ ಕುಶಲ ಕಾರ್ಮಿಕರು**<br>ಸಹಾಯಕ ಕಾಸ್ಟಿಂಗ್ ಮನ್,<br>ಸಹಾಯಕ ಫಿಟ್ಟರ್, ಸಹಾಯಕ ಟರ್ನರ್, ಸರ್ಕಲ್ ಕಟ್ಟರ್. ಟೋಟ್ ಮನ್, ಕ್ರೇನ್ ಆಪರೇಟರ್, ಪ್ರೆಶರ್‌ಮನ್, ಹುಕ್‌ಮನ್, ಫೈರ್‌ಮನ್, ಇತರೆ ಅರೆ ಕುಶಲ ಕೆಲಸಕ್ಕೆ | 12746-61 | 490-25 | 12139-63 | 466-91 | 11561-55 | 444-68 | 11011-00 | 423-50 |
| **ಅಕುಶಲ ಕಾರ್ಮಿಕರು**<br>ಗ್ರೀಸರ್‌ಮನ್, ಬಟ್ಟಿಮನ್,<br>ಕ್ಯಾಂಡಿಮನಾ, ಹೆಲ್ಪರಾ,<br>ಇತರೆ ಅಕುಶಲ ಕೆಲಸಕ್ಕೆ | 11587-83 | 445-69 | 11036-03 | 424-46 | 10510-50 | 404-25 | 10010-00 | 385-00 |

| ಕಛೇರಿ ಸಿಬ್ಬಂದಿಗಳು ಮತ್ತು ಚಾಲಕರು | | | | | | | | |
|---|---|---|---|---|---|---|---|---|
| ಹುದ್ದೆಗಳ ವಿವರ | ವಲಯ-1 | | ವಲಯ-2 | | ವಲಯ-3 | | ವಲಯ-4 | |
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| ಮ್ಯಾನೇಜರ್, ಪರ್ಸನಲ್ ಆಫೀಸರ್ ಮಾರ್ಕೆಟಿಂಗ್ ಮ್ಯಾನೇಜರ್/ ಕಛೇರಿ ಮೇಲ್ವಿಚಾರಣೆಯ ತತ್ಸಮಾನ ಹುದ್ದೆ, | 16423-00 | 631-00 | 15688-00 | 603-38 | 14989-00 | 576-50 | 14323-00 | 550-88 |
| ಅಸಿಸ್ಟೆಂಟ್ ಮ್ಯಾನೇಜರ್ ಅಸಿಸ್ಟೆಂಟ್ ಪರ್ಸನಲ್ ಮ್ಯಾನೇಜರ್, ಸೀನಿಯರ್ ಅಕೌಂಟೆಂಟ್ ಮತ್ತು ತತ್ಸಮಾನ ಹುದ್ದೆ. | 15423-40 | 593-21 | 14688-95 | 564-96 | 13989-48 | 538-06 | 13323-31 | 512-44 |
| ಹಿರಿಯ ಗುಮಾಸ್ತ, ಕ್ಯಾಷಿಯರ್, ಜಡ್ಜ್ಮೆಂಟ್ ರೈಟರ್, ಸ್ಟೆನೋಗ್ರಾಫರ್, ಸ್ಟೋರ್ ಕೀಪರ್, ರಿಸೆಪ್ಷನಿಸ್ಟ್, (ಸ್ವಾಗತಗಾರರು) ಮತ್ತು ತತ್ಸಮಾನ ಹುದ್ದೆ. | 14021-27 | 539-28 | 13353-59 | 513-60 | 12717-71 | 489-14 | 12112-10 | 465-85 |
| ಕಿರಿಯ ಗುಮಾಸ್ತ , ಬುಕಿಂಗ್ ಗುಮಾಸ್ತ, ಕಂಪ್ಯೂಟರ್ ಆಫರೇಟರ್, ಟೈಪಿಸ್ಟ್, ಟೆಲಿಫೋನ್ ಆಫರೇಟರ್, ಡಾಟಾ ಎಂಟ್ರೀ ಆಫರೇಟರ್ ಮತ್ತು ತತ್ಸಮಾನ ಹುದ್ದೆ. | 12746-61 | 490-25 | 12139-63 | 466-91 | 11561-55 | 444-68 | 11011-00 | 423-50 |
| ಜವಾನ, ವಾಚ್ಮನ್, ಲಿಫ್ಟ್ ಆಫರೇಟರ್, ಆಫೀಸ್ ಬಾಯ್, ಅಟೆಂಡರ್, ಹೆಲ್ಪರ್/ಸಹಾಯಕ, ದಲಾಯತ್, ಮಜ್ದೂರ್, ಸ್ವೀಪರ್ ಮತ್ತು ತತ್ಸಮಾನ ಹುದ್ದೆ. | 11587-83 | 445-69 | 11036-03 | 424-46 | 10510-50 | 404-25 | 10010-00 | 385-00 |
| ಹೆವಿ ವೆಹಿಕಲ್ ಡ್ರೈವರ್, ಟ್ರ್ಯಾಕ್ಟರ್ ಡ್ರೈವರ್ ಬಹು ಆಕ್ಸೆಲ್ ಮತ್ತು ಘನ ವಾಹನ ಚಾಲಕರು, ಅರ್ಥ್ ಮೂವರ್ಸ್ ಚಾಲಕರು, ಕ್ರೇನ್ ಜೋಡಿಸಿದ ವಾಹನ ಚಾಲಕರು, ಟ್ರಾಕ್ಟರ್ ಚಾಲಕರು, ರೋಡ್ ರೋಲರ್ ಮತ್ತು ರಸ್ತೆ ನಿರ್ಮಾಣ ಕಾಮಗಾರಿ ವಾಹನಗಳ ಚಾಲಕರು | 14021-27 | 539-28 | 13353-59 | 513-60 | 12717-71 | 489-14 | 12112-10 | 465-85 |
| ಕಾರ್ ಡ್ರೈವರ್ ಜೀಪ್ ಡ್ರೈವರ್ ಲಘು ವಾಹನ ಚಾಲಕರು | 12746-61 | 490-25 | 12139-63 | 466-91 | 11561-55 | 444-68 | 11011-00 | 423-50 |
| ಟಂ ಟಂ, ತ್ರಿಚಕ್ರ ವಾಹನ ಚಾಲಕರು | 11587-83 | 445-69 | 11036-03 | 424-46 | 10510-50 | 404-25 | 10010-00 | 385-00 |

**ಮೇಲ್ಕಂಡ ಕೋಷ್ಟಕದಲ್ಲಿಯ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ರಾಜ್ಯ ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನಿಗದಿಪಡಿಸಿದ್ದು, ಈ ಎಲ್ಲಾ ಷರತ್ತುಗಳನ್ನು ಯಥಾವತ್ತಾಗಿ ಸಂಬಂಧಿಸಿದ ಉದ್ಯೋಗದಾತರು ಪಾಲಿಸಲು ಬಾಧ್ಯಸ್ಥರಿರುತ್ತಾರೆ;**

1. **ವ್ಯತ್ಯಾಸವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರ ಹಾಗೂ ಪಾವತಿ:** ನಿಗಧಿತ ಕನಿಷ್ಠ ವೇತನಕ್ಕನುಗುಣವಾಗಿ ಪಾವತಿಸಬೇಕಾದ ವ್ಯತ್ಯಸ್ಥವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಉದ್ಯೋಗದಾತರು ಮಾಡತಕ್ಕದ್ದು. ಹಿಂದಿನ ಕ್ಯಾಲೆಂಡರ್ ವರ್ಷದ ಹನ್ನೆರಡು (12) ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ತುಟ್ಟಿಭತ್ಯೆಯನ್ನು ಪ್ರತಿ ವರ್ಷದ ಏಪ್ರಿಲ್ ಮೊದಲನೇ ದಿನಾಂಕದಿಂದ ಅನ್ವಯವಾಗುವಂತೆ ಉದ್ಯೋಗದಾತರು ಪ್ರತಿ ವರ್ಷ ಲೆಕ್ಕಾಚಾರ ಮಾಡಿ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು. ಆದುದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2016 ರಿಂದ ಡಿಸೆಂಬರ್ 2016ರ) ಸರಾಸರಿ ಆಧಾರದ ಮೇಲೆ 2017 ಏಪ್ರಿಲ್ ಒಂದು (1) ನೇ ತಾರೀಖಿನಿಂದ ಜಾರಿಗೆ ಬರುತ್ತದೆ. ಗ್ರಾಹಕ ಬೆಲೆ ಸೂಚ್ಯಾಂಕ 6537 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ ನಾಲ್ಕು (4) ಪೈಸೆಯಂತೆ ಈ ಕೆಳಕಂಡ ವಿಧಾನದನ್ವಯ ಲೆಕ್ಕಾಚಾರ ಮಾಡಿ ತುಟ್ಟಿಭತ್ಯೆಯನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

**ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:–** ಮಾಸಿಕ ತುಟ್ಟಿಭತ್ಯೆ ಹಾಗೂ ದಿನದ ತುಟ್ಟಿಭತ್ಯೆಯನ್ನು ಕೆಳಕಂಡ ಸೂತ್ರಗಳನ್ವಯ ಕ್ರಮವಾಗಿ ಲೆಕ್ಕಾಚಾರ ಮಾಡತಕ್ಕದ್ದು;

**ಅ) ಮಾಸಿಕ ವೇತನವನ್ನು ಪಡೆಯುವವರು:–** ಮಾಸಿಕ ವೇತನ ಪಡೆಯುವ ಕಾರ್ಮಿಕರಿಗೆ ಈ ಕೆಳಕಂಡ ಸೂತ್ರದನ್ವಯ ತುಟಿಭತ್ಯೆಯನ್ನು ಲೆಕ್ಕ ಮಾಡತಕ್ಕದ್ದು ಹಾಗೂ ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸಿ ಪಾವತಿಸತಕ್ಕದ್ದು.

**ಮಾಸಿಕ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x ಮೂವತ್ತು(30) ದಿನಗಳು**

**ಆ) ದಿನಗೂಲಿ ವೇತನ ಪಡೆಯುವವರು :–** ದಿನಗೂಲಿ ಪಡೆಯುವ ಕಾರ್ಮಿಕರಿಗೆ ಮಾಸಿಕ ಕನಿಷ್ಠ ವೇತನ ದರವನ್ನು ಇಪ್ಪತ್ತಾರು (26) ದಿನಗಳಿಂದ ವಿಭಾಗಿಸಿ, {ನಾಲ್ಕು (4) ವಾರದ ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ} ಈ ಕೆಳಕಂಡ ಸೂತ್ರದನ್ವಯ ಲೆಕ್ಕ ಮಾಡತಕ್ಕದ್ದು. ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ ಅರ್ಹರಾದ ಕಾರ್ಮಿಕರಿಗೆ ಪಾವತಿಸತಕ್ಕದ್ದು.

ದಿನದ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x ಮೂವತ್ತು(30) ದಿನಗಳು / ಇಪ್ಪತ್ತಾರು (26)

2. **ಸೇವಾ ಹಿರಿತನ ಪರಿಗಣನೆ ಭತ್ಯೆ :** ಈ ಅಧಿಸೂಚನೆ ಜಾರಿಗೆ ಬಂದ ದಿನಾಂಕದಿಂದ ಯಾವುದೇ ಕಾರ್ಮಿಕನು ಒರ್ವ ಉದ್ಯೋಗದಾತರ ಸಂಸ್ಥೆಯಲ್ಲಿ ಅಥವಾ ಮಾಲೀಕರ ಅಧೀನದಲ್ಲಿ ನಿರಂತರ ಹತ್ತು (10) ವರ್ಷಗಳ ಸೇವೆಯನ್ನು ಸಲ್ಲಿಸಿದಲ್ಲಿ, ತನ್ನ ಪೂರ್ಣಗೊಳಿಸಿದ ಪ್ರತಿ ಹತ್ತು ವರ್ಷದ ಮೇಲ್ಪಟ್ಟ ಸೇವೆಗೆ ಅನುಗುಣವಾಗಿ ಆಯಾ ಕಾರ್ಮಿಕ ವರ್ಗಕ್ಕೆ ನಿಗದಿಪಡಿಸಿರುವ ಒಟ್ಟು ಮಾಸಿಕ ಕನಿಷ್ಠ ಮೂಲ ವೇತನದ ಮೇಲೆ ವರ್ಷವೊಂದರ ಸೇವೆಗೆ ಶೇಕಡಾ ಒಂದು (1) ರಷ್ಟು ಮೊತ್ತವನ್ನು ಸೇವಾ ಹಿರಿತನ ಪರಿಗಣನೆ ಭತ್ಯೆಯನ್ನಾಗಿ ಗರಿಷ್ಠ ಶೇಕಡಾ ಹತ್ತು (10) ರ ಮೇಲ್ಮಿತಿಗೆ ಒಳಪಟ್ಟು ಪಡೆಯಲು ಕಾರ್ಮಿಕರು ಅರ್ಹರಿರುತ್ತಾರೆ. ಪರಂತು ಈ ಅಧಿಸೂಚನೆ ಜಾರಿಗೆ ಬಂದ ದಿನಾಂಕಕ್ಕೆ ಇಪ್ಪತ್ತು (20) ವರ್ಷಕ್ಕಿಂತ ಹೆಚ್ಚಿನ ಸೇವೆಯನ್ನು ಸಲ್ಲಿಸಿದ ಕಾರ್ಮಿಕರಿದ್ದಲ್ಲಿ ಒಂದು ಸಲಕ್ಕೆ ಮಾತ್ರ ಸೇವಾ ಹಿರಿತನ ಮೊತ್ತವನ್ನು ಆಯಾ ಕಾರ್ಮಿಕ ವರ್ಗಕ್ಕೆ ನಿಗಧಿಪಡಿಸಿರುವ ಒಟ್ಟು ಮಾಸಿಕ ಕನಿಷ್ಠ ವೇತನದ ಶೇ 10ರ ಗರಿಷ್ಠಮಿತಿಗೆ ಒಳಪಟ್ಟು ಪಡೆಯಲು ಅರ್ಹರಿರುತ್ತಾರೆ. ಈ ಸೇವಾ ಹಿರಿತನ ಪರಿಗಣನೆ ಭತ್ಯೆಯ ಮೊತ್ತವು ಮೇಲ್ಕಂಡ ಷರತ್ತು ಸಂಖ್ಯೆ 1ರಲ್ಲಿ ವಿಧಿಸಿದ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು ಹೊರತುಪಡಿಸಿ, ಮೂಲವೇತನದ ಆಧಾರದಲ್ಲಿ ನಿಗದಿಪಡಿಸಿದ 'ಸೇವಾ ಹಿರಿತನದ ಪರಿಗಣನೆ ಭತ್ಯೆಯ ಮೊತ್ತ' ವಾಗಿರುತ್ತದೆ.

***ವಿವರಣೆ:*** "ನಿರಂತರ ಸೇವೆಯನ್ನು ಲೆಕ್ಕ ಮಾಡಬೇಕಾದಾಗ ಹಿಂದಿನ ಆರ್ಥಿಕ ವರ್ಷದಲ್ಲಿ, ಸದರಿ ಸಂಸ್ಥೆಯಲ್ಲಿ ಕನಿಷ್ಠ ಎರಡು ನೂರ ನಲವತ್ತು (240) ದಿನಗಳು ಸೇವೆ ಸಲ್ಲಿಸಿದ ಕಾರ್ಮಿಕನು ಸದರಿ ವರ್ಷದಲ್ಲಿ ನಿರಂತರ ಸೇವೆ ಸಲ್ಲಿಸಿರುತ್ತಾನೆಂದು ಉದ್ಯೋಗದಾತರು ಪರಿಗಣಿಸತಕ್ಕದ್ದು"

3. **ಮಹಿಳೆಯರಿಗೆ ಸಮಾನ ವೇತನ :** ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಹಾಗೂ ಸಮ ಪ್ರಮಾಣದ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರಯರಿಗೂ ಸಮಾನ ದರದ ವೇತನಗಳನ್ನು ಉದ್ಯೋಗದಾತರು ಸಮಾನ ವೇತನ ಕಾಯ್ದೆ–1976ರ ಪ್ರಾವಧಾನಗಳನ್ವಯ ಮಹಿಳಾ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು.

4. **ಕಾರ್ಮಿಕರ ಹಕ್ಕುಗಳ ರಕ್ಷಣೆ:** ಯಾವುದೇ ಪ್ರದೇಶ ಅಥವಾ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಈ ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ಕನಿಷ್ಠ ವೇತನದ ದರಗಳಿಗಿಂತ ಹೆಚ್ಚಿನ ವೇತನವನ್ನು ಈಗಾಗಲೇ ಕೈಗಾರಿಕಾ ವಿವಾದಗಳ ಕಾಯ್ದೆ–1947 ರಡಿಯಲ್ಲಿಯ ಒಪ್ಪಂದ, ಕರಾರು ಅಥವಾ ಬೇರೆ ಯಾವುದೇ ರೀತಿಯನ್ವಯ ಪಡೆಯುತ್ತಿದ್ದಲ್ಲಿ, ಸದರಿ ಹೆಚ್ಚಿನ ವೇತನವನ್ನು ಮುಂದುವರೆದು ಪಡೆಯಲು ಕಾರ್ಮಿಕರು ಅರ್ಹರಾಗಿದ್ದು, ಅದನ್ನು ಪಾವತಿಸಲು ಉದ್ಯೋಗದಾತರು ಬಾಧ್ಯಸ್ಥರಿರುತ್ತಾರೆ.

5. **ಸಮರೂಪದ ಕೆಲಸದ ವರ್ಗಗಳಿಗೆ ಸಮನಾದ ವೇತನ:** ಈ ಅಧಿಸೂಚನೆಯಲ್ಲಿ ಕೆಲಸದ ಸ್ವರೂಪದ ವರ್ಗವನ್ನು ನಮೂದಿಸದೇ ಇರುವ ಕೆಲಸದ ಸ್ವರೂಪದ ವರ್ಗಗಳಿಗೆ ಸೇರಿದ ಕಾರ್ಮಿಕರಿಗೆ ಅದೇ ಸ್ವರೂಪದ (ಸಮಾನ) ಕೆಲಸ ನಿರ್ವಹಿಸುತ್ತಿರುವ ಇತರೆ ಕೆಲಸದ ಸ್ವರೂಪದ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಉದ್ಯೋಗದಾತರು ಸಂದಾಯ ಮಾಡತಕ್ಕದ್ದು. ಈ ಕುರಿತು ಯಾವುದೇ ವಿವಾದ ಉದ್ಭವಿಸಿದಲ್ಲಿ, ಸಂಬಂಧಿಸಿದ

ಉದ್ಯೋಗದಾತರು ಒಂದು ತ್ರಿಪಕ್ಷೀಯ (ಸ್ವತಂತ್ರ ಸದಸ್ಯರು–3, ಕಾರ್ಮಿಕ ಪ್ರತಿನಿಧಿಗಳು –3 ಹಾಗೂ ಉದ್ಯೋಗದಾತರು –3, ಹೀಗೆ ಒಟ್ಟು ಒಂಬತ್ತು ಜನರ) ಸಮಿತಿಯನ್ನು ರಚಿಸಿ, ಸದರಿ ಸಮಿತಿಯು ಸ್ವಾಭಾವಿಕ ನ್ಯಾಯತತ್ವಗಳನ್ನು ಪರಿಪಾಲಿಸಿ, ಪಕ್ಷಗಾರರ ವಾದಗಳನ್ನು ಆಲಿಸಿ, ಎಲ್ಲಾ ವಿವಾದಾಂಶಗಳನ್ನು ಹಾಗೂ ಕೆಲಸದ ಕೌಶಲ್ಯದ ವರ್ಗವನ್ನು ಸಹ ವಿಶ್ಲೇಷಿಸಿ ಎರಡು ತಿಂಗಳ ಅವಧಿಯೊಳಗೆ ನೀಡುವ ಕನಿಷ್ಠ ವೇತನ ದರದ ವರದಿಯನ್ವಯ ಕ್ರಮವಹಿಸತಕ್ಕದ್ದು. ಸದರಿ ವರದಿಯ ಅನುಷ್ಠಾನಕ್ಕಾಗಿ "ಸಕ್ಷಮ ಅಧಿಕಾರಿ"ಯನ್ನು ಉದ್ಯೋಗದಾತರು ನಿಯುಕ್ತಿಗೊಳಿಸತಕ್ಕದ್ದು. ಸಕ್ಷಮ ಅಧಿಕಾರಿಯ ವರದಿ ಅನುಷ್ಠಾನ ಕ್ರಮದ ಬಗ್ಗೆ ಅಥವಾ ವರದಿಯ ಬಗ್ಗೆ ವಿವಾದವಿದ್ದಲ್ಲಿ, ಈ ಕುರಿತು "ಮೇಲ್ಮನವಿ ಪ್ರಾಧಿಕಾರಿ"ಯನ್ನು ಸಹ ನಿಯುಕ್ತಿಗೊಳಿಸಿ, ಉದ್ಯೋಗದಾತರು ಅಧಿಸೂಚನೆಯನ್ನು ಹೊರಡಿಸತಕ್ಕದ್ದು. ಒಂದು ತಿಂಗಳ ಕಾಲಮಿತಿಯೊಳಗೆ 'ಸಕ್ಷಮ ಪ್ರಾಧಿಕಾರಿ' ಹಾಗೂ 'ಮೇಲ್ಮನವಿ ಪ್ರಾಧಿಕಾರಿ' ಗಳು ಸ್ವಾಭಾವಿಕ ನ್ಯಾಯತತ್ವಗಳನ್ವಯ ಪ್ರಕರಣಗಳ ಇತ್ಯರ್ಥಕ್ಕೆ ಕ್ರಮವಹಿಸತಕ್ಕದ್ದು. 'ಮೇಲ್ಮನವಿ ಪ್ರಾಧಿಕಾರಿ' ಯ ನಿರ್ಣಯವು ಅಂತಿಮವಾಗಿದ್ದು, ಅದನ್ನು ಪಾಲಿಸಲು ಎಲ್ಲಾ ಪಕ್ಷಗಾರರು ಬಾಧ್ಯಸ್ಥರಿರುತ್ತಾರೆ.

6. **ಕನಿಷ್ಠ ವೇತನ ಸ್ವೀಕರಿಸುವ ಹಕ್ಕಿನ ರಕ್ಷಣೆ:** ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ ಎಂಟು (8) ಗಂಟೆಗಳ ಕೆಲಸದ ವೇತನವು ಅದೇ ಸ್ವರೂಪದ (ತರಹದ) ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರದಂತೆ ಉದ್ಯೋಗದಾತರು ಕ್ರಮವಹಿಸತಕ್ಕದ್ದು. ಈ ಬಗ್ಗೆ ವಿವಾದವಿದ್ದಲ್ಲಿ ಮೇಲ್ಕಂಡ ಷರತ್ತು ಸಂಖ್ಯೆ–5 ರಲ್ಲಿಯ ವಿವಾದ–ಪರಿಹಾರ ವ್ಯವಸ್ಥೆಯನ್ನು ಉದ್ಯೋಗದಾತರು ಸೃಷ್ಟಿಸಿ, ಕಾನೂನುಸಮ್ಮತ ಪರಿಹಾರವನ್ನು ರೂಪಿಸತಕ್ಕದ್ದು.

7. **ದುಡಿಮೆಯ ಅವಧಿಯ ಪ್ರಮಾಣಕ್ಕನುಗುಣವಾಗಿ ಕನಿಷ್ಠ ವೇತನ:** ಒಂದು ದಿನದ ಕೆಲಸ ಎಂದರೆ ಎಂಟು (8) ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು ಎಂಟು (8) ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಥವಾ ಕಾರ್ಮಿಕರು ಕೆಲಸ ನಿರ್ವಹಿಸಿದ್ದಲ್ಲಿ, ಅಂತಹ ಕಡಿಮೆ ಅವಧಿಯ ಪ್ರಮಾಣಕ್ಕನುಗುಣವಾಗಿ ಕನಿಷ್ಠ ವೇತನವನ್ನು ಕರ್ನಾಟಕ ಕನಿಷ್ಠ ವೇತನ ನಿಯಮಗಳು, 1958ರ ನಿಯಮ 27 ರನ್ವಯ ಆ ಕೆಲಸದ ವರ್ಗಕ್ಕೆ ನಿಗದಿಪಡಿಸಿರುವ ದಿನವೊಂದರ ಕನಿಷ್ಠ ವೇತನವನ್ನು ಗಂಟೆಗಳ ಕನಿಷ್ಠ ವೇತನವನ್ನಾಗಿ ಲೆಕ್ಕ ಹಾಕಿ, ಸಂಬಂಧಿಸಿದ ಕಾರ್ಮಿಕರಿಗೆ ಉದ್ಯೋಗದಾತರು ಪಾವತಿಸತಕ್ಕದ್ದು.

8. **ಕನಿಷ್ಠ ವೇತನದ ಪಾವತಿಯ ವಿಧಾನ** : ನಿಗಧಿತ ಕನಿಷ್ಠ ವೇತನದ ಮೂಲವೇತನ ಹಾಗೂ ತುಟ್ಟಿಭತ್ಯೆ ಲೆಕ್ಕಾಚಾರದಲ್ಲಿ ರೂಪಾಯಿಯ ಭಾಗಾಂಶವು ಬಂದ ಪಕ್ಷದಲ್ಲಿ ಅದನ್ನು ಸಮೀಪದ ಹೆಚ್ಚಿನ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ, ಕಾರ್ಮಿಕರಿಗೆ ಪಾವತಿಸತಕ್ಕದ್ದು.

9. **ಬ್ಯಾಂಕ್ ಖಾತೆಯ ಮೂಲಕ ವೇತನ ಪಾವತಿ:** ವೇತನ ಪಾವತಿ ಕಾಯ್ದೆ–1936ರ ಕಲಂ 6 ರ ಪ್ರಾವಧಾನದ ಅನ್ವಯ ಕಾರ್ಮಿಕರಿಗೆ ವೇತನವನ್ನು ಉದ್ಯೋಗದಾತರು ನೇರವಾಗಿ ಕಾರ್ಮಿಕರ ಬ್ಯಾಂಕ್ ಖಾತೆಗೆ ವರ್ಗಾಯಿಸುವ ಮೂಲಕ ಪಾವತಿಸತಕ್ಕದ್ದು.

10. **ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನ ದರಗಳ ಅನ್ವಯಿಸುವಿಕೆ:** ಈ ಅನುಸೂಚಿತ ಉದ್ದಿಮೆಗೆ ಒಳಪಡುವ ಸಂಸ್ಥೆಗಳಲ್ಲಿ ಹೊರಗುತ್ತಿಗೆ ವ್ಯವಸ್ಥೆಯ ಮೂಲಕ ಗುತ್ತಿಗೆ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ–1970 ಹಾಗೂ ಇತರೆ ಶಾಸನಬದ್ಧ ವ್ಯವಸ್ಥೆಗಳನ್ವಯ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೂ ಕೂಡಾ ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಉದ್ಯೋಗದಾತರು ಅನ್ವಯಿಸಿ, ಪಾವತಿಯನ್ನು ಮಾಡತಕ್ಕದ್ದು.

11. **ಸಾಮಾಜಿಕ ಭದ್ರತೆಯ ಕಾಯ್ದೆಗಳಡಿಯಲ್ಲಿ ಉದ್ಯೋಗದಾತರ ವಂತಿಗೆಯ ಪಾವತಿ:** ಕನಿಷ್ಠ ವೇತನದ ಮೊತ್ತವು (ಮೂಲ ವೇತನ + ತುಟ್ಟಿಭತ್ಯೆ) ಕರ್ತವ್ಯ ನಿರ್ವಹಿಸಿದ ಕಾರ್ಮಿಕನ ಅರ್ಜಿತ ವೇತನವಾಗಿದ್ದು, ಉದ್ಯೋಗದಾತರು ಈ ಕೆಳಕಂಡ ಕಾಯ್ದೆಗಳಡಿಯಲ್ಲಿ ಪಾವತಿಸಬೇಕಾದ **"ಉದ್ಯೋಗದಾತರ ವಂತಿಗೆ"** ಯನ್ನು ಕಾರ್ಮಿಕರ ಅರ್ಜಿತ ಕನಿಷ್ಠ ವೇತನದ ಮೊತ್ತದಿಂದ ಕಡಿತಗೊಳಿಸದೆ, ಪ್ರತ್ಯೇಕವಾಗಿ ಉದ್ಯೋಗದಾತರ ಸಂಪನ್ಮೂಲದಿಂದಲೇ ಪಾವತಿ ಮಾಡತಕ್ಕದ್ದು;

1. ನೌಕರರ ರಾಜ್ಯ ವಿಮಾ ಕಾಯ್ದೆ–1948
2. ನೌಕರರ ಭವಿಷ್ಯ ನಿಧಿ ಹಾಗೂ ಇತರೆ ಪ್ರಾವಧಾನಗಳ ಕಾಯ್ದೆ–1952

12. **ರಜಾದಿನದಲ್ಲಿಯ ದುಡಿಮೆಯ ವೇತನ** : ಉದ್ಯೋಗದಾತರ ಸಂಸ್ಥೆಯಲ್ಲಿ ಶಾಸನದನ್ವಯ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ, 1948 ಮತ್ತು ಅದರಡಿಯ ಕರ್ನಾಟಕ ನಿಯಮಗಳಲ್ಲಿಯ ಪ್ರಾವಧಾನಗಳು ಹಾಗೂ ಕರ್ನಾಟಕ ಔದ್ಯೋಗಿಕ ಸಂಸ್ಥೆಗಳು (ರಾಷ್ಟ್ರೀಯ ಮತ್ತು ಹಬ್ಬದ ರಜಾದಿನಗಳ) ಕಾಯ್ದೆ–1963ರ ಪ್ರಾವಧಾನಗಳನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

13. **ಹೆಚ್ಚುವರಿ ಅವಧಿ ದುಡಿಮೆಯ ವೇತನ:** ಕೆಲಸಗಾರರು ದಿನದ ನಿಗಧಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಕಾರ್ಮಿಕರಿಗೆ ಹೆಚ್ಚುವರಿ ಅವಧಿಯ ಕೆಲಸಕ್ಕೆ ಕನಿಷ್ಠ ವೇತನ ಕಾಯ್ದೆ–1948 ರ ಕಲಂ 14 ರನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು

14. **ಅಪ್ರೆಂಟೈಸ್ ಅವಧಿಯ ವೇತನ** : ಯಾವುದೇ ಉದ್ಯೋಗದಾತರ ಸಂಸ್ಥೆಯಲ್ಲಿ ಸೇವಾನುಭವ ಪಡೆಯುವುದಕ್ಕಾಗಿ ದಿ ಅಪ್ರೆಂಟೈಸ್ ಕಾಯ್ದೆ –1961 ರ ಪ್ರಾವಧಾನಗಳನ್ವಯ ತರಬೇತಿ ಪಡೆಯುವ ಅಪ್ರೆಂಟೈಸ್‌ಗಳಿಗೆ ದಿ ಅಪ್ರೆಂಟೈಸ್ ಕಾಯ್ದೆ –1961 ರ ಪ್ರಾವಧಾನಗಳನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

15. **ಸ್ಥಾಯಿ ಆದೇಶಗಳಲ್ಲಿಯ ಪ್ರಾವಧಾನಗಳನ್ವಯ ತರಬೇತಿ ಅವಧಿಯ ವೇತನ:** ಯಾವುದೇ ಉದ್ಯೋಗದಾತರ ಸಂಸ್ಥೆಯಲ್ಲಿ ತರಬೇತಿ, ಪಡೆಯುವ ಉದ್ಯೋಗಿಗಳಿಗೆ ಔದ್ಯೋಗಿಕ ಉದ್ಯೋಗಗಳ (ಸ್ಥಾಯಿ ಆದೇಶಗಳ) ಕಾಯ್ದೆ, 1946 ಹಾಗೂ ಅದರಡಿಯ ಕರ್ನಾಟಕ ನಿಯಮಗಳನ್ವಯ ಪ್ರಮಾಣೀಕೃತ ಸ್ಥಾಯಿ ಆದೇಶಗಳಲ್ಲಿ ಅಥವಾ ಮಾದರಿ ಸ್ಥಾಯಿ ಆದೇಶಗಳಲ್ಲಿ ನಿಗಧಿತವಾದ "ತರಬೇತಿ ಅವಧಿ" ಯಲ್ಲಿ ಈ ಅಧಿಸೂಚನೆಯ ಮೂಲಕ ನಿಗಧಿಗೊಳಿಸಿದ ಕನಿಷ್ಠ ವೇತನದ ಶೇಕಡಾ 75 (ಎಪ್ಪತ್ತೈದು) ರಷ್ಟು ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

16. **ಸರ್ಕಾರದ ಯೋಜನೆ / ಕಾರ್ಯಕ್ರಮದಡಿಯಲ್ಲಿ ಹಾಗೂ ಸಾಮಾನ್ಯ ತರಬೇತಿಯ ಅವಧಿಯ ವೇತನ:** ಮೇಲ್ಕಂಡ ಷರತ್ತು ಸಂಖ್ಯೆ 11 ಹಾಗೂ 12 ನ್ನು ಹೊರತುಪಡಿಸಿ, ತರಬೇತಿ ಪಡೆಯುವ ಉದ್ಯೋಗಿಗಳಿಗೆ (ಟ್ರೈನಿಗಳಿಗೆ) ಈ ಅಧಿಸೂಚನೆಯಡಿ ನಿಗಧಿಪಡಿಸಿದ ಕೆಲಸದ ಸ್ವರೂಪಗಳಿಗೆ ನಿಗಧಿಪಡಿಸಿರುವ ಕನಿಷ್ಠ ವೇತನವನ್ನು ಪಾವತಿಸತಕ್ಕದ್ದು. ಕೇಂದ್ರ ಸರ್ಕಾರ/ರಾಜ್ಯ ಸರ್ಕಾರ ಯಾವುದೇ ತರಬೇತಿಗಾಗಿ ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ರೂಪಿಸಿದ್ದು, ಸದರಿ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಉದ್ಯೋಗದಾತರು ಅನುಷ್ಠಾನಗೊಳಿಸುತ್ತಿದ್ದಲ್ಲಿ, ಸದರಿ ಯೋಜನೆಗಳಡಿಯಲ್ಲಿ/ಕಾರ್ಯಕ್ರಮದಡಿಯಲ್ಲಿ ನಿಗಧಿಪಡಿಸಿರುವ ವೇತನವನ್ನು ಉದ್ಯೋಗದಾತರು ತರಬೇತಿ ಪಡೆಯುವವರಿಗೆ ಪಾವತಿಸತಕ್ಕದ್ದು.

17. **ರೂಢಿಗತ ಸೌಲಭ್ಯಗಳ ಮುಂದುವರಿಕೆ:** ಅಧಿಸೂಚಿತ ಕನಿಷ್ಠ ವೇತನಕ್ಕೆ ಹೆಚ್ಚುವರಿಯಾಗಿ ರೂಡಿ ಮತ್ತು ಪದ್ಧತಿಯನ್ವಯ ವಸ್ತು ರೂಪದಲ್ಲಿ ಯಾವುದೇ ಸಂಭಾವನೆಯನ್ನು ಉದ್ಯೋಗದಾತರಿಂದ ಕಾರ್ಮಿಕರು ಪಡೆಯುತ್ತಿದ್ದಲ್ಲಿ, ಸದರಿ ಹೆಚ್ಚುವರಿ ವಸ್ತು ರೂಪದ ಸಂಭಾವನೆಯನ್ನು ಮುಂದುವರೆಸಲು ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

18. **ದಿವ್ಯಾಂಗ ಕಾರ್ಮಿಕರ ವೇತನ:** ವಿಕಲಚೇತನ ವ್ಯಕ್ತಿಗಳು ಕೆಲಸ ನಿರ್ವಹಿಸುತ್ತಿದ್ದಲ್ಲಿ ಸದರಿ ಕೆಲಸವನ್ನು ನಿರ್ವಹಿಸುತ್ತಿರುವ ಇತರೆ ಸಾಮಾನ್ಯ ಕಾರ್ಮಿಕರು ಪಡೆಯುತ್ತಿರುವ ವೇತನಕ್ಕೆ ಸಮನಾಗಿ ವೇತನವನ್ನು ಪಡೆಯಲು ವಿಕಲಚೇತನ (ದಿವ್ಯಾಂಗ) ಕಾರ್ಮಿಕರು ಅರ್ಹರಾಗಿದ್ದು, ಇದನ್ನು ವಿಕಲಾಂಗ ವ್ಯಕ್ತಿಗಳು (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಹಾಗೂ ಪೂರ್ಣ ಭಾಗವಹಿಸುವಿಕೆ) ಕಾಯ್ದೆ–1995 ರ ಪ್ರಾವಧಾನಗಳ ಹಿನ್ನೆಲೆಯಲ್ಲಿ ಪಾವತಿಸಲು ಉದ್ಯೋಗದಾತರು ಕ್ರಮವಹಿಸತಕ್ಕದ್ದು.

19. **ಕನಿಷ್ಠ ವೇತನ ಮೊತ್ತದ ಕಡ್ಡಾಯ ಪಾವತಿ:** ಕರ್ತವ್ಯ ನಿರ್ವಹಿಸಿದ ಕಾರ್ಮಿಕರಿಗೆ ಪಾವತಿ ಮಾಡುವ ಒಟ್ಟು ವೇತನವು, ಈ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ಕನಿಷ್ಠ ವೇತನ ದರಗಳನ್ನು ಮತ್ತು ಕಾಲ ಕಾಲಕ್ಕೆ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು ಸೇರ್ಪಡಿಸಿದಾಗ ಬರುವ ಮೊತ್ತಕ್ಕೆ ಕಡಿಮೆಯಾಗದಂತೆ ವೇತನವನ್ನು ಕಡ್ಡಾಯವಾಗಿ ಉದ್ಯೋಗದಾತರು ಪಾವತಿಸತಕ್ಕದ್ದು.

20. **ಕಾರ್ಮಿಕರ ಕೆಲಸದ ಸ್ವರೂಪಗಳ ವರ್ಗೀಕರಣ:** ಕಾರ್ಮಿಕರು ಉದ್ಯೋಗದಾತರ ಸಂಸ್ಥೆಯಲ್ಲಿ ನಿರ್ವಹಿಸುವ ಕೆಲಸದ ಸ್ವರೂಪವನ್ನು ಅವರ ಕೌಶಲ್ಯಗಳಿಗನುಗುಣವಾಗಿ ನಾಲ್ಕು (04) ವರ್ಗಗಳಲ್ಲಿ ವಿಂಗಡಿಸಿದ್ದು, ಅದರ ಸಾಮಾನ್ಯ ವ್ಯಾಖ್ಯಾನ ಈ ಕೆಳಗಿನಂತಿದೆ;

**ಅ. ಅತಿ ಕುಶಲ:** ಅತಿ ಕುಶಲ ಕೆಲಸಗಾರರು ಎಂದರೆ ಯಾರು ಹೆಚ್ಚಿನ ನೈಪುಣ್ಯತೆ ಕೆಲಸವನ್ನು ಅತಿ ಹೆಚ್ಚು ನಿಖರವಾಗಿ ಮಾಡಬಲ್ಲವರಾಗಿದ್ದು, ನಕ್ಷೆಯನ್ನು ಓದಬಲ್ಲ ಮತ್ತು ಅದರ ಆಧಾರದ ಮೇಲೆ ಕೆಲಸ ಮಾಡಬಲ್ಲವರಾಗಿದ್ದು, ಅವರ ವಿಭಾಗದ 'ಕುಶಲ' ಮತ್ತು ಇತರೇ ಕೆಲಸಗಾರರ ಕೆಲಸವನ್ನು ನಿರ್ದೇಶಿಸಬಲ್ಲ ಸಾಮರ್ಥ್ಯವುಳ್ಳವರಾಗಿದ್ದು, ಆ ವಿಭಾಗದ ಕೆಲಸವನ್ನು ಸ್ವತಂತ್ರವಾಗಿ ನಿರ್ವಹಿಸಿ ಕೊಂಡು ಹೋಗಬಲ್ಲವರಾಗಿರಬೇಕು.

**ಆ. ಕುಶಲ:** ಕುಶಲ ಕೆಲಸಗಾರರು ಅಂದರೆ ಸ್ವತಂತ್ರವಾಗಿ ಹಾಗೂ ಪರಿಣಾಮಕಾರಿಯಾಗಿ ಮತ್ತು ಕೆಲಸವನ್ನು ಸರಿಯಾಗಿ ಮಾಡಬಲ್ಲ ಸಾಮರ್ಥ್ಯವುಳ್ಳ ಕಾರ್ಮಿಕ. ಅವಶ್ಯ ಬಿದ್ದರೆ ಸರಳವಾದ ನಕ್ಷೆಗಳನ್ನು ಓದಿ, ಕೆಲಸ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.

**ಇ. ಅರೆ ಕುಶಲ :** ತನ್ನ ಕಸುಬಿನ ಬಗ್ಗೆ ಸಾಕಷ್ಟು ಜ್ಞಾನವಿರುವ ಹಾಗೂ ಪುನರಾವರ್ತನೆ ಕೆಲಸ ಮಾಡುವ ಸಾಮರ್ಥ್ಯವುಳ್ಳ ಹಾಗೂ ಯಂತ್ರೋಪಕರಣಗಳ ಸಹಾಯದಿಂದ ಸರಳವಾದ ಕೆಲಸಗಳನ್ನು ಮಾಡಬಲ್ಲವರು.

**ಈ. ಕುಶಲರಲ್ಲದವರು :** ಸ್ವತಂತ್ರವಾದ ನಿರ್ಣಯದ ಅವಶ್ಯಕತೆಯಿಲ್ಲದ ಅಥವಾ ಹಿಂದಿನ ಅನುಭವ ಇಲ್ಲದೆ ಆದರೆ ಉದ್ಯೋಗದ ವಾತಾವರಣದ ಪರಿಚಯವಿದ್ದು ಕೆಲಸ ಮಾಡುವುದು, ದೈಹಿಕ ಪರಿಶ್ರಮವಿಲ್ಲದೆ ವಿವಿಧ ರೀತಿಯ ವಸ್ತುಗಳು ಮತ್ತು ಸಾಮಾನ್ಯ ಜ್ಞಾನವಿರುವ ಕೆಲಸವನ್ನು ಮಾಡುವವರು.

21. **ಭೌಗೋಳಿಕ ಪ್ರದೇಶಗಳ ವರ್ಗೀಕರಣ:** ಕನಿಷ್ಠ ವೇತನ ದರಗಳನ್ನು ರಾಜ್ಯದ ನಾಲ್ಕು (04) ಭೌಗೋಳಿಕ ಪ್ರದೇಶವಾರು ಆಧಾರದ ಮೇಲೆ ಅಧಿಸೂಚಿಸಲಾಗಿದ್ದು, ಈ ಭೌಗೋಳಿಕ ಪ್ರದೇಶಗಳ ವಿವರಣೆಯನ್ನು ಈ ಕೆಳಕಂಡಂತೆ ನೀಡಲಾಗಿರುತ್ತದೆ;

| | | |
|---|---|---|
| ಅ | **ವಲಯ – 1** | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿಯ ಅಧಿಸೂಚಿತ ಪ್ರದೇಶಗಳು. |
| ಆ | **ವಲಯ – 2** | ವಲಯ–1 ಅನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಮಹಾನಗರಪಾಲಿಕೆಗಳ ವ್ಯಾಪ್ತಿಯಲ್ಲಿಯ ಅಧಿಸೂಚಿತ ಪ್ರದೇಶಗಳು. |
| ಇ | **ವಲಯ – 3** | ವಲಯ–1 ಹಾಗೂ ವಲಯ–2 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು. |
| ಈ | ವಲಯ – 4 | ವಲಯ–1, ವಲಯ–2 ಮತ್ತು 3 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಇತರೆ ಎಲ್ಲಾ ಪ್ರದೇಶಗಳು. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ.

**ಎಲ್.ಎಸ್. ಶ್ರೀಕಂಠಬಾಬು,**

ಸರ್ಕಾರದ ಉಪ ಕಾರ್ಯದರ್ಶಿ,

ಕಾರ್ಮಿಕ ಇಲಾಖೆ.

**PR-53**

**SC-200**